Digitization by eGangotri and Sarayu Trust. Funding by MoE-IKS

ಶ್ರೀ:

ಗೌತಮಕ್ಷೇತ್ರ ಪಶ್ಚಿಮ

ಶ್ರೀರಂಗನಾಥಸ್ವಾಮಿ ದೇವಸ್ಥಾನ

(ಪರಿಸರದ ದೇವಸ್ಥಾನಗಳೂ ಸಹ)

೧. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ

೨. ಶ್ರೀ ಗಂಗಾಧರೇಶ್ವರಸ್ವಾಮಿ ದೇವಸ್ಥಾನ

ಶ್ರೀರಂಗಪಟ್ಟಣ

ಸಂಪಾದಕರು

ಶ್ರೀಮತ್ಪರಮಹಂಸೇತ್ಯಾದಿ
ಮೇಲುಕೋಟೆ ಶ್ರೀಯದುಗಿರಿ ಯತಿರಾಜ ಸಂಪತ್ಕುಮಾರ
ರಾಮಾನುಜ ಜೀಯರ್ ಸ್ವಾಮಿಗಳು

033,6x1,1
N5

ಪ್ರಕಾಶಕರು

ಯದುಗಿರಿ ಯತಿರಾಜಮಠ

ಮಲ್ಲೇಶ್ವರಂ—ಬೆಂಗಳೂರು.

1995 ಬೆಲೆ ರೂ. 25/-

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

033,6xL,1 8805
N5
Ramanuja Jeyarswamy
ed.
Srirangánathaswamy
Devss.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀರಂಗನಾಥಸ್ವಾಮಿ ದೇವಸ್ಥಾನ

(ಪರಿಸರದ ದೇವಸ್ಥಾನಗಳೂ ಸಹ)

೧. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ
೨. ಶ್ರೀ ಗಂಗಾಧರೇಶ್ವರಸ್ವಾಮಿ ದೇವಸ್ಥಾನ

ಶ್ರೀರಂಗಪಟ್ಟಣ

ಸಂಪಾದಕರು

ಶ್ರೀಮತ್ಪರಮಹಂಸೇತ್ಯಾದಿ
ಮೇಲುಕೋಟೆ ಶ್ರೀಯದುಗಿರಿ ಯತಿರಾಜ ಸಂಪತ್ಕುಮಾರ
ರಾಮಾನುಜ ಜೀಯರ್‌ಸ್ವಾಮಿಗಳು

1995

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

033,6x1,1
N5

S.J.V.J. PRATISHTHAN
LIBRARY
Jangamawadimath, Varanasi
Acc. No.

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8805

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ

ಶ್ರೀಮತೇ ರಾಮಾನುಜಾಯ ನಮಃ

ಸಮರ್ಪಣೆ

ಪರಮಪೂಜ್ಯರೂ, ವಿದ್ವದ್ವರ್ಯರೂ, ಆಗಮಶಾಸ್ತ್ರಪಾರಂಗತರೂ
ಶ್ರೀ ಯದುಗಿರಿ ಯತಿರಾಜ ಮಠಾಧೀಶ್ವರರೂ
ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯ ಉಭಯ ವೇದಾಂತ ಪ್ರವರ್ತಕಾಚಾರ್ಯರಾದ

ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಮುನಿವರ್ಯರು
(ವಿದ್ವಾನ್ ಶ್ರೀ ಆಸೂರಿ ಅನಂತಾಚಾರ್ಯಸ್ವಾಮಿ)
(1859 - 1943)

ಅವರ ಪೂರ್ವಾಶ್ರಮ ಜ್ಯೇಷ್ಠ ಕುಮಾರರೂ ನಮ್ಮ ಪೂರ್ವಾಶ್ರಮ ಭ್ರಾತೃವರ್ಯರಾದ
ಆಸೂರಿ ಸಂಪತ್ಕುಮಾರಾಚಾರ್ಯರ
(1896 - 1972)
ದಿವ್ಯ ಪಾದಾರವಿಂದಗಳಲ್ಲಿ
ಅವರಿಂದಲೇ ಕ್ರೋಢೀಕರಿಸಿ ರಚಿಸಲ್ಪಟ್ಟ ಈ ಗ್ರಂಥವನ್ನು ಅವರ ೯೮ ನೆಯ ವರ್ಷ ವರ್ಧಂತ್ಯುತ್ಸವದ ಸ್ಮಾರಕವಾಗಿ ಭಾವ ಸಂ. ಮಕರಮಾಸ ಹಸ್ತ ನಕ್ಷತ್ರದಲ್ಲಿ ಮುದ್ರಿಸಿ ಭಕ್ತಿಪೂರ್ವಕವಾಗಿ ಸಮರ್ಪಿಸಿರುತ್ತೇವೆ.

ಆಸೂರಿ ಶ್ರೀನಿವಾಸಯ್ಯಂಗಾರ್ಯ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ :

ಶ್ರೀ ಶ್ರೀ ಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್ ಸ್ವಾಮಿಗಳು ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿಯ ದೇವಾಲಯದ ಬಗ್ಗೆ ಬರೆದ ಪುಸ್ತಕಕ್ಕೆ ಮುನ್ನುಡಿ ಬರೆಯಲು ಹೇಳಿದ್ದು ನನ್ನ ಪಟ್ಟಿಗೆ ಮಿತಿ ಮೀರಿದ ಗೌರವದ ಕೆಲಸವಾಗಿದೆ, ಗಂಗರ ಸಾಮಂತ ತಿರುಮಲಯ್ಯ ಎಂಬಾತನು 894 ರಲ್ಲಿ ಈ ದೇವಾಲಯವನ್ನು ಕಂಡನೆಂದು ಒಂದು ಶಾಸನದಲ್ಲಿ ಹೇಳಿರುವುದು. 1120 ರಲ್ಲಿ ಹೊಯ್ಸಳ, ವಿಷ್ಣುವರ್ಧನನ ಸೋದರ ಉದಯಾದಿತ್ಯ ಈ ದೇವಾಲಯವನ್ನು ವಿಸ್ತರಿಸಿದ ಮೈಸೂರಿನ ಅರಸರ ಕಾಲದಲ್ಲಿ 1510 ರಿಂದ 1799 ರ ವರೆಗೆ ರಾಜಧಾನಿಯಾಗಿ ಮೆರೆದು ಈ ನಗರವು ರಾಜರ ಕೈವಶದಿಂದ ವಿಸ್ತಾರ ಮಹತಿ ಪೊಂದಿತು. ಹೈದರನ ಕಾಲದಲ್ಲಿ ಮದ್ದಿನ ಮನೆಗೆ ಬೆಂಕಿಬಿದ್ದು ಸ್ಫೋಟಿಸಿದಾಗ ಈ ದೇವಾಲಯವು ಹಾನಿಗೊಳಗಾಯಿತು, ಅದು ದುರಸ್ತಿಗೊಳಿಸಲಾಯಿತು. ರಾಜಧಾನಿಯಲ್ಲಿ ಇರುವ ದೇವರ ಅನುಗ್ರಹ ಪಡೆಯದೆ ಹೈದರಾಲಿಯಾಗಲಿ, ವಿಷ್ಣುವಾಗಲಿ ಅರಸರಾಗಿ ಜನರ ಬೆಂಬಲ ಪಡೆಯಲು ಸಾಧ್ಯವಿರುವುದಿಲ್ಲ ಎಂದು ಆದಿರಂಗನಾದ ಶ್ರೀರಂಗನನ್ನು ಕುರಿತು ಪುರಂದರದಾಸರು ಇದುವೆ ವೈಕುಂಠವೆಂದು ಹಾಡಿ,ಕಾವೇರಿಯನ್ನೇ ವೈಕುಂಠದ ವಿರಜಾನದಿ ಎಂದಿದ್ದಾರೆ.

1000 ವರ್ಷಗಳಿಗೂ ದೀರ್ಘಕಾಲ ಬೆಳೆದ ಈ ದೇವಾಲಯದ ಪೌರಾಣಿಕ ಇತಿವೃತ್ತ ಆಗಮಿಕ ವೈಶಿಷ್ಟ್ಯ, ಶಿಲ್ಪ ವೈವಿಧ್ಯ ಹಾಗೂ ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಒಳಗೊಂಡ ಶ್ರೀ ಶ್ರೀಗಳ ಈ ವಿದ್ವತ್ಪೂರ್ಣ ಪುಸ್ತಕವು ಭಕ್ತರಿಗೂ ಜ್ಞಾನಿಗಳಿಗೂ, ಇತಿಹಾಸ ಪ್ರೇಮಿಗಳಿಗೂ ಪ್ರಿಯವಾಗುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಸ್ವಾಮಿಜಿಯವರು ಹಿಂದೆ ಪುರಾತತ್ತ್ವ ಇಲಾಖೆಯಲ್ಲಿ ದುಡಿದವರು, ಸಂಸ್ಕೃತ ಪಾಂಡಿತ್ಯ ಉಳ್ಳವರು. ಶ್ರೀರಂಗನ ಭಕ್ತರು ಇದರ ಮೇಲಾದ ಎಲ್ಲ ಸಂಸ್ಕಾರಗಳೂ ಈ ಪುಸ್ತಕದಲ್ಲಿ ಪ್ರತಿಬಿಂಬಿಸಿರುವುದು. ಇಂಥ ಬರವಣಿಗೆಯ ಭಕ್ತಿ ಕೈಂಕರ್ಯ ಮಾಡಿದ ಅವರನ್ನು ಅಭಿನಂದಿಸಲು ನನಗೆ ಯೋಗ್ಯತೆ ಇರುವುದಿಲ್ಲ. ಮಹಾಪ್ರಸಾದವೆಂದು ಓದಿದ್ದೇನೆ.

ಸಿಗುವುದು ಮಹಾಪ್ರಸಾದ, ಜೊತೆಗೆ ಜ್ಞಾನವೃದ್ಧಿ ನ ಹಿ ಜ್ಞಾನೇನ ಸದೃಶಂ

ಶ್ರೀಸ್ವಾಮಿಜಿಯವರಂಥ ವಿದ್ವಾಂಸರಿಂದ ಇಂಥ ಕೃತಿಗಳು ಬರಲಿ; ಅದಕ್ಕೆ ಬೆಂಬಲ ಸಾರ್ವತ್ರಿಕವಾಗಿ ಸಿಗುವುದು ಅದೃಷ್ಟವು. ಇದಕ್ಕೆ ಹಣಬೇಕು. ಶ್ರೀ ಅನುಗ್ರಹ ಬೇಕು. ಜನ ಉದಾರರಾಗಿ ಈ ಕಾರ್ಯಮಾಡಲಿ ಎಂದು ಹಾರೈಸಿ ಇಂಥ ಕೃತಿ ಬರೆದ ಶ್ರೀ ಸ್ವಾಮಿಜಿಯವರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು.

798 ಕೀರ್ತಿ
ಆರನೆಯ ಕ್ರಾಸ್-ಹನ್ನೊಂದನೆಯ ಮೇನ್
ಹನುಮಂತ ನಗರ, ಬೆಂಗಳೂರು-19

ಡಾ|| ಸೂರ್ಯನಾಥ ಕಾಮತ್
ಪ್ರಧಾನ ಸಂಪಾದಕರು,
ರಾಜ್ಯ ವಿಚಾರ ಕೋಶ ಕರ್ನಾಟಕ ಸರಕಾರ
1995

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೀಠಿಕೆ

ಪ್ರತಿಯೊಬ್ಬ ವ್ಯಕ್ತಿಯೂ, ತನ್ನ ಧರ್ಮ ಸಂಪ್ರದಾಯ ಮತ್ತು ನಂಬಿಕೆಗಳಿಗೆ ಅನುಸಾರವಾಗಿ ಭಗವಂತನ ಯಾವುದಾದರೊಂದು ರೂಪದ ಸ್ಮರಣೆ, ಧ್ಯಾನ, ದರ್ಶನ, ಪೂಜಾದಿಗಳನ್ನು ಮಾಡುವುದಲ್ಲದೆ ಲೋಕಕ್ಷೇಮಕ್ಕಾಗಿ ಸಾರ್ವಜನಿಕರು ಸಾಮೂಹಿಕವಾಗಿ ಒಂದೆಡೆ ಸೇರಿ ಭಗವಂತನ ಆರಾಧನೆಗಳಲ್ಲಿ ಭಾಗವಹಿಸಿ ತಮ್ಮ ಐಹಿಕ ಮತ್ತು ಆಮುಷ್ಮಿಕ ಪ್ರಯೋಜನಗಳನ್ನು ಪಡೆಯುವುದು ಭಾರತೀಯ ಸಂಸ್ಕೃತಿಯ ಒಂದು ಭಾಗವು. ಕಲಿಯುಗದಲ್ಲಿ ಭಗವಂತನು ಅರ್ಚಾವತಾರ ಮತ್ತು ನಾನಾ ಮೂರ್ತಿಗಳ ರೂಪದಲ್ಲಿ ಭಕ್ತರನ್ನು ಅನುಗ್ರಹಿಸುವನಾದ್ದರಿಂದ, ಆ ಮೂರ್ತಿಗಳಿಗೆ ಆಲಯಗಳನ್ನು ನಿರ್ಮಿಸಿ ಮೂರ್ತಿಯನ್ನು ಪ್ರತಿಷ್ಠಿಸಿ ಉತ್ಸವಗಳನ್ನು ಏರ್ಪಡಿಸಿ ಸಾರ್ವಜನಿಕರಿಗೆ ಸೇವಾವಕಾಶ ದೊರಕುವಂತೆ ರಾಜರುಗಳು ಮತ್ತು ಧರ್ಮದೃಷ್ಟಿಯುಳ್ಳವರು, ಶ್ರೀಮಂತರು ಈ ವಿಧವಾದ ಅವಕಾಶಗಳನ್ನು ಕಲ್ಪಿಸುವುದು ರೂಢಿಯಾಗಿದೆ. ಆದ್ದರಿಂದಲೇ ಭಾರತದಲ್ಲಿ ಒಂದು ದೇವಾಲಯವಾದರೂ ಇಲ್ಲದ ಊರು ಕಾಣಸಲಾರದು.

ಭಾರತದೇಶದಲ್ಲಿ ನಮ್ಮ ದೇವಾಲಯಗಳು ಪುನರುಜ್ಜೀವನವನ್ನು ಹೊಂದಿ ನಿಂತಿರುವುದಕ್ಕೆ ನಮ್ಮ ಆಮುಷ್ಮಿಕ ಶ್ರದ್ಧೆಯೇ ಕಾರಣವಾಗಿರುವುದು.. ಭಾರತೀಯರಾದ ನಮ್ಮ ಸಂಸ್ಕೃತಿಯ ಪ್ರತೀಕವೇ ದೇವಾಲಯ ನಿರ್ಮಾಣವು. ನಮ್ಮ ಸಂಸ್ಕೃತಿಯ ಬಲದಿಂದಲೇ ದೇವಾಲಯಗಳು ನಿರ್ಮಿಸಲ್ಪಟ್ಟು, ಆಸೇತು ಹಿಮಾಚಲಪರ್ಯಂತ ಒಂದೇ ಭಾಗವಾಗಿ ಭಾರತದೇಶ ಎಂದು ಪ್ರಸಿದ್ಧಿ ಪಡೆದಿರುವುದು. ಹಿಂದು ಸಂಸ್ಕೃತಿಗೆ ಆಧಾರಭೂತವಾದ ದೇವಾಲಯಗಳ ನಿರ್ಮಾಣ, ವಿಗ್ರಹ ಪ್ರತಿಷ್ಠೆ, ಧ್ಯಾನ, ಪೂಜಾದಿಗಳು ಇಲ್ಲವಾದಲ್ಲಿ ಸಂಸ್ಕೃತಿಯೂ ಇಲ್ಲ ತದನುಗುಣವಾಗಿ ಒಂದು ಜನಾಂಗವೂ ಇಲ್ಲ ನಾವೂ ಭಾರತೀಯರೆಂದು ಹೇಳಿಕೊಳ್ಳಲು ಸಾಧ್ಯವೂ ಇರುವುದಿಲ್ಲ ಭಗವಂತನಿಗೆ ಈ ಜಗತ್ತು ಶರೀರವಾಗಿ ಇರುವಹಾಗೆ ದೇವಸ್ಥಾನವು ಭಗವಂತನ ಶರೀರವು. ಜೀವಾತ್ಮರು ಮತ್ತು ಈ ಅಚೇತನವು ಭಗವಂತನಿಗೆ ಅಂಶಗಳಾಗಿರುವಹಾಗೆ ದೇವಾಲಯದ ಮಂಟಪಗಳೂ, ಗೋಪುರ ಪ್ರಾಕಾರಾದಿಗಳೂ ಭಗವಂತನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಂಗಾಂಗಗಳು. ನಮ್ಮ ಹೃದಯವು ಭಗವಂತನಿಗೆ ಆಲಯವಾಗಿರುವ ಹಾಗೆ ಗರ್ಭಗೃಹವು ದೇವರ ಹೃದಯವಾಗಿರುತ್ತೆ. ಈ ರೀತಿ ಪೂಜಾ ವಿಧಿ ವಿಧಾನಗಳನ್ನು ವಿವರಿಸಲು ಆಗಮಶಾಸ್ತ್ರಗಳೂ ಮಂದಿರಾದಿಗಳ ನಿರ್ಮಾಣ ವಿಧಿಗಳ ವಿವರಣೆಗಾಗಿ ಶಿಲ್ಪಶಾಸ್ತ್ರಗಳೂ ಏರ್ಪಟ್ಟಿವೆ. ಪ್ರಕೃತ ನಾವು ದೇವಸ್ಥಾನ ಮತ್ತು ಪರಿಸರದ ದೇವಸ್ಥಾನಗಳು ಎಂಬ ಈ ಗ್ರಂಥಗಳ ವಿಚಾರವಾಗಿ ಬರೆಯಲು ಆರಂಭಿಸಿ ಶ್ರೀರಂಗಪಟ್ಟಣ ರಾಜಧಾನಿ ಶ್ರೀರಂಗನಾಥಸ್ವಾಮಿ ದೇವಸ್ಥಾನದ ವಿಚಾರವಾಗಿ ಬರೆದು ಬಂದಿರುತ್ತೇವೆ.

ನಮ್ಮ ಪಿತೃವರ್ಯರಾದ ಆಸೂರಿ ಸಂಪತ್ಕುಮಾರಾಚಾರ್ಯರು, ಆಸೂರಿ ರಾಮಾನುಜರಿಗೆ ದೊಡ್ಡಪ್ಪನವರು ಶ್ರೀರಂಗಪಟ್ಟಣದ ಚರಿತ್ರೆ ವಿಷಯದಲ್ಲಿ ಅನೇಕ ವಿಷಯಗಳನ್ನು ಸಂಗ್ರಹಿಸಿ ಬರೆದಿದ್ದರು. ಕಾಲಕ್ರಮದಲ್ಲಿ ಅವೆಲ್ಲವೂ ಕಾಲಗರ್ಭದಲ್ಲಿ ಸೇರಿಹೋಗಿರುವುದಾಗಿ ತಿಳಿಯಿತು. ಅವರ ಜ್ಞಾಪಕಾರ್ಥವಾಗಿ ಈ ಗ್ರಂಥವನ್ನು ಬರೆದು ಮುದ್ರಿಸಲಾಯಿತು.

ಕುತೂಹಲಕರವಾದ ಅನೇಕ ವಿಷಯಗಳು ಬರೆಯಲು ಹೊರಟರೆ ಪುಸ್ತಕ ಬಾಹುಳ್ಯ ಭಯದಿಂದ ಬರೆದಿರುವುದಿಲ್ಲ. ಈ ಗ್ರಂಥದಿಂದ ವಾಚಕರು ಮನಸ್ಸಂತೃಪ್ತಿಹೊಂದಿದರೆ, ಇದರಂತೆ ಇನ್ನೂ ಕೆಲವು ಪ್ರಸಿದ್ಧ ಕ್ಷೇತ್ರ ಮತ್ತು ನಗರ ಮತ್ತು ಚರಿತ್ರಾರ್ಹವಾದ ದೇವಸ್ಥಾನಗಳ ವಿಚಾರವನ್ನೂ ಅಲ್ಲಿಯ ಮಹಾತ್ಮ ಚರಿತ್ರಾಂಶವನ್ನು ಬರೆಯಬಹುದೆಂದು ಆಶಿಸುತ್ತೇವೆ.

ಅದಕ್ಕೆ ಪೂರ್ವಭಾವಿಯಾಗಿ ಶ್ರೀರಂಗನಾಥಸ್ವಾಮಿ ದೇವರಿಗೆ ನಿತ್ಯನಿವೇದನ ಕೈಂಕರ್ಯ ಸೇವಾಪರರಿಗೆ ಅನ್ನವಸ್ತ್ರ, ಸ್ಥಳಸೌಕರ್ಯ, ದೇವಸ್ಥಾನಕ್ಕೆ ಗ್ರಾಮ ಭೂಮಿ ಮುಂತಾದುವುಗಳನ್ನು ಸಮರ್ಪಿಸಿ ಧರ್ಮಕಾರ್ಯಗಳನ್ನು ನಡೆಸಿ ಬರುತ್ತಿರುವ ಭಕ್ತಶಿರೋಮಣಿ ರಾಜರುಗಳ ಕಿಂಚಿತ್ ವಂಶಾವಳಿ ಚರಿತ್ರೆಯನ್ನು ಮೊದಲು ತಿಳಿಸಿ ನಂತರ ಕ್ರಮವಾಗಿ ದೇವಸ್ಥಾನದ ಚರಿತ್ರೆಯನ್ನು ತಿಳಿಸಲಾಗುತ್ತದೆ.

ಈ ಪುಟ್ಟ ಗ್ರಂಥ ಬರೆಯುವ ಕ್ರಮ ಮತ್ತು ನ್ಯೂನಾತಿರಿಕ್ತಗಳು ಇರುವುದನ್ನು ಪಂಡಿತ ಮಹಾಶಯರು ತಿಳಿಸಬೇಕು. ಮುಂದಿನ ಸಂಸ್ಕರಣದಲ್ಲಿ ಸರಿಪಡಿಸಿಕೊಳ್ಳಬಹುದು ಕೃತಜ್ಞತೆಯುಂಟು.

ಶಕ ೧೯೧೭ — ಆಸೂರಿನಾರಾಯಣ

ಭಾವ ಸಂ. ಮಕರ ಹಸ್ತ ನಕ್ಷತ್ರ — ಆಸೂರಿ ರಾಮಾನುಜ

ಬೆಂಗಳೂರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಷಯ ಸೂಚಿಕೆ

		ಪುಟ ಸಂಖ್ಯೆ
೧.	ಶ್ರೀರಂಗಪಟ್ಟಣ ಸನ್ನಿವೇಶ, ರಾಜವಂಶಾವಳಿ, ಕ್ಷತ್ರಿಯ ವಂಶ, ೧೩ ಮತ್ತು ೧೮ ಮನೆತನಗಳು	1
೨.	ಗೌತಮಕ್ಷೇತ್ರ, ಪಶ್ಚಿಮ ರಂಗನಾಥಸ್ವಾಮಿ ಕ್ಷೇತ್ರ	7
೩.	ತಿರುವರಂಗನಾರಾಯಣ ಚತುರ್ವೇದಿಮಂಗಲ	9
೪.	ಶ್ರೀರಂಗಪಟ್ಟಣ , ಕಾವೇರಿ ಉದ್ಭವ ಚರಿತ್ರೆ	10
೫.	ಶ್ರೀರಂಗನಾಥಸ್ವಾಮಿ ದೇವಸ್ಥಾನ, ಕಾಲವಿಮರ್ಶೆ	14
೬.	ಮಹಾವಿದ್ವಾನ್ ಅನಂತಾಚಾರ್ಯರು	17
೭.	ಶ್ರೀರಂಗಪಟ್ಟಣ, ಕೋಟೆ, ರಾಜ್ಯಬಲ, ರಕ್ಷಣೆ	18
೮.	ಸೈನ್ಯದ ಅಧಿಕಾರಿಗಳು, ನಾಣ್ಯಗಳು	24
೯.	ಶ್ರೀರಂಗನಾಥಸ್ವಾಮಿ ದೇವಸ್ಥಾನ, ಕಟ್ಟಡ, ಶಿಲ್ಪರಚನೆ	26
೧೦.	ಮೂರ್ತಿಗಳು, ಮೂಲಮೂರ್ತಿ, ಉತ್ಸವಮೂರ್ತಿ	32
೧೧.	ಲಕ್ಷ್ಮೀಅಮ್ಮನವರು, ಆಳ್ವಾರಾಚಾರ್ಯರುಗಳು	34
೧೨.	ಪೂಜಾಕ್ರಮ, ಆಭರಣಗಳು	43
೧೩.	ಶ್ರೀರಂಗನಾಥಸ್ವಾಮಿ, ಶ್ರೀರಂಗನಾಯಕಿ ಅಮ್ಮನವರಿಗೆ ಧರ್ಮಗಳು	44
೧೪.	ವರ್ಣರಂಜಿತ ಚಿತ್ರಗಳು, ಮಹಾರಾಜರ ಅರಮನೆ	49
೧೫.	ದೇವರಾಜಪುರ ಅಗ್ರಹಾರ, ಅಚ್ಯುತೇಂದ್ರ ಮಹಾರಾಯ ಸಮುದ್ರ	51
೧೬.	ಶ್ರೀಲಕ್ಷ್ಮೀನೃಸಿಂಹಸ್ವಾಮಿ ದೇವಸ್ಥಾನ	53
೧೭.	ಶ್ರೀಗಂಗಾಧರೇಶ್ವರಸ್ವಾಮಿ ದೇವಸ್ಥಾನ	57
೧೮.	ಸ್ನಾನಘಟ್ಟ - ರಾಜಸೋಪಾನ, ಜಗ್ಗುವ ಸೇತುವೆ, ಜಯಸ್ತಂಭ, ರಣಗಂಭ, ಸುಲ್ತಾನಬತೇರಿ, ಕಳಲೆದಿಡ್ಡಿಬಾಗಿಲು, ಇಮಾನ್ಸ್‌ಡಂಜನ್	67
೧೯.	ಪೇಟೆ ಆಂಜನೇಯಸ್ವಾಮಿ, ಕಾಳಮ್ಮ ಮತ್ತು ಕಮಟೇಶ್ವರ ದೇವಸ್ಥಾನ, ಮಾರಮ್ಮನಗುಡಿ, ಪೇಟೆ ಶ್ರೀರಾಮದೇವರ ಗುಡಿ, ನಾಮದಕಟ್ಟೆ ಹನುಮಂತರಾಯನ ಗುಡಿ, ಹನುಮಂತದೇವರ ಮಂಡಪ	70
೨೦.	ಪಾರ್ಶ್ವನಾಥ ಬಸ್ತಿ, ಆದೀಶ್ವರ ಬಸದಿ	72
೨೧.	ಟೀಪು, ಹೈದರನಾಯಕ ಇವರ ಅರಮನೆ	74
೨೨.	ಜುಮ್ಮಾ ಮಸೀದಿ, ಟೀಪುವಿನ ರಾಜ ಚಿನ್ಹೆ, ರಾಷ್ಟ್ರ ಪತಾಕಾ, ಕಾಳೇಗೌಡನ ಬತೇರಿ	76
೨೩.	ಗಾಡಿ ಸೇತುವೆ , ಶೃಂಗಾರ ತೋಟ, ದರಿಯಾ -ಏ- ದೌಲತ್	80

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುಟ ಸಂಖ್ಯೆ

೨೪. ಬಂಗಾರದೊಡ್ಡಿ ಕಾಲುವೆ, ಮಣಿಕರ್ಣಿಕಾ ಕ್ಷೇತ್ರ, ದೇವರಾಜ ಸಮುದ್ರ ಅಗ್ರಹಾರ	83
೨೫. ಶಿರಿಪುತ್ತೂರು ಕಿರಂಗೂರು ಅಗ್ರಹಾರ ಅನಂತಾಚಾರ್ಯರ ಜನ್ಮಸ್ಥಳ	84
೨೬. ಅಪ್ಪಾತೀರ್ಥ ಕೌಲ್‌ಬಜಾರ್. ಸ್ಮಾರಕಗಳು	85
೨೭. ಚಂದ್ರವನ, ಶ್ರೀಕೃಷ್ಣರಾಜಸೋಪಾನ ಘಟ್ಟ	86
೨೮. ಕರೀಘಟ್ಟ, ಶ್ರೀನಿವಾಸಸ್ವಾಮಿ ದೇವಸ್ಥಾನ	89
೨೯. ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನ, ಅರಕೆರೆ	93
೩೦. ಶ್ರೀ ನರಸಿಂಹಸ್ವಾಮಿ ದೇವಸ್ಥಾನ ಅರಕೆರೆ	95
೩೧. ಮರಳೇಶ್ವರಸ್ವಾಮಿ, ತೊಲಗದ ಗಟ್ಟೇಶ್ವರ ದೇವಸ್ಥಾನ	96
೩೨. ಬೆಳಗೊಳ ಜನಾರ್ಧನಸ್ವಾಮಿ ದೇವಾಲಯ	97
೩೩. ಪಾರ್ಶ್ವನಾಥ ಬಸದಿ	103
೩೪. ಕೈಲಾಸೇಶ್ವರ ದೇವಸ್ಥಾನ, ಬೆಳಗೊಳ	104
೩೫. ಶ್ರೀ ನರಸಿಂಹಸ್ವಾಮಿ ದೇವಸ್ಥಾನ, ಶ್ರೀನಿವಾಸಕ್ಷೇತ್ರ	105
೩೬. ಬಲಮುರಿ ಕ್ಷೇತ್ರ, ಶ್ರೀ ನರಸಿಂಹಸ್ವಾಮಿ, ಶ್ರೀ ಅಗಸ್ತ್ಯೇಶ್ವರ ದೇವಸ್ಥಾನ	106

ಶ್ರೀರಂಗಪಟ್ಟಣದ ಚರಿತ್ರೆಯನ್ನು ಬರೆಯಲು ಈ ಕೆಳಗಿನ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಪರಿಶೀಲಿಸಲಾಗಿದೆ ,

೧. ಪಶ್ಚಿಮರಂಗನಾಥ ಕ್ಷೇತ್ರ ಮಹಾತ್ಮೆ

೨. ಗುರು ಪರಂಪರಾ

೩. ಕರ್ನಾಟಕ ಶಾಸನ ಗ್ರಂಥ ಮತ್ತು ಪ್ರತಿವರ್ಷದ ರಿಪೋರ್ಟ್

೪. ರಾಜವಂಶಾವಳಿ

೫. ಕನ್ನಡ ವಿಶ್ವಕೋಶ, ಕರ್ನಾಟಕ ರಾಜ್ಯ ಗೆಜೆಟಿಯರ್

೬. Journal Royal Asiatic Society

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀರಂಗ ಮಂಗಳ ಮಣಿಂ ಕರುಣಾನಿವಾಸಂ
ಶ್ರೀ ವೆಂಕಟಾದ್ರಿ ಶಿಖರಾಲಯ ಕಾಳಮೇಘಂ
ಶ್ರೀ ಹಸ್ತಿಶೈಲ ಶಿಖರೋಜ್ವಲ ಪಾರಿಜಾತಂ
ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ
ಧರ್ಮೋ ರಕ್ಷತಿ ರಕ್ಷಿತಃ

ಭಾರತೀಯ ಹಿಂದು ಸನಾತನ ವೇದಧರ್ಮವನ್ನು ಕಾಪಾಡಿದರೆ, ರಕ್ಷಿಸಿದರೆ, ಸಹಕರಿಸಿದರೆ ಆ ಧರ್ಮವು ನಮ್ಮನ್ನೂ, ನಮ್ಮ ಕುಟುಂಬ, ನಮ್ಮ ಮಕ್ಕಳು, ನಮ್ಮ ಗ್ರಾಮ, ದೇಶ ರಾಷ್ಟ್ರ, ಅಖಿಲ ಚರಾಚರ ಪ್ರಪಂಚವನ್ನೇ ರಕ್ಷಿಸುವುದು, ಕಾಪಾಡುತ್ತದೆ.

ಉತ್ತಿಷ್ಠತ - ಜಾಗ್ರತ - ಪ್ರಾಪ್ಯವರಾನ್ - ನಿಬೋಧತ

ಶ್ರೀರಂಗಪಟ್ಟಣ ಸನ್ನಿವೇಶ - ಶ್ರೀರಂಗಪಟ್ಟಣವು ಕರ್ನಾಟಕದ ಮಂಡ್ಯ ಜಿಲ್ಲೆಯ ಒಂದು ತಾಲ್ಲೂಕು ಮತ್ತು ತಾಲ್ಲೂಕಿನ ಆಡಳಿತ ಕೇಂದ್ರ. ಇಲ್ಲಿ ಕಾವೇರಿಯು ಕವಲೊಡೆದು ಲಂಕೆಯಾಗಿ ಪರಿಣಮಿಸಿದ ಸ್ಥಳ. ಉತ್ತರ ದಕ್ಷಿಣ ಭೂಮಿಯು ಅಗಲವಾಗಿದ್ದು ಪೂರ್ವ ಪಶ್ಚಿಮ ಉದ್ದವಾಗಿ ಕಿರಿದಾಗುತ್ತಾ ಹೋಗುವುದು. ಇದರ ಪಕ್ಕದಲ್ಲೇ ಕರಿಘಟ್ಟವೆಂಬ ಕಿರಿದಾದ ಗುಡ್ಡ. ಇಲ್ಲಿ ಲೋಕಪಾವನಿ ಕಾವೇರಿ ನದಿಯನ್ನು ಸೇರುವುದು. ಇದು ಮೈಸೂರು ರಾಜರ ರಾಜಧಾನಿಯಾಗಿದ್ದಿತು. ಐತಿಹಾಸಿಕವಾಗಿ ಪ್ರಾಧಾನ್ಯವನ್ನು ಪಡೆದ ಸ್ಥಳವಾಗಿದೆ. ಶ್ರೀರಂಗನಾಥಸ್ವಾಮಿಯು ಪ್ರೇಮದಿಂದ ವಿಜಯಮಾಡಿಸಿರುವುದರಿಂದ ಅತ್ಯಂತ ಪವಿತ್ರವಾದ ದಿವ್ಯಕ್ಷೇತ್ರರವಾಗಿದೆ.

ರಾಜವಂಶಾವಳಿ - ನಮ್ಮ ಹಿಂದು ಧರ್ಮದ ಇತಿಹಾಸದಲ್ಲಿ ಪ್ರತಿಯೊಬ್ಬರೂ ಸೂರ್ಯ, ಚಂದ್ರವಂಶ ಋಷಿಗಳ, ಮಹಾತ್ಮರ ವಂಶದಲ್ಲಿ ಹುಟ್ಟಿದವರೆಂದು ಪರಂಪರೆಯನ್ನು ಹೇಳಿಕೊಳ್ಳುತ್ತಾರೆ. ಅದೇ ರೀತಿಯಲ್ಲಿ ಮೈಸೂರಿನ ಒಡೆಯರ ರಾಜವಂಶವು ಚಂದ್ರವಂಶದವರೆಂದೂ, ಯಾದವಕುಲತಿಲಕನಾದ ಶ್ರೀಕೃಷ್ಣಪರಮಾತ್ಮನ ಸಂತತಿಯವರೆಂದೂ, ಯಾದವ ಕುಲಕ್ಕೆ ಸೇರಿದವರೆಂದೂ ತಿಳಿದು ಬರುತ್ತದೆ.

ವಸುದೇವ ಮಹಾರಾಜನ ಪತ್ನಿ ದೇವಕಿಯ ಗರ್ಭದಲ್ಲಿ ಶ್ರಾವಣಬಹುಳ ಅಷ್ಟಮಿ ಬುಧವಾರ ರೋಹಿಣಿ ನಕ್ಷತ್ರದಲ್ಲಿ (ಸಿಂಹಮಾಸ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೋಹಿಣಿ ನಕ್ಷತ್ರ) ವೃಷಭಲಗ್ನ ಚಂದ್ರೋದಯ ಕಾಲದಲ್ಲಿ ಭಕ್ತರಿಗೆ ಸಕಲೇಷ್ಟಾರ್ಥಗಳನ್ನು ಕೊಡುವ ಸಾಕ್ಷಾತ್ ನಾರಾಯಣನೇ ಭೂಭಾರ ಪರಿಹಾರವಂ ಮಾಡಿ, ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನೆ ಧರ್ಮಸಂರಕ್ಷಣೆಯಂ ಮಾಡಲು ಶ್ರೀಕೃಷ್ಣನೆಂಬ ನಾಮಧೇಯದಿಂದ ಅವತರಿಸಿದನು.

ಶ್ರೀಕೃಷ್ಣನಿಗೆ ಎಂಟು ಮಂದಿ ಪಟ್ಟಮಹಿಷಿಯರು. ಅವರಲ್ಲಿ ಮುಖ್ಯಳಾದ ರುಕ್ಮಿಣೀದೇವಿಯಲ್ಲಿ ಸರ್ವಲೋಕ ಪ್ರಸಿದ್ಧನಾದ ಮನ್ಮಥನ ಅಪರಾವತಾರವಾದ ಪ್ರದ್ಯುಮ್ನನೆಂಬ ಪುತ್ರನು ಉದಯಿಸಿದನು. ಪ್ರದ್ಯುಮ್ನನ ಪುತ್ರ ಅನಿರುದ್ಧನು. ಅವನ ಮಗ ವಜ್ರ,ವಜ್ರನ ಮಗ ಸುಬಾಹು. ಈ ರೀತಿ ನಡೆದು ಬರುವ ಸಂತಾನ ಪರಂಪರೆಯಲ್ಲಿ ರಾಜದೇವ ಎಂಬ ರಾಜನಿಗೆ, ಯದುರಾಯ ಮತ್ತು ಕೃಷ್ಣರಾಯ ಎಂಬ ಇಬ್ಬರು ಪುತ್ರರು ಜನಿಸಿದರು. ಇವರಲ್ಲಿ ಶಕ ೧೨೮೩ ಸಾಧಾರಣ ಸಂ. ಮಾಘಶುದ್ಧ ತೃತೀಯಾ ದಿನದಲ್ಲಿ ಜನಿಸಿದ ಯದುರಾಯರು ಕರ್ಣಾಟಕ ರಾಜ್ಯಕ್ಕೆ ಸೇರಿದ ಮೈಸೂರು ಮಹಾರಾಜರ ವಂಶಕ್ಕೆ ಮೂಲ ಪುರುಷರೆಂದು ತಿಳಿದುಬರುತ್ತದೆ.

ದೈವ ಪ್ರೇರಣೆಯಿಂದ ಯದುರಾಯರು ತಮ್ಮನೊಂದಿಗೆ ದ್ವಾರಕಾ ಪಟ್ಟಣದಿಂದ ಹೊರಟು ವಿಂಧ್ಯಪರ್ವತಕ್ಕೆ ಬಂದು ಅಲ್ಲಿ ವಿಂಧ್ಯವಾಸಿನೀ ಅಮ್ಮನವರನ್ನು ದರ್ಶನ ಮಾಡಿ ಮುಂದೆ ವಿಜಯನಗರಕ್ಕೆ ಬಂದು ಅಲ್ಲಿಂದ ತುಂಗಭದ್ರಾ ತೀರದ ವಿರೂಪಾಕ್ಷನನ್ನು ಸೇವಿಸಿ ಅಲ್ಲಿಂದ ಹೊರಟು ಯಾದವಗಿರಿಗೆ ಬಂದು ಕಲ್ಯಾಣೀ ಪುಷ್ಕರಿಣಿಯಲ್ಲಿ ಸ್ನಾನ ಸಂಧ್ಯೆಗಳನ್ನು ನಡೆಸಿ ಶ್ರೀನಾರಾಯಣಸ್ವಾಮಿ, ಶ್ರೀ ಯೋಗಾನರಸಿಂಹಸ್ವಾಮಿ ಇವರನ್ನು ದರ್ಶನ ಮಾಡಿಕೊಂಡು ಮುಂದೆ ಕಾವೇರೀ ನದಿಯಲ್ಲಿ ಸ್ನಾನಮಾಡಿ ಅಲ್ಲಿಂದ ಮಹಾಬಲ ಪರ್ವತಕ್ಕೆ ಬಂದು ಶ್ರೀಚಾಮುಂಡೇಶ್ವರೀ ಅಮ್ಮನವರನ್ನು ಸೇವಿಸಿ ರಾತ್ರಿ ಅಲ್ಲೇ ಮಲಗಿದ್ದರು.

ಶ್ರೀಚಾಮುಂಡೇಶ್ವರೀ ಅಮ್ಮನವರು ಯದುರಾಯರ ಸ್ವಪ್ನದಲ್ಲಿ ಕಾಣಿಸಿಕೊಂಡು ತಿಳಿಸಿದಂತೆ ಯದುರಾಯರು ಬೆಳಿಗ್ಗೆ ಎದ್ದು ತಮ್ಮ ತಮ್ಮನ ಸಂಗಡ ರಾತ್ರಿ ನಡೆದ ಸ್ವಪ್ನ ವೃತ್ತಾಂತವನ್ನು ತಿಳಿಸಿ ಅನಂತರ ಸ್ನಾನ ಸಂಧ್ಯೆಗಳನ್ನು ತೀರಿಸಿಕೊಂಡು ಉತ್ತನಹಳ್ಳಿ ಜ್ವಾಲಾಮುಖೀ ಅಮ್ಮನವರನ್ನು ಸೇವಿಸಿ ಅಲ್ಲಿಂದ ಮಹಿಶೂರು ನಗರಕ್ಕೆ ಬಂದು ಕೋಡಿಹಳ್ಳಿ ಭೈರವನ ಗುಡಿಯಲ್ಲಿ ನಿಂತರು.

ಶ್ರೀಚಾಮುಂಡೇಶ್ವರೀ ಅಮ್ಮನವರಿಂದ ಪ್ರೇರಿತನಾದ ಜಟಾಧಾರಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೇಜಸ್ವಿ ಪುರುಷನೊಬ್ಬನು ಬಂದು ರಾಜಪುತ್ರರನ್ನು ಕಂಡು ಗೌರವಿಸಿ ಅವರನ್ನು ಕುರಿತು ಗೌತಮಗೋತ್ರ ವಂಶೋತ್ಪನ್ನನಾದ ಚಾಮರಾಜನೆಂಬುವನಿಗೆ ಪುತ್ರಸಂತಾನವಿಲ್ಲದೆ ಒಬ್ಬಳೇ ಮಗಳಿರುವಳು. ಅವಳನ್ನು ನೀವು ವಿವಾಹವಾಗಿ ರಾಜ್ಯವನ್ನು ಧರ್ಮದಿಂದ ಪಾಲಿಸುವರಾಗಿ ಎಂದು ತಿಳಿಸಿ ಜೊತೆಯಲ್ಲಿ ರಾಜತಂತ್ರವನ್ನೂ ತಿಳಿಸಿದರು.

ಯದುರಾಯರು ಅದೇ ಪ್ರಕಾರ ರಾಜತಂತ್ರ ವಿಶಾರದರಾದ ತಮ್ಮ ತಿಮ್ಮರಸಯ್ಯ, ನಾರಣಯ್ಯ ಎಂಬ ಕರಣಿಕ ಬ್ರಾಹ್ಮಣರ ಸಹಾಯದಿಂದ ಕೋಟೆಯೊಳಗೆ ಪ್ರವೇಶಿಸಿ ದುಷ್ಟತನದಿಂದ ದ್ರೋಹಿಯಾಗಿ ರಾಜ್ಯವನ್ನಾಕ್ರಮಿಸಬೇಕೆಂದಿದ್ದ ಮಾರನಾಯಕನೆಂಬ ಸೇನಾಪತಿಯನ್ನು ಸಂಹರಿಸಿ ಸೌಂದರ್ಯವತಿಯಾದ ರಾಜಪುತ್ರಿ ದೇವಾಜಮ್ಮಣ್ಣಿಯನ್ನು ರಾಜವೈಭವದಿಂದ ವಿವಾಹವಾದರು. ಅನಂತರ ಶಕ ೧೩೨೨ ಪ್ರಮಾಥಿ ಸಂ. ವೈಶಾಖ ಶುದ್ಧ ಪಂಚಮಿ (A.D.1399)ರಲ್ಲಿ ಮಹಾವೈಭವದಿಂದ ಮೈಸೂರು ರಾಜ್ಯ ಪಟ್ಟಾಭಿಷಿಕ್ತರಾದರು..

ಈ ರೀತಿಯಾಗಿ ಯದುರಾಯರ ವಂಶಪರಂಪರೆಯಲ್ಲಿ ಬಂದವರು ಮೈಸೂರು ರಾಜರುಗಳಾಗಿ ಧರ್ಮದಿಂದ ರಾಜ್ಯ ಪರಿಪಾಲನೆ ಮಾಡುತ್ತಾ ಬಂದರು. ಈ ರಾಜ ವಂಶದಲ್ಲಿ ಯದುರಾಯರಿಂದ ಒಂಭತ್ತನೆಯ ತಲೆಯುವರಾದ ರಾಜಒಡೆಯರೆಂಬುವರು ರಾಜ್ಯವಾಳುತ್ತಿರುವಾಗ ಶ್ರೀರಂಗಪಟ್ಟದಲ್ಲಿ ಶ್ರೀರಂಗರಾಯರು ವಿಜಯನಗರದ ರಾಜಪ್ರತಿನಿಧಿಯಾಗಿ ರಾಜ್ಯವಾಳುತ್ತಿದ್ದರು.

ಅವರ ಮೊಮ್ಮಗ ತಿರುಮಲರಾಯನು ರಾಜತಂತ್ರ ಕಾರಣದಿಂದ ರಾಜ್ಯವನ್ನು ತ್ಯಜಿಸಬೇಕಾಗಿ ಬಂದುದರಿಂದ ಅವರ ಕಾಲಾನಂತರ ಶ್ರೀರಂಗಪಟ್ಟಣವು ಅನ್ಯಾಕ್ರಾಂತವಾಗುವುದೆಂದಾಲೋಚಿಸಿ ವಿಜಯನಗರದ ಪ್ರತಿನಿಧಿಗಳಾಗಿಯೂ, ರಾಜಗುರುಗಳಾಗಿಯೂ ಇದ್ದ ಮಹಾವಿದ್ವಾನ್ ಆನಂದಾಳ್ವಾರ ವಂಶಸ್ಥರಾದ ತಿರುಮಲಯ್ಯಂಗಾರ್ಯರು ವಿಜಯನಗರದ ಅರಸರ ಸಮ್ಮತಿಯನ್ನು ಪಡೆದು, ಶೂರರೂ ಗುಣಸಂಪನ್ನರೂ ಆದ ರಾಜ ಒಡೆಯರನ್ನು ಕರೆದು ವಿಷಯವನ್ನು ತಿಳಿಸಿ ಶ್ರೀರಂಗಪಟ್ಟಣದ ಸಿಂಹಾಸನದ ಮೇಲೆ ಕುಳ್ಳಿರಿಸಿ ಶಕ ೧೫೩೩ ಸಾಧಾರಣ ಸಂ. ಚೈತ್ರಶುದ್ಧ ಪಂಚಮಿ (A.D. 1610) ರಲ್ಲಿ ರಾಜ ಪಟ್ಟಾಭಿಷೇಕ ಮಾಡಿದರು. ಆ ದಿನದಿಂದ ಮೈಸೂರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಜರುಗಳಿಗೆ ಕಾವೇರಿಯಿಂದಾವೃತವಾದ ಶ್ರೀರಂಗನಾಥಸ್ವಾಮಿ ಸಾನ್ನಿಧ್ಯವಿರುವ ಶ್ರೀರಂಗಪಟ್ಟಣವು ರಾಜಧಾನಿಯಾಯಿತು.

ಕ್ಷತ್ರಿಯ ರಾಜವಂಶಕ್ಕೆ ಸೇರಿದ ಅರಸುಮನೆತನಗಳ ವಿಚಾರ -

ಅರಸುಮನೆತನದಲ್ಲಿ ಎರಡು ಗುಂಪುಗಳಿವೆ ೧.ಹದಿಮೂರು (13) ಮನೆತನದವರು ೨. ಹದಿನೆಂಟು (18) ಮನೆತನದವರು ಎಂಬುದಾಗಿ. ಒಂದು ಕಾಲದಲ್ಲಿ 13 ಮನೆತನದವರು ಶುದ್ಧರಾಗಿ ತಮ್ಮ ಗುಂಪಿನಲ್ಲೇ ಬಾಂಧವ್ಯವನ್ನು ನಡೆಸುತ್ತಿದ್ದರು. ಕಾಲಾಂತರದಲ್ಲಿ 18 ಮನೆತನಗಳ ಗೌಡಪಟ್ಟಿ, ಒಡಜಾತಿ ಮುಂತಾದವರ ಸಂಬಂಧ ಮಾಡಿಬಂದರು. ಈ ಸಂಕರವಾದ ವಿಷಯವನ್ನು ತಿಳಿದು ಇದನ್ನೆಲ್ಲ ಸರಿಪಡಿಸಬೇಕೆಂದು ಚಿಕ್ಕದೇವರಾಜ ಒಡೆಯರು ಅರಮನೆ ಸಂಪ್ರದಾಯವನ್ನೂ 13 ಮತ್ತು 18 ಮನೆತನಗಳ ಜಾತಿ ಹಾವೆ ವರ್ತನೆ ಗೋತ್ರಸೂತ್ರಗಳನ್ನು ಚೆನ್ನಾಗಿ ತಿಳಿದ ಸಮ್ಮುಖದ ಅಪ್ಪಾಜಯ್ಯ, ಗುರಿಕಾರ ಸೋಮರಾಜಯ್ಯ ಇವರನ್ನಿಟ್ಟುಕೊಂಡು ಶಕ ೧೬೧೨ ಪ್ರಮೋದೂತ ಸಂ. (A.D. 1689) ರಲ್ಲಿ ವ್ಯವಸ್ಥೆ ಮಾಡಿದರು.

ಹದಿಮೂರು ಮನೆತನಗಳು -

೧. ಮೈಸೂರು ದೊರೆಗಳ ಮನೆತನ, ೨. ಮೂಗೂರವರ ಮನೆತನ, ೩. ಯಳಂದೂರವರ ಮನೆತನ, ೪. ಕೊತ್ತಗಾಲದವರ ಮನೆತನ, ೫. ಶ್ರೀ ಅರಿಕುಠಾರದವರ ಮನೆತನ, ೬. ನೀಲಸೋಗೆ ಮತ್ತು ಹ್ಯಾಕನೂರು ಮನೆತನ ೭. ಬಿಳುಗಲಿ ಮತ್ತು ನರನಲ್ಲೀ ಮನೆತನ ೮. ಕಳಲೆಹುಣಸಾಳು ಮನೆತನ ೯. ಹಳೇಬೀಡು, ಬಿಳಿಕೆರೆ ಮನೆತನ ೧೦. ಹೆಡತಲೆ, ಹೆಮ್ಮಾರಗಾಲ ಮತ್ತು ತೊರವಳ್ಳಿ ಮನೆತನ, ೧೧. ಕೋಟೆ, ಮೂಡಣಕೋಟೆ, ಹುರ, ಹುಲ್ಲಹಳ್ಳಿ ಮನೆತನ ೧೨. ತಗಡೂರು ಮನೆತನ, ೧೩. ಕಾರಗಳ್ಳಿ ಮನೆತನ.

ಹದಿನೆಂಟು ಮನೆತನಗಳು -

೧. ಶಿಶುಕುಂದದ ಅರಸುಗಳ ಮನೆತನ, ೨. ಬಾಗುಳಿಯವರ ಮನೆತನ, ೩. ಮುಳ್ಳೂರವರ ಮನೆತನ, ೪. ಕೋಟೆಯವರ ಮನೆತನ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೫. ಮುಲುಗೂಡದವರ ಮನೆತನ, ೬. ಸಿಂಧುವಳ್ಳಿಯವರ ಮನೆತನ, ೭. ಮರಳೆಯವರ ಮನೆತನ, ೮. ಹೆಬ್ಬಾಳರವರ ಮನೆತನ, ೯. ಕಿಕ್ಕೇರಿಯವರ ಮನೆತನ, ೧೦. ಹಾದನೂರು ಅರಸುಗಳ ಮನೆತನ, ೧೧. ಕುಲಗಾಣದ ಅರಸುಗಳ ಮನೆತನ, ೧೨. ತಲಕಾಡು ಅರಸುಗಳ ಮನೆತನ, ೧೩. ಬೆಳ್ಳೂರು ಅರಸುಗಳ ಮನೆತನ, ೧೪. ಹೊಸಕೋಟೆಯವರ ಮನೆತನ, ೧೫. ಮಳಲವಾಡಿಯವರ ಮನೆತನ, ೧೬. ಮದ್ದೂರವರ ಮನೆತನ, ೧೭. ಹೆಬ್ಬಲಗುಪ್ಪೆ ಮನೆತನ, ೧೮. ತಿಪ್ಪೂರು ಅರಸುಗಳ ಮನೆತನ.

ಈ ರೀತಿ ಮೇಲೆ ತಿಳಿಸಿದ ಎರಡು ಗುಂಪುಗಳಲ್ಲಿ ಆಯಾಗುಂಪಿನವರು ಅವರವರಲ್ಲೇ ಹೆಣ್ಣುಕೊಟ್ಟು ತರಬೇಕೆಂದು ನಿಬಂಧನೆ ಮಾಡಿದ್ದರು.

ಪ್ರಕೃತ ವಿಚಾರಿಸಿದ್ದಲ್ಲಿ ಈಗ ಯಾವ ಭೇದವೂ ಇಲ್ಲದೆ ೧೩ ಮತ್ತು ೧೮ ಮನೆತನದವರೆಲ್ಲರೂ ಪರಸ್ಪರ ಹೆಣ್ಣುಕೊಟ್ಟು ತೆಗೆದುಕೊಳ್ಳುತ್ತಾರೆ. ಈ ಉಭಯಗುಂಪುಗಳಲ್ಲಿ ಹೆಣ್ಣುಕೊಟ್ಟುತರುವ ಸಂಬಂಧವು ದೊಡ್ಡಕೃಷ್ಣರಾಜಒಡೆಯರ ಕಾಲದಲ್ಲಿ ಅವರ ನಿರೂಪದಂತೆ ಶಕ ೧೬೪೦ ಹೇವಿಳಂಬಿ ಸಂ. (A.D. 1717)ರಲ್ಲಿ ಆರಂಭವಾಯಿತೆಂದು ತಿಳಿದುಬರುವುದು.

ಈ ರೀತಿಯಲ್ಲಿ ರಾಜ ಮನೆತನ ಪರಂಪರೆಯು ಸ್ವತಂತ್ರವಾಗಿ ಧರ್ಮದಿಂದ ರಾಜ್ಯ ಪರಿಪಾಲನೆ ಮಾಡುತ್ತಿದ್ದ ಕಾಲದಲ್ಲಿ ಇಮ್ಮಡಿಕೃಷ್ಣರಾಜಒಡೆಯರು 1734ರಲ್ಲಿ ಪಟ್ಟಾಭಿಷಿಕ್ತರಾದರು. ಹೈದರನಾಯಕನೆಂಬುವನು ಮೈಸೂರು ಸೈನ್ಯದಲ್ಲಿ ಕೆಲಸಕ್ಕೆ ಸೇರಿದನು. ಶೂರನಾಗಿಯೂ, ಬುದ್ಧಿವಂತನಾಗಿಯೂ ಇದ್ದುದರಿಂದಲೂ, ಅಲ್ಲದೆ ರಾಜರ ರಾಜತಂತ್ರವು ದುರ್ಬಲವಾದ್ದರಿಂದಲೂ, ಹೈದರನಾಯಕನು ವೃದ್ಧಿಹೊಂದಿ A.D. 1758ರಲ್ಲಿ ರಾಜ್ಯದ ಸರ್ವಾಧಿಕಾರವನ್ನು ಹೊಂದಿದನು. ತದನಂತರ ತಾನೇ ಪ್ರತ್ಯೇಕವಾದ ಸೇನೆಯನ್ನು ಕಟ್ಟಿ ಮೈಸೂರು ಸಂಸ್ಥಾನವನ್ನು ವಿಸ್ತರಿಸಿದನು. ರಾಜರು 1766 ರಲ್ಲಿ ಕಾಲವಾದರು. ಹೈದರನಾಯಕನು ಅಧಿಕಾರದಲ್ಲಿದ್ದಾಗಲೇ ಮೂರುಜನ ರಾಜರು ಕಾಲವಾದರು, ನಾಲ್ಕನೆಯ ಖಾಸಾಚಾಮರಾಜಒಡೆಯರು ನಾಮಮಾತ್ರಕ್ಕೆ ದೊರೆಗಳಾಗಿದ್ದರು, ಹೈದರನಾಯಕನು 1782 ರಲ್ಲಿ ಕಾಲವಾದರು. ಅವನ ಮಗ ಟಿಪ್ಪುವು ಅಧಿಕಾರಕ್ಕೆ ಬಂದು ರಾಜ್ಯವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡನು. ಟಿಪ್ಪುವಿನ ಜೀವಮಾನವೆಲ್ಲಾ ಯುದ್ಧದಲ್ಲೇ ಕಳೆದುಹೋಯಿತು. ಟಿಪ್ಪುವಿಗೂ ಆಂಗ್ಲೇಯರಿಗೂ 1799ರಲ್ಲಿ ನಡೆದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯುದ್ಧದಲ್ಲಿ ರಾಜ್ಯವು ಆಂಗ್ಲೇಯರ ಸ್ವಾಧೀನವಾಯಿತು.

ಶ್ರೀರಂಗಪಟ್ಟಣವು ಆಂಗ್ಲೇಯರ ವಶವಾಯಿತೆಂದು ಮದರಾಸ್ ಗೌರ್ನಮೆಂಟಿಗೆ ತಿಳಿಯಿತು. ಲಾರ್ಡ್‌ಮಾರ್ನಿಂಗ್‌ಟನ್, ಲಾರ್ಡ್‌ಕ್ಲೈವ್, ಮೇಜರ್‌ವೆಬ್ ಮುಂತಾದ ಸರದಾರರು ಆಲೋಚಿಸಿ 1782 ರಿಂದ 1799 ರವರೆಗೆ ಮಹಾರಾಣಿ ಲಕ್ಷ್ಮಮ್ಮಣ್ಣಿ ಅವರ ಪ್ರಧಾನಿಗಳಾದ ತಿರುಮಲರಾಯರು, ನಾರಾಯಣರಾಯರು ಅವರಿಗೂ ಕುಂಪಣಿಯವರಿಗೂ, ನಡೆದ ಕಾಗದ ಪತ್ರಗಳು ಒಪ್ಪಂದ ಕರಾರುಗಳ ಪ್ರಕಾರ ತಿರುಮಲರಾಯರು ಮತ್ತು ನಾರಾಯಣರಾಯರಿಗೆ ರಾಜ್ಯವನ್ನು ಒಪ್ಪಿಸಬೇಕಾಗಿದ್ದಿತು. ಆ ರೀತಿ ಮಾಡದೆ ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಪುತ್ರರಾದ ಕೃಷ್ಣರಾಜಒಡೆಯರಿಗೆ ಮಹಿಶೂರು ಸಂಸ್ಥಾನವನ್ನು ಕೊಡತಕ್ಕದ್ದೆಂದು ತೀರ್ಮಾನಿಸಿ ರಾಜ್ಯಸೂತ್ರವನ್ನು ತಮ್ಮ ವಶದಲ್ಲಿಟ್ಟುಕೊಂಡರು.

ಪ್ರಧಾನಿಗಳಾದ ತಿರುಮಲರಾಯರು, ನಾರಾಯಣರಾಯರು ಬಹುಮೇಧಾವಿಗಳೇ, ರಾಜಕಾರಣಪಟುಗಳೂ ಆಗಿದ್ದುದರಿಂದ ಅವರಿಗೆ ಸಂಸ್ಥಾನದ ಅಧಿಕಾರಕೊಟ್ಟರೆ ರಾಜ್ಯವು ಸ್ವತಂತ್ರವಾಗಿ ಕುಂಪಣಿಯವರ ಅಧಿಕಾರ ಲೋಪವಾಗುವುದೆಂದಾಲೋಚಿಸಿ ತಿರುಮಲರಾಯರನ್ನು ಶ್ರೀರಂಗಪಟ್ಟಣದ ಕೋಟೆಯೊಳಗೆ ಬಿಡದೆ ಶ್ರೀಮಹಾರಾಣಿಯವರನ್ನೂ ನೋಡಲೂ ಅವಕಾಶ ಕೊಡದೆ ಬಲತ್ಕಾರದಿಂದ ಮದರಾಸಿನಲ್ಲಿಟ್ಟು ಅವರಿಗೆ 35000 ವರಹ ಮಾಸಾಶನವನ್ನು ಕಲ್ಪಿಸಿದರು.

ತದನಂತರ ಮೈಸೂರು ರಾಜರಾದ ಕೃಷ್ಣರಾಜಒಡೆಯರಿಗೂ, ಗವರ್ನರ್ ಜನರಲ್ ಮಾರ್ನಿಂಗ್‌ಟನ್‌ರಿಗೂ ಎಂದರೆ ಅವರ ಪರ ಜನರಲ್ ಹಾರಿಸ್, ಕರ್ನಲ್ ಆರ್ಥರ್‌ವೆಲ್ಲಸ್ಲಿ, ಕರ್ನಲ್ ವಿಲಿಯಂ, ಕಾರ್ಕಫಾಟ್ರಿಕ್, ಲೆಫ್ಟಿನೆಂಟ್ ಕರ್ನಲ್ ಬರಿಕ್ಲೋಸ್ ಅವರಿಗೂ 22. 6 .1799ರ ದಿನ ನಡೆದ ಖರಾರನ್ನು ಅನುಸರಿಸಿ 8 ಜುಲೈ 1799ರಲ್ಲಿ ಶ್ರೀರಂಗಪಟ್ಟಣದ ನಜರಬಾದು ಕೋಟೆಯಲ್ಲಿ 16 ಕಲಂಗಳುಳ್ಳ ಖರಾರುವ್ಯವಸ್ಥೆಯು ನಡೆಯಿತು. ಮಹಾರಾಜರ ಪರವಾಗಿ ಮಹಾರಾಣಿ ಲಕ್ಷ್ಮಮ್ಮಣ್ಣಿಯವರೂ, ಪೂರ್ಣಯ್ಯನವರೂ ರುಜು ಮಾಡಿದರು. ಕರಾರಿನ ಮಾತುಗಳು ಇಂಗ್ಲೀಷ್ ಮತ್ತು ಪರ್ಷಿಯನ್ ಭಾಷೆಗಳಲ್ಲಿ ಬರೆದಿರುವುದು.

ಕುಂಪಣಿಯವರು ರಾಜತಂತ್ರವನ್ನವಲಂಬಿಸಿ ರಾಜಧಾನಿಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೈಸೂರಿಗೆ ವರ್ಗಾಯಿಸಿದರು. ಐದು ವರ್ಷ ವಯಸ್ಸಿನ ಮುಮ್ಮಡಿ ಕೃಷ್ಣರಾಜಒಡೆಯರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿ ರಾಜ್ಯಪಟ್ಟಾಭಿಷೇಕ ಮಾಡಿ ಅನುಭವಶಾಲಿಗಳಾದ ಪೂರ್ಣಯ್ಯನವರನ್ನು ದಿವಾನಗಿರಿ ರಾಜ್ಯಾಧಿಕಾರದಲ್ಲಿ (ದಿವಾನ್,=ಮಂತ್ರಿ) ನೇಮಿಸಿದರು. ರಾಜ್ಯದಲ್ಲಿ ನಡೆಯುವ ಎಲ್ಲಾ ಕಾರ್ಯಗಳೂ ಕುಂಪಣಿಯವರಿಗೆ ತಿಳಿಯಬೇಕೆಂದು ಲೆಫ್ಟಿನೆಂಟ್ ಕರ್ನಲ್ ಬರಿಕ್ಲೋಸ್‌ರವರನ್ನು ರೆಸಿಡೆಂಟ್ ಎಂಬ ಅಧಿಕಾರದಲ್ಲಿ ನೇಮಿಸಿದರು ಅಲ್ಲದೆ ಶ್ರೀರಂಗಪಟ್ಟಣದಲ್ಲಿ ಸೈನ್ಯವನ್ನಿಟ್ಟು ವೆಲ್ಲಸ್ಲಿ ಎಂಬುವರನ್ನು ಅಧಿಕಾರಿಯಾಗಿ ನೇಮಿಸಿದರು. (ಮೈಸೂರು ರಾಜಧಾನಿ ದೇವಾಲಯಗಳು ಎಂಬ ಗ್ರಂಥದಲ್ಲಿ ಮುಂದಿನ ರಾಜಕೀಯ ವಿವರಗಳು ಬರೆದಿರುವುದನ್ನು ಕಾಣಬಹುದು.)

ಆಂಗ್ಲೇಯರಿಗೆ ಪ್ರತಿವರ್ಷವೂ 50000 (ಐವತ್ತು ಸಹಸ್ರ)ರೂಪಾಯಿ ಕೊಡುವಂತೆಯೂ ಒಪ್ಪಂದವಾಗಿ ಶ್ರೀರಂಗಪಟ್ಟಣವನ್ನು ಮಹಾರಾಜರ ಸರಕಾರಕ್ಕೆ ವಹಿಸಿದರು. ಮಹಾರಾಜರ ಟಂಕಸಾಲೆ, ರಾಜಭಂಡಾರ, ಸರಕಾರದ ಕಛೇರಿಗಳು, ಇತ್ಯಾದಿ ಶ್ರೀರಂಗಪಟ್ಟಣದಲ್ಲಿ ಸ್ವಲ್ಪ ಸ್ವಲ್ಪ ನಡೆಯುತ್ತಿದ್ದು ನಂತರ ಮೈಸೂರು ಪೂರ್ಣವಾಗಿ ರಾಜಧಾನಿಯಾದ ನಂತರ 1804 ರಲ್ಲಿ ಎಲ್ಲವನ್ನೂ ಮೈಸೂರಿಗೆ ವರ್ಗಾಯಿಸಲಾಯಿತು.

ಅದೇ ರೀತಿಯಲ್ಲಿ ರಾಜಕೀಯ ಕಾರಣಗಳಿಂದ ಐಶ್ವರ್ಯ ಮತ್ತು ಕೀರ್ತಿಯಲ್ಲಿ ಪ್ರಸಿದ್ಧ ರಾಜಧಾನಿಯಾಗಿದ್ದ ಶ್ರೀರಂಗಪಟ್ಟಣವು 1801 ರಿಂದ ಈಚೆಗೆ ಬಹುಜಾಗ್ರತೆಯಾಗಿ ಕ್ಷೀಣಿಸುತ್ತಾ ಬಂದಿತು. ಅದೇ ಸಮಯದಲ್ಲಿ ಮೈಸೂರು ರಾಜಧಾನಿಯಾಗಿ ದಿನೇ ದಿನೇ ಅಭಿವೃದ್ಧಿ ಹೊಂದಿತು.

ಶ್ರೀರಂಗಪಟ್ಟಣವು ಯುದ್ಧಕ್ಕೆ ಮುಂಚೆ ಒಂದು ಲಕ್ಷದ ಐವತ್ತು ಸಹಸ್ರ ಜನಸಂಖ್ಯೆಯಿಂದ ಕೂಡಿದ್ದಿತು. ಯುದ್ಧವಾದ ಮೇಲೆ ರಾಜಧಾನಿ ಮೈಸೂರಿಗೆ ವರ್ಗಾಯಿಸಿದ ನಂತರ ಒಂದು ವರ್ಷದೊಳಗೆ ಶ್ರೀರಂಗಪಟ್ಟಣದಲ್ಲಿ ಜನಸಂಖ್ಯೆ 32000 ಮೂವತ್ತೆರಡು ಸಾವಿರಕ್ಕೆ ಇಳಿಯಿತು.

ಗೌತಮಕ್ಷೇತ್ರ- ಸಿದ್ಧರು ಪುಣ್ಯ ಪುರುಷರು, ಋಷಿಗಳು, ಭಗವಧ್ಯಾನಪರರು ವಾಸಮಾಡುವ, ವಾಸಮಾಡಿದ ಸ್ಥಳವು ಪವಿತ್ರವಾದ್ದರಿಂದ ಆ ಸ್ಥಳವು ಕ್ಷೇತ್ರ, ಪುಣ್ಯಭೂಮಿ ಎಂದು ಕರೆಯಲ್ಪಡುವುದು. ಈ ಕ್ಷೇತ್ರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಮೀಪದಲ್ಲಿ ನದಿಯೂ ಸೇರಿದ್ದರೆ ಒಂದಕ್ಕೊಂದರ ಅನ್ಯೋನ್ಯತೆಯಿಂದ ತೀರ್ಥಕ್ಷೇತ್ರವೆಂದು ಪ್ರಸಿದ್ಧಿಯಾಗುವುದು. ಕಾವೇರಿ ನದಿಯು ಕವಲೊಡೆದು ಈ ಸ್ಥಳವು ಸುತ್ತಲ್ಪಟ್ಟು ರಮಣೀಯವಾಗಿರುವುದರಿಂದ ಆ ಸ್ಥಳದಲ್ಲಿ ಗೌತಮಋಷಿಯು ತಮ್ಮ ಸ್ನಾನ ಸಂಧ್ಯಾಕರ್ಮಗಳನ್ನೂ, ಭಗವಧ್ಯಾನವನ್ನೂ ಮಾಡುತ್ತಿದ್ದುದರಿಂದ ಈ ಸ್ಥಳಕ್ಕೆ **ಗೌತಮಕ್ಷೇತ್ರವೆಂದು** ಪ್ರಸಿದ್ಧಿಯಾಯಿತು.

ಈ ಕ್ಷೇತ್ರವು ಪ್ರಕೃತಿ ಸೌಂದರ್ಯದಿಂದ ಕೂಡಿ ಅತಿ ರಮಣೀಯವಾದ್ದರಿಂದ ರಂಗಕ್ಷೇತ್ರವೆಂದು ಕರೆದರು. ರಂಗ ಎಂದರೆ ಸುಂದರ - ಸೌಂದರ್ಯ. ಅದಕ್ಕೆ ಶ್ರೀ ಶಬ್ದವನ್ನು ಸೇರಿಸಿ ಶ್ರೀರಂಗ ಎಂದು ಕರೆದರು.

ಕ್ಷೇತ್ರವು ರಮಣೀಯ ಸುಂದರತೆಯಿಂದ ಕೂಡಿದ್ದು ಅದರಲ್ಲಿ ನೆಲೆಸಿರುವ ಮೂರ್ತಿಯೂ ಸಹ ಸುಂದರವಾಗಿದ್ದುದರಿಂದ ಆ ಮೂರ್ತಿಯನ್ನು ಶ್ರೀರಂಗನಾಥ (ಸುಂದರ ಮೂರ್ತಿ) ಎಂದೇ ಕರೆದರು (ರಂಗ - ಸುಂದರ - ಸೌಂದರ್ಯ) ಕರೆದರು. ಈ ಹೆಸರು ಶ್ರೀವಿಷ್ಣು ಸಹಸ್ರನಾಮದಲ್ಲಿ ಬರುವುದಿಲ್ಲ. ತದನಂತರ ಕಾಲದಲ್ಲಿ ಎಲ್ಲೆಲ್ಲಿ ಶಯನಮೂರ್ತಿ ಪ್ರತಿಷ್ಠಿತವಾದರೂ ಆ ಮೂರ್ತಿಯನ್ನು ಶ್ರೀರಂಗನಾಥಸ್ವಾಮಿಯೆಂದೇ ಕರೆಯುವರಾದರು.

ಅರವ ಭಾಷೆಯಲ್ಲಿ ಕೋಯಿಲ್ ಎಂದು ಕರೆಯುವರು. ಕೋ= ಯಜಮಾನ (ಪರಾತ್ಪರ ವಸ್ತು) ಇಲ್ = ವಾಸಮಾಡತಕ್ಕ ಸ್ಥಳ. ಕೋಯಿಲ್ = ಪರಾತ್ಪರ ವಸ್ತು ಶ್ರೀಮನ್ನಾರಾಯಣನು ಇರತಕ್ಕ ಸ್ಥಳ ಎಂದರ್ಥವು.

ತಿರುವರಂಗ ನಾರಾಯಣ ಚತುರ್ವೇದಿ ಮಂಗಲ ಎಂಬ ಶಬ್ದವು ಎಲ್ಲಾ ಕ್ಷೇತ್ರಗಳಿಗೂ ಅನ್ವಯಿಸುವುದು. ಶ್ರೀರಂಗ ಕ್ಷೇತ್ರಕ್ಕೂ ತಿರುವರಂಗ ನಾರಾಯಣ ಚತುರ್ವೇದಿ ಮಂಗಲವೆಂದೇ ಹೆಸರು. -

ಪಶ್ಚಿಮರಂಗನಾಥಸ್ವಾಮಿ ಕ್ಷೇತ್ರ- ಗೌತಮಋಷಿಯು ಭಗವಧ್ಯಾನ ಮಗ್ನರಾಗಿರುವಾಗ ಅವರಿಗೆ ಭಗವಂತನು ಶಯನರೂಪದಲ್ಲಿ ಸಾಕ್ಷಾತ್ಕಾರವಾಗಲು ಆ ರೂಪವನ್ನೇ ವಿಗ್ರಹ ಮೂರ್ತಿರೂಪದಲ್ಲಿ ನಿರ್ಮಿಸಿ ಉಭಯಕಾವೇರಿ ಮಧ್ಯದಲ್ಲಿ ಮೇಷಮಾಸ ಶುಕ್ಲ ಸಪ್ತಮಿ ಶನಿವಾರ ಪುನರ್ವಸು ದಿನದಲ್ಲಿ ಪ್ರತಿಷ್ಠಿಸಿ ನಿತ್ಯಾರ್ಚನೆ, ವರ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವಗಳನ್ನು ನಡೆಸುತ್ತಾ ಬಹುಕಾಲ ಆರಾಧಿಸಿ ಬಂದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಲೋಕಪಾವನೆಯಾದ ಕಾವೇರಿಯು ಸಮುದ್ರವನ್ನು ಸೇರುವುದರೊಳಗೆ ಮೂರು ಸ್ಥಳಗಳಲ್ಲಿ ಕವಲೊಡೆದು ಲಂಕೆಯಾಗುತ್ತದೆ. ಶ್ರೀರಂಗಪಟ್ಟಣ, ಶಿವನಸಮುದ್ರ, ಶ್ರೀರಂಗ ಈ ಮೂರು ಸ್ಥಳಗಳಲ್ಲಿಯೂ ಭಗವಂತನು ಶಯನರೂಪದಿಂದ ಸಾನ್ನಿಧ್ಯ ಹೊಂದಿರುತ್ತಾನೆ. ಇದನ್ನು ಕ್ರಮವಾಗಿ ಆದಿರಂಗ, ಮಧ್ಯರಂಗ, ಅಂತ್ಯರಂಗ ಎಂಬುದಾಗಿ ಕರೆಯುತ್ತಾರೆ. ಶ್ರೀರಂಗಕ್ಷೇತ್ರವು ಪ್ರಸಿದ್ಧವಾಗಿ ಶ್ರೀವೈಷ್ಣವರಿಗೆ ಪ್ರಧಾನಕ್ಷೇತ್ರ ಕೇಂದ್ರಸ್ಥಾನವಾಗಿರುವುದರಿಂದ ಅದನ್ನು ಪ್ರಧಾನವಾಗಿಟ್ಟು, ಆ ಕ್ಷೇತ್ರದಿಂದ ಪಶ್ಚಿಮಕ್ಕೆ ಎಂದು ಹೇಳುವುದರಿಂದ ಈ ಕ್ಷೇತ್ರವನ್ನು ಪಶ್ಚಿಮರಂಗನಾಥಸ್ವಾಮಿ ಎಂದು ಕರೆಯುವರು.

ತಿರುವರಂಗ ನಾರಾಯಣ ಚತುರ್ವೇದಿ ಮಂಗಲ -

ಪ್ರಕೃತಿಸೌಂದರ್ಯ, ಗೌತಮಋಷಿಯ ಸಂಬಂಧ, ಪುಣ್ಯಭೂಮಿ, ಲೋಕಪಾವನೆಯಾದ ಕಾವೇರಿ, ಶ್ರೀರಂಗನಾಥಸ್ವಾಮಿ ಭಗವಂತನ ಸಾನ್ನಿಧ್ಯ ಇವು ನಾಲ್ಕೂ

ಸೇರಿರುವುದರಿಂದ, ಭಕ್ತಜನರು ಕಾವೇರಿಯಲ್ಲಿ ಸ್ನಾನಮಾಡಿ ಶ್ರೀರಂಗನಾಥಸ್ವಾಮಿಯನ್ನು ಸೇವಿಸಿ ಕೃತಾರ್ಥರಾಗಲು ಇಲ್ಲಿಗೆ ಬರುವುದರಿಂದಲೂ, ಊರಿನಲ್ಲಿ ವೇದವಿದ್ಯಾ ಪಾರಂಗತರಿದ್ದುದರಿಂದಲೂ, ಊರು ತಿರುವರಂಗ ನಾರಾಯಣ ಚತುರ್ವೇದಿಮಂಗಲವೆಂದು ಕರೆಯಲ್ಪಟ್ಟಿತು.

ಶ್ರೀರಂಗಪಟ್ಟಣ - ಊರು ಕಾವೇರಿಯಿಂದಾವೃತವಾಗಿ ಆಯಕಟ್ಟಿನ ಸನ್ನಿವೇಶದಲ್ಲಿರುವುದರಿಂದ ವ್ಯಾಪಾರವನ್ನನುಸರಿಸಿ, ರಾಜಕೀಯ ಸಂಬಂಧದಿಂದ ಕೋಟೆಯನ್ನು ಕಟ್ಟಿಸಿರುವುದರಿಂದಲೂ ಶ್ರೀರಂಗನಾಥಸ್ವಾಮಿಯ ಸಾನ್ನಿಧ್ಯದಿಂದಲೂ ಶ್ರೀರಂಗಪಟ್ಟಣವೆಂದು ಕರೆಯಲ್ಪಟ್ಟಿರುವುದು.

ಕಾವೇರಿಯು ಕೊಡಗು ಜಿಲ್ಲೆಯ ಮಡಕೇರಿ ತಾಲ್ಲೂಕಿನ ಭಾಗಮಂಡಲದ ಸಮೀಪ ಬ್ರಹ್ಮಗಿರಿಯಲ್ಲಿ ಹುಟ್ಟುತ್ತದೆ. ಇದರ ಉಗಮಸ್ಥಳಕ್ಕೆ ತಲಕಾವೇರಿ ಎಂದು ಹೆಸರು. ಅಲ್ಲಿಂದ ಮಡಕೇರಿ ತಾಲ್ಲೂಕಿನ ಬಾವಲಿಯವರೆಗೆ ಆಗ್ನೇಯಾಭಿಮುಖವಾಗಿ ಹರಿದು ಮುಂದೆ ಈಶಾನ್ಯ ಮುಖವಾಗಿ ಮೊದಲು ವೀರರಾಜಪೇಟೆ ತಾಲ್ಲೂಕಿನ ಉತ್ತರಗಡಿಯಾಗಿ ಅನಂತರ ಸೋಮವಾರಪೇಟೆ ತಾಲ್ಲೂಕಿನ ಶಿರಂಗಾಲದವರೆಗೂ ಪ್ರವಹಿಸಿ ಅಲ್ಲಿಂದ ಮುಂದೆ ಹಾಸನ ಜಿಲ್ಲೆಯಲ್ಲಿ ಪ್ರವೇಶಿಸುತ್ತದೆ. ಅಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಾಮನಾಥಪುರನ ಮೂಲಕ ಮೈಸೂರು ಜಿಲ್ಲೆ ಚುಂಚನಕಟ್ಟೆಯಲ್ಲಿ೨೭ ಅಡಿ ಎತ್ತರದಿಂದ ಜಲಪಾತವಾಗಿ ಪರಿಣಮಿಸಿ ಮುಂದೆ ಕೃಷ್ಣರಾಜಸಾಗರವನ್ನು ಸೇರುತ್ತದೆ. ಮುಂದೆ ಹರಿದು ಶ್ರೀರಂಗಪಟ್ಟಣದ ಸಮೀಪದಲ್ಲಿ ಕವಲೊಡೆದು ಅದನ್ನು ದ್ವೀಪವನ್ನಾಗಿಸಿ ಮುಂದೆ ಒಂದಾಗಿ ಸೇರುತ್ತದೆ. ಅನಂತರ ತಿರುಕೂಡಲು ನರಸೀಪುರಕ್ಕೆ ಬಂದು ತಲಕಾಡನ್ನು ದಾಟಿ ಕೊಳ್ಳೇಗಾಲದ ಹತ್ತಿರ ಬರುತ್ತದೆ. ಮುಂದೆ ಕರ್ನಾಟಕ ಮತ್ತು ತಮಿಳುನಾಡು ದೇಶಕ್ಕೆ ಗಡಿ ರೇಖೆಯಾಗಿ ಪ್ರವಹಿಸುತ್ತದೆ. ಮುಂದೆ ಪ್ರವಹಿಸಿ ಶಿವನಸಮುದ್ರದ ಬಳಿ ಪುನಃ ಕವಲೊಡೆದು ಗಗನಚುಕ್ಕಿ, ಭರಚುಕ್ಕಿಗಳಾಗಿ ೧೦೦ ಅಡಿಗಳಷ್ಟು ಧುಮುಕಿ ಮತ್ತೆ ಒಂದುಗೂಡಿ ಮುಂದೆ ಪ್ರವಹಿಸುತ್ತದೆ. ಇಲ್ಲಿಂದ ಕಾವೇರಿಯ ವೇಗವು ಹೆಚ್ಚುತ್ತದೆ. ಮುಂದೆ ಹೊಗೇನಕಲ್ಲಿನ ಬಳಿ ಪುನಃ ಧುಮುಕಿ ಮುಂದೆ ತಮಿಳುನಾಡಿಗೆ ಸೇರುತ್ತದೆ. ಮುಂದೆ ಕೊಯಮತ್ತೂರು, ತಿರುಚೀರಪಲ್ಲಿ, ತಂಜಾವೂರು ಜಿಲ್ಲೆಗಳ ಮೂಲಕ ಕಾವೇರಿ ಪಟ್ಟಣದ ಬಳಿ ಬಂಗಾಳಕೊಲ್ಲಿಯನ್ನು ಸೇರುತ್ತದೆ.

ಕಾವೇರೀ ನದಿಗೆ ಸುಮಾರು ೪೦ ಉಪನದಿಗಳು ಸೇರುತ್ತವೆ. ಮೊದಲ ಉಪನದಿ ಕನ್ನಿಕೆ. ಅಲ್ಲಿಂದ ಆರು ಮೈಲಿ ದೂರದಲ್ಲಿ ನಿಡುಹೊಳೆ. ಅದಾದ ನಂತರ ಚೆರವುಹೊಳೆ. ಪುಲಿಕೋಟಿ ಎಂಬ ಸ್ಥಳದಲ್ಲಿ ತಂತ್ರಿನದಿ ಅನಂತರ ಕಕ್ಕಬೆ ಎಂಬ ಹೊಳೆ ಸೇರುತ್ತದೆ. ರಂಗ ಸಮುದ್ರದ ಬಳಿ ಬೆಕ್ಕಿಹೊಳೆ. ಅನಂತರ ಹಾರಂಗಿಹೊಳೆ. ಅನಂತರ ಹೇಮಾವತಿ. ಲಕ್ಷ್ಮಣತೀರ್ಥ. ಅನಂತರ ಲೋಕಪಾವನಿ ಇದು ಶ್ರೀರಂಗಪಟ್ಟಣದ ಕರೀಘಟ್ಟದ ಬಳಿ ಸೇರುವುದು. ತಿರುಮಕೂಡಲು ನರಸೀಪುರದ ಬಳಿ ಕಪಿಲಾ. ಸುವರ್ಣಾವತಿ. ಮುಂದೆ ಶಿಂಷಾ, ಶಿವನಸಮುದ್ರದ ಹತ್ತಿರ ಸೇರುತ್ತದೆ. ಅನಂತರ ಅರ್ಕಾವತಿ ನದಿ.

ಈ ನದಿಯ ಉದ್ದ ಸುಮಾರು ೧೧೦೦ ಕಿ.ಮೀ. ಗಳು. ಇದಕ್ಕೆ ಅನೇಕ ಕಡೆಗಳಲ್ಲಿ ಸುಮಾರು ೧೨ ಕಡೆಗಳಲ್ಲಿಅಣೆಕಟ್ಟುಗಳನ್ನು ಹಾಕಿ ಕಾಲುವೆಗಳ ಮೂಲಕ ನೀರಾವರಿ ಸೌಲಭ್ಯವನ್ನು ಕಲ್ಪಿಸಿರುವರು. ಈ ನದಿಗೆ ಅನೇಕ ಕಡೆಗಳಲ್ಲಿ ಪ್ರಯಾಣ ಸೌಕರ್ಯಕ್ಕಾಗಿ ಸೇತುವೆಗಳನ್ನು ಕಟ್ಟಿರುವರು. ಈ ನದಿಯ ದಂಡೆಯಲ್ಲಿ ಅನೇಕ ದೊಡ್ಡ ಊರುಗಳಿವೆ. ಅಲ್ಲದೆ ಅನೇಕ ಪುಣ್ಯ ಕ್ಷೇತ್ರಗಳೂ ಇವೆ. ಇದು ಪವಿತ್ರವಾದ ನದಿ.

ಕಾವೇರಿಯ ಉದ್ಭವ ಚರಿತ್ರೆ - ಪೂರ್ವಕಾಲದಲ್ಲಿ ಕವೇರನೆಂಬ ರಾಜ ಬ್ರಹ್ಮನನ್ನು ಕುರಿತು ಕಠಿಣ ತಪಸ್ಸನ್ನಾಚರಿಸಿದನು. ಅವನಿಗೆ ಬ್ರಹ್ಮದೇವನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತ್ಯಕ್ಷನಾಗಿ ಮೋಕ್ಷವುಂಟಾಗಬೇಕಾದರೆ ಇನ್ನೂ ಸ್ವಲ್ಪಕಾಲ ಕಾಯಬೇಕೆಂದೂ ಅಲ್ಲಿಯವರೆಗೆ ಬ್ರಹ್ಮನ ಮಗಳಾದ ವಿಷ್ಣುಮಾಯೆಯನ್ನು ತನ್ನ ಮಗಳನ್ನಾಗಿ ಸ್ವೀಕರಿಸಿ ಸಾಕಬೇಕೆಂದೂ ತಿಳಿಸಿದನು. ಅದರಂತೆ ಕವೇರ ರಾಜನು ವಿಷ್ಣುಮಾಯೆಯನ್ನು ತನ್ನ ಅರಮನೆಯಲ್ಲಿ ಸಾಕಿದನು. ವಿಷ್ಣುಮಾಯೆ ದೊಡ್ಡವಳಾದ ಮೇಲೆ ತಪಸ್ಸು ಮಾಡಲು ಹಿಮಾಲಯಕ್ಕೆ ತೆರಳಿದಳು. ಅವಳ ತಪಸ್ಸಿನಿಂದ ಕವೇರ ರಾಜನಿಗೆ ಮೋಕ್ಷ ಪ್ರಾಪ್ತವಾಯಿತು. ವಿಷ್ಣುಮಾಯೆಯ ತಪಸ್ಸಿಗೆ ಮೆಚ್ಚಿ ವಿಷ್ಣು ಪ್ರತ್ಯಕ್ಷನಾಗಿ ಅವಳಿಗೆ ಎರಡು ವರಗಳನ್ನು ಕೊಟ್ಟನು. ಅವಳು ಸಹ್ಯಾದ್ರಿಪರ್ವತಗಳಲ್ಲಿ ನದಿಯಾಗಿ ಹುಟ್ಟಿ ಹರಿಯುವುದು. ಇನ್ನೊಂದು ಮಾನವ ರೂಪದಲ್ಲಿ ಲೋಪಾಮುದ್ರೆ ಎಂಬ ಹೆಸರಿನಿಂದ ಅಗಸ್ತ್ಯಋಷಿಯ ಪತ್ನಿಯಾಗಿರುವುದು. ವಿಷ್ಣುಮಾಯೆಗೆ ವರಕೊಡುವ ಸಮಯದಲ್ಲಿ ಅಗಸ್ತ್ಯಋಷಿ ಬ್ರಹ್ಮದೇವನನ್ನು ಕುರಿತು ತಪಸ್ಸು ಮಾಡುತ್ತಿದ್ದರು. ಬ್ರಹ್ಮದೇವನು ಅಗಸ್ತ್ಯರಿಗೆ ಪ್ರತ್ಯಕ್ಷನಾಗಿ ಲೋಪಾಮುದ್ರೆಯನ್ನು ವಿವಾಹವಾಗಲು ಹೇಳಿದನು. ಅದರಂತೆ ಅಗಸ್ತ್ಯರು ಲೋಪಾಮುದ್ರೆಯ ರೂಪತಳೆದಿದ್ದ ವಿಷ್ಣುಮಾಯೆಯ ಬಳಿಬಂದು ಆಕೆಯನ್ನು ವಿವಾಹವಾದರು.

ವಿವಾಹವಾದ ಕೆಲವು ಕಾಲದ ಮೇಲೆ ದಕ್ಷಿಣ ದೇಶದಲ್ಲಿ ನೀರಿಗೆ ಅಭಾವ ಉಂಟಾಯಿತು. ಆಗ ಅಗಸ್ತ್ಯರು ಲೋಪಾಮುದ್ರೆಯನ್ನು ನೋಡಿ ನೀನು ಜಲರೂಪವನ್ನು ತಾಳಿ ತನ್ನ ಕಮಂಡಲದಲ್ಲಿರುವಂತೆ ತಿಳಿಸಿದರು. ಲೋಪಾಮುದ್ರೆಯು ಜಲರೂಪವನ್ನು ತಾಳಿ ಅಗಸ್ತ್ಯರ ಕಮಂಡಲವನ್ನು ಸೇರಿದಳು. ಅಗಸ್ತ್ಯರು ಕಮಂಡಲವನ್ನು ಹಿಡಿದುಕೊಂಡು ಸಹ್ಯಪರ್ವತದ ಬ್ರಹ್ಮಗಿರಿಗೆ ಹೋದರು. ಆ ಸ್ಥಳದಲ್ಲಿ ವಿಷ್ಣುವು ನೆಲ್ಲಿಮರದ ರೂಪವನ್ನು ತಳೆದಿದ್ದನು. ಬ್ರಹ್ಮದೇವನು ಆ ಮರವನ್ನು ಪೂಜಿಸಲು ಕೈಲಾಸದಲ್ಲಿ ಹರಿಯುತ್ತಿದ್ದ ವಿರಜಾ ನದಿಯ ನೀರನ್ನು ತನ್ನ ಶಂಖದಿಂದ ತಂದು ಆ ಮರಕ್ಕೆ ಎರೆಯುತ್ತಿದ್ದ. ಆ ಸಮಯದಲ್ಲಿ ಅಲ್ಲಿಗೆ ಆಗಮಿಸಿದ ಅಗಸ್ತ್ಯರು ತಮ್ಮ ಕಮಂಡಲವನ್ನು ಅಲ್ಲಿದ್ದ ಒಂದು ಕಲ್ಲಿನ ಮೇಲೆ ಇಟ್ಟು ಸ್ನಾನಕ್ಕೆ ಸ್ವಲ್ಪ ದೂರ ಹೋದರು. ಅದೇ ಸಮಯದಲ್ಲಿ ಬಿರುಗಾಳಿಯೆದ್ದು ಕಲ್ಲಿನ ಮೇಲಿದ್ದ ಕಮಂಡಲವು ಮಗಚಿಕೊಂಡಿತು. ಅದರಲ್ಲಿದ್ದ ನೀರು ವಿರಜಾನದಿಯ ನೀರನ್ನು ಕೂಡಿಕೊಂಡಿತು. ಕಾವೇರಿತೀರ್ಥ ಕಮಂಡಲುವಿನಿಂದ ನದಿಯಾಗಿ ಹರಿಯಿತು. ವಿಷ್ಣುಮಾಯೆಯಾಗಿದ್ದ ಲೋಪಾಮುದ್ರೆಯು ಈ ರೀತಿ ನದೀರೂಪವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಾಳಿದಳು. ಕವೇರನು ಅವಳನ್ನು (ವಿಷ್ಣುಮಾಯೆ) ಪಾಲಿಸಿದುದರ ಕಾರಣದಿಂದ ಅವಳಿಗೆ (ಆ ನದಿಗೆ) ಕಾವೇರಿ ಎಂದು ಹೆಸರು ಬಂದಿತು. - ಅಗ್ನಿಪುರಾಣ

೨. ಒಂದು ಕಾಲದಲ್ಲಿ ವಿಂಧ್ಯಪರ್ವತವು ಸೂರ್ಯನ ಎತ್ತರಕ್ಕಿರಬೇಕೆಂದು ಬಯಸಿ ಬೆಳೆಯುತ್ತ ಸೂರ್ಯ ಮತ್ತು ನಕ್ಷತ್ರಗಳ ದಾರಿಗೆ ಅಡ್ಡವಾಗಿ ನಿಂತಿತು. ಅವುಗಳಿಂದ ಬರುವ ಬೆಳಕಿಗೆ ಅಡಚಣೆಯುಂಟಾಯಿತು. ವಿಂಧ್ಯಪರ್ವತದ ಬೆಳವಣಿಗೆಯನ್ನು ತಡೆಯಬೇಕೆಂದು ದೇವತೆಗಳು ಅಗಸ್ತ್ಯಋಷಿಯನ್ನು ಕೇಳಿಕೊಂಡರು. ಅದಕ್ಕೆ ಒಪ್ಪಿದ ಅಗಸ್ತ್ಯರು ಈಶ್ವರನನ್ನು ಕುರಿತು ತಪಸ್ಸು ಮಾಡಿ ತಮಗೆ ಬೇಕಾದ ಆಧ್ಯಾತ್ಮಿಕ ಶಕ್ತಿಯನ್ನು ಸಂಪಾದಿಸಿಕೊಂಡರು. ಅಗಸ್ತ್ಯರ ಅನುಕೂಲಕ್ಕಾಗಿ ಕೈಲಾಸದಿಂದ ಹರಿಯುತ್ತಿದ್ದ ಕಾವೇರಿಗೆ ಅವರ ಕಮಂಡಲದಲ್ಲಿರುವಂತೆ ಆಜ್ಞಾಪಿಸಿದರು. ಅದರಂತೆ ಕಾವೇರಿಯು ಅಗಸ್ತ್ಯರ ಕಮಂಡಲವನ್ನು ಸೇರಿದಳು. ಅಗಸ್ತ್ಯರು ಆ ಕಮಂಡಲವನ್ನು ಹಿಡಿದು ಹಿಮಾಲಯದಿಂದ ದಕ್ಷಿಣಕ್ಕೆ ಹೊರಟರು. ಅವರು ವಿಂಧ್ಯಪರ್ವತದ ಬಳಿ ಬಂದಾಗ ವಿಂಧ್ಯಪರ್ವತವು ಅಗಸ್ತ್ಯರಿಗೆ ಭಕ್ತಿಯಿಂದ ನಮಸ್ಕರಿಸಿತು. ಆಗ ಅಗಸ್ತ್ಯರು ತಾವು ದಕ್ಷಿಣಕ್ಕೆ ಹೋಗಿ ಅಲ್ಲಿಂದ ಹಿಂತಿರುಗಿ ಬರುವವರೆಗೂ ಮೇಲಕ್ಕೇಳದೆ ಹಾಗೆಯೇ ಇರಬೇಕೆಂದು ವಿಂಧ್ಯಪರ್ವತಕ್ಕೆ ತಿಳಿಸಿದರು. ಅಗಸ್ತ್ಯರು ಪುನಃ ಉತ್ತರ ಪ್ರದೇಶಕ್ಕೆ ಬರಲೇ ಇಲ್ಲ. ಆ ಕಾರಣದಿಂದ ವಿಂಧ್ಯಪರ್ವತವು ಮೇಲಕ್ಕೇಳದೆ ಅದೇ ಸ್ಥಿತಿಯಲ್ಲಿರುವುದು.

ದಕ್ಷಿಣಕ್ಕೆ ಬಂದ ಅಗಸ್ತ್ಯರು ಬ್ರಹ್ಮಗಿರಿಯ ಬಳಿ ತಪಸ್ಸು ಮಾಡುತ್ತಿದ್ದರು. ಆ ಸಮಯದಲ್ಲಿ ಸೂರಪದ್ಮನೆಂಬ ಅಸುರನು ತನ್ನ ತಪಶ್ಶಕ್ತಿಯಿಂದ ಆ ಪ್ರದೇಶದಲ್ಲಿ ಮಳೆಯಾಗದಂತೆ ಮಾಡಿದ್ದನು. ಇದರಿಂದ ಅಸಮಾಧಾನ ಹೊಂದಿದ ಇಂದ್ರನು ದಕ್ಷಿಣ ದೇಶದಲ್ಲಿ ನೀರು ಸಮೃದ್ಧಿಯಾಗಿರಲು ಯೋಚಿಸಿ ಗಣಪತಿಯಲ್ಲಿ ಪ್ರಾರ್ಥಿಸಿದನು. ಆಗ ಗಣಪತಿಯು ಕಾಗೆ ರೂಪದಲ್ಲಿ ವಹಿಸಿ ಅಗಸ್ತ್ಯರು ತಮ್ಮ ಪಕ್ಕದಲ್ಲಿಟ್ಟುಕೊಂಡಿದ್ದ ಕಮಂಡಲವನ್ನು ಮಗುಚಿ ಹಾಕಲು ಅದರಲ್ಲಿ ಜಲರೂಪದಿಂದಿದ್ದ ಕಾವೇರಿಯು ಕೂಡಲೇ ಪ್ರವಾಹರೂಪವಾಗಿ ಹರಿದಳು.

3. ಸಂತಾನವಿಲ್ಲದ ಕವೇರಮುನಿಯು ಸಂತಾನಕ್ಕಾಗಿ ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿದ ಬ್ರಹದೇವನು ಅವನಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರತ್ಯಕ್ಷನಾಗಿ ತನ್ನ ಸಾಕು ಪುತ್ರಿ ಲೋಪಾಮುದ್ರೆಯನ್ನು ಅವನಿಗೆ ಕೊಟ್ಟನು. ಅಂದಿನಿಂದ ಲೋಪಾಮುದ್ರೆ ಕವೇರನ ಮಗಳಾಗಿ ಕಾವೇರಿ ಎಂಬ ಹೆಸರನ್ನು ಪಡೆದಳು. ತನ್ನ ತಂದೆಗೆ ಮೋಕ್ಷವುಂಟಾಗಲೆಂದು ಬಯಸಿದ ಕಾವೇರಿ ತಾನು ನದಿಯಾಗಿ ಹರಿಯುವಂತೆಯೂ ಮತ್ತು ತನ್ನಲ್ಲಿ ಸ್ನಾನ ಮಾಡಿದವರು ತಮ್ಮ ಪಾಪಗಳಿಂದ ಮುಕ್ತರಾಗುವಂತೆಯೂ ವರವನ್ನು ಕೊಡಬೇಕೆಂದು ಬ್ರಹ್ಮದೇವನನ್ನು ಕುರಿತು ಬ್ರಹ್ಮಗಿರಿಯಲ್ಲಿ ತಪಸ್ಸು ಮಾಡಿದಳು. ಅವಳ ತಪಸ್ಸಿಗೆ ಮೆಚ್ಚಿದ ಬ್ರಹ್ಮದೇವನು ಅವಳು ಕೇಳಿದ ವರವನ್ನು ಕೊಟ್ಟನು.

ಕಾವೇರಿ ಬ್ರಹ್ಮಾಗಿರಿಯಲ್ಲಿ ತಪಸ್ಸು ಮಾಡುತ್ತಿದ್ದ ಸಮಯದಲ್ಲಿ ಅಲ್ಲಿಗೆ ಬಂದ ಅಗಸ್ತ್ಯಋಷಿಯು ಅವಳ ತಪಸ್ಸು ಮುಗಿದ ಮೇಲೆ ಅವಳನ್ನು ಕಂಡು ತನ್ನನ್ನು ವಿವಾಹವಾಗಲು ಕೇಳಿದನು. ಕಾವೇರಿ, ಅಗಸ್ತ್ಯರು ತನ್ನನ್ನು ಒಂಟಿಯಾಗಿ ಬಿಟ್ಟಿರಕೂಡದೆಂದೂ ಒಂದು ವೇಳೆ ಹಾಗೆ ಬಿಟ್ಟರೆ ತಾನು ನದಿ ರೂಪವನ್ನು ಹೊಂದಿ ಪ್ರವಹಿಸಲು ಸ್ವಾತಂತ್ರ್ಯವಿರಬೇಕೆಂದು ಹೇಳಲು ಅಗಸ್ತ್ಯರು ಅದಕ್ಕೆ ಒಪ್ಪಿ ಆಕೆಯನ್ನು ವಿವಾಹವಾದರು. ಒಂದು ಕಾಲದಲ್ಲಿ ನೀರಿನ ರೂಪದಲ್ಲಿ ಕಾವೇರಿ ಇದ್ದ ಕಮಂಡಲವನ್ನು ಅಗಸ್ತ್ಯರು ಶಿಷ್ಯನ ಕೈಗೆ ಕೊಟ್ಟು ಸಂಧ್ಯೋಪಾಸನೆಗೆ ಕನ್ನಿಕಾ ನದಿಗೆ ಹೋದರು. ಆಗ ಕಾವೇರಿಯು ಅಗಸ್ತ್ಯರು ತಮ್ಮ ಮಾತಿಗೆ ತಪ್ಪಿದರೆಂದು ಕಮಂಡಲದಿಂದ ಬ್ರಹ್ಮಗಿರಿಯ ತೀರ್ಥಕುಂಡಿಗೆ ಬಂದು ಅಲ್ಲಿಂದ ನದಿಯಾಗಿ ಪ್ರವಹಿಸಿದಳು. ಆಗ ಅಗಸ್ತ್ಯರ ಶಿಷ್ಯರು ಅವಳು ನದಿಯಾಗಿ ಹರಿಯುವುದನ್ನು ತಡೆದರು. ಕಾವೇರಿಯು ತೀರ್ಥಗುಂಡಿಯ ಮುಂದಿರುವ ತೀರ್ಥಕೊಳದ ಬಲಭಾಗದ ಇಳಿಜಾರಿನಲ್ಲಿ ಕಲ್ಲುಬಂಡೆಯ ಅಡಿಭಾಗದಲ್ಲಿ ಹರಿದು ಕೆಳಗೆ ಕಾಣಿಸಿಕೊಂಡಳು. ಅಲ್ಲಿಂದ ಭಾಗಮಂಡಲ ಕ್ಷೇತ್ರ ತಲುಪಿದಾಗ ಮೊದಲನೆಯ ಉಪನದಿ ಕನ್ನಿಕೆ ಕಾವೇರಿಯನ್ನು ಸೇರಿಕೊಂಡಳು. ತಮ್ಮ ಪತ್ನಿ ತಮಗೆ ತಿಳಿಸದೆ ನದಿಯಾಗಿ ಹರಿದುದಕ್ಕೆ ಅಗಸ್ತ್ಯರು ಕೋಪಗೊಳ್ಳಲು ಬ್ರಹ್ಮದೇವನು ಅವರಿಗೆ ಸಮಾಧಾನಪಡಿಸಿದನು. ಅನಂತರ ಅಗಸ್ತ್ಯರು ನದಿಯಾಗಿ ಹರಿಯುತ್ತಿದ್ದ ಕಾವೇರಿಯನ್ನು ಬ್ರಹ್ಮಗಿರಿಯಿಂದ ಸುಮಾರು 40 ಕಿ.ಮೀಟರ್ ದೂರದಲ್ಲಿರುವ ಬಲಮುರಿಯಲ್ಲಿ ಸಂಧಿಸಿ ಪುನಃ ಅವರ ಪತ್ನಿಯಾಗಿರಲು ತಿಳಿಸಿದರು. ಆಗ ಕಾವೇರಿಯು ಬ್ರಹ್ಮ ತನಗೆ ಕೊಟ್ಟ ವರದಂತೆ ಒಂದು ರೂಪದಲ್ಲಿ ಸ್ತ್ರೀಯಾಗಿದ್ದು ಅಗಸ್ತ್ಯರ ಪತ್ನಿಯಾಗಿ ಇರುವುದಾಗಿಯೂ, ಇನ್ನೊಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೂಪದಲ್ಲಿ ನದಿಯಾಗಿ ಪ್ರವಹಿಸುವುದಾಗಿಯೂ ಒಪ್ಪಿಕೊಂಡಳು. ಕಾವೇರಿ ಪೂರ್ವಸಮುದ್ರವನ್ನು ಸೇರುವವರೆಗೆ ದಾರಿಯಲ್ಲಿ ಲೋಕಕ್ಷೇಮವಾಗಿ ಯಾವ ಯಾವ ಸ್ಥಳ ಮತ್ತು ಕ್ಷೇತ್ರಗಳ ಮೂಲಕ ಹರಿದು ಹೋಗಲು ಕಾವೇರಿಗೆ ತಿಳಿಸಿದರು.

ಕಾವೇರಿ ದೇವತೆಯನ್ನು ಕೊಡಗರು ತಮ್ಮ ಕುಲದೇವತೆ ಎಂಬುದಾಗಿ ಭಾವಿಸಿ ಪೂಜಿಸುವರು. ಕಾವೇರಿ ದೇವತೆಯು ತಮ್ಮನ್ನು ಕಾಪಾಡುವಳೆಂದು ಕೊಡಗರಿಗೆ ಅಪಾರವಾದ ನಂಬಿಕೆ ಇರುವುದು.

ಕನ್ನಡ ವಿಶ್ವಕೋಶ - ಸ್ಕಂದಪುರಾಣ

ಶ್ರೀರಂಗನಾಥಸ್ವಾಮಿ ದೇವಸ್ಥಾನ (ಕಾಲವಿಮರ್ಶೆ) -

ಗೌತಮ ಋಷಿಯಿಂದ ಪ್ರತಿಷ್ಠಿತವಾಗಿ ಪೂಜಾದಿಗಳು ನಡೆದುಬಂದಿರುವುದರಿಂದ ಶ್ರೀರಂಗನಾಥಸ್ವಾಮಿಯು ಪ್ರಾಚೀನ ಮೂರ್ತಿ. ಗೌತಮಋಷಿಯ ಕಾಲ ತಿಳಿದುಬರಲಿಲ್ಲ. ಇನ್ನು ಕಾಲದ ವಿಮರ್ಶೆಗೆ ಅವಕಾಶವೇ ಇರುವುದಿಲ್ಲ. ಒಂದು ವಟವೃಕ್ಷದ ಕೆಳಗೆ ಪ್ರತಿಷ್ಠೆ ಮಾಡಲ್ಪಟ್ಟು ಅಲ್ಲಿಯೇ ಪೂಜೆ ನಡೆಯುತ್ತಾ ಬಂದಿತು. ಕಾಲಕ್ರಮದಲ್ಲಿ ಒಂದು ಚಪ್ಪರವನ್ನು ನಿರ್ಮಿಸಿದರು. ತದನಂತರ ಕಾಲದಲ್ಲಿ ಅದಕ್ಕೆ ಒಂದು ಆವರಣ, ಗರ್ಭಗೃಹ ಕಟ್ಟಿಸಿದಂತೆ ಕಂಡುಬರುವುದು. ಗರ್ಭಗೃಹವನ್ನು ಕಟ್ಟುವಾಗಲೇ ಆಗಮ ಮತ್ತು ಶಿಲ್ಪಶಾಸ್ತ್ರವನ್ನನುಸರಿಸಿ ಈಗಿರುವ ಮತ್ತು ದೇವಸ್ಥಾನದ ನಕ್ಷೆಯನ್ನು ಬರೆದ ಮೇಲೆಯೇ ಗರ್ಭಗೃಹವನ್ನು ನಿರ್ಮಿಸಿರುವರು. ಕಾಲಕ್ರಮದಲ್ಲಿ ಐಶ್ವರ್ಯ ಮತ್ತು ಧರ್ಮಪ್ರಭುಗಳ ಅನುಕೂಲ್ಯಗಳನ್ನನುಸರಿಸಿ ಮುಂದು ಮುಂದಿನ ಕಟ್ಟಡಗಳು ಕಟ್ಟಲ್ಪಟ್ಟಿರುವುದು.

ಭಾರತೀಯ ಸಂಸ್ಕೃತಿ, ವೇದಾಂತಪ್ರಕ್ರಿಯೆ, ಮಹಾತ್ಮೆ, ಚರಿತ್ರೆ, ಶಿಲಾಶಾಸನಗಳು, ಶಿಲ್ಪಶಾಸ್ತ್ರ, ಆಗಮಶಾಸ್ತ್ರ ಇಷ್ಟನ್ನೂ ಮನಸ್ಸಿನಲ್ಲಿಟ್ಟುಕೊಂಡು ಈ ಗ್ರಂಥವನ್ನು ಬರೆಯಲಾಗಿದೆ.

ಶ್ರೀರಂಗನಾಥಸ್ವಾಮಿಗೆ ಧರ್ಮವು ಕೊಟ್ಟ ಶಾಸನಗಳು ನಾಲ್ಕು ಮಾತ್ರ. ಅದಕ್ಕೆ ಸೇರಿದಂತೆ ಇತರ ಧರ್ಮಗಳನ್ನನುಸರಿಸಿದ ಶಾಸನಗಳು ೮,೧೦ ದೊರಕುತ್ತದೆ. ಇವುಗಳೆಲ್ಲಾ ಆ ದೇವಸ್ಥಾನದ ಗರ್ಭಗೃಹ, ನವರಂಗ, ಪ್ರಾಕಾರಗೋಡೆಗಳ ಮೇಲೆ ಬರೆದಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೌತಮರು ಶ್ರೀರಂಗನಾಥಮೂರ್ತಿಯನ್ನು ಒಂದು ವಟವೃಕ್ಷದ ಕೆಳಗೆ ಪ್ರತಿಷ್ಠಿಸಿ ಪೂಜಿಸಿರುವುದು ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಹಾಗಾದರೆ ಪ್ರತಿಷ್ಠೆಯಾದ ಮೇಲೆ ಪೂಜೆ ನಡೆಯುತ್ತಿರುವಾಗ ಗರ್ಭಗೃಹ ಕಟ್ಟಡ ವಿಮಾನ ಕಲಶ ಹೇಗೆ ಕಟ್ಟಿದರು? ಆ ರೀತಿ ಸಂದರ್ಭ ಬಂದರೆ ಆಗಮ ಶಾಸ್ತ್ರ ರೀತಿಯಾಗಿ ದೇವರ ಶಕ್ತಿಯನ್ನು ಉದುಕ ಕುಂಭದಲ್ಲಿ ಆವಾಹನೆ ಮಾಡಿ ಒಂದೆಡೆ ಇಟ್ಟು ಅದಕ್ಕೆ ಪೂಜಾದಿಗಳನ್ನು ನಡೆಸಿ ಗರ್ಭಗೃಹ ಕಟ್ಟಡ ಕಟ್ಟಿಮುಗಿದ ಮೇಲೆ ಉದುಕ ಕುಂಭದಲ್ಲಿನ ಶಕ್ತಿಯನ್ನು ಪುನಃ ಮೂಲವಿಗ್ರಹದಲ್ಲಿ ಸೇರಿಸುವರು, ಆ ರೀತಿ ನಡೆದಿರಬಹುದು.

ಇನ್ನೊಂದು ವಿಧ - ದೇವಸ್ಥಾನದ ಕಾಲ ವಿಮರ್ಶೆ-

ಶ್ರೀರಂಗನಾಥಸ್ವಾಮಿಯು ಗೌತಮ ಮುನಿಯಿಂದ ಪ್ರತಿಷ್ಠಿತವಾಯಿತೆಂದು ಸ್ಪಷ್ಟವಾಗಿ ಹೇಳಿರುವುದು. ಆದ್ದರಿಂದ ವಿಮರ್ಶನೆಗೆ ಅವಕಾಶವಿಲ್ಲ. ಗೌತಮ ಮುನಿಗಳ ಕಾಲ ನಮಗೆ ಸರಿಯಾಗಿ ತಿಳಿಯದು ಎಂದು ಒಂದು ಮಾತಿನಲ್ಲಿ ಹೇಳಿದರೆ ಸಾಕು.

ತಿರುಪತಿ ತಿಮ್ಮಪ್ಪನ ಕೈಂಕರ್ಯವನ್ನು ನಡೆಸಿದ ಮಹಾವಿದ್ವಾನ್ ಅನಂದಾಳ್ವಾರು ಮತ್ತು ಅದ್ವೈತಮತ ವಿದ್ವಾಂಸರಾದ ಮಾಧವರೂ ಸಹ ಶ್ರೀರಂಗಪಟ್ಟಣದ ಕಿರಂಗೂರು ಸಮೀಪದಲ್ಲಿ ವಾಸವಾಗಿದ್ದರು. ಅವರುಗಳು ಶ್ರೀರಂಗನಾಥಸ್ವಾಮಿಯನ್ನು ಸೇವಿಸುವುದಕ್ಕಾಗಿ ಬರಲಿಲ್ಲವೆ? ಅವರು ಶ್ರೀರಂಗನಾಥಸ್ವಾಮಿಯನ್ನು ಸೇವಿಸಿದ್ದಾಗಿ ಎಲ್ಲಿಯೂ ಹೇಳಿರುವುದಿಲ್ಲ. ಅನಂದಾಳ್ವಾರ ಕಾಲ A.D. 1054-1154. ವಿದ್ವಾತ್ ಪ್ರಸಿದ್ಧರಾದ ಪರಾಶರ ಭಟ್ಟರು ಸುಮಾರು A.D. 1140ರ ಕಾಲದಲ್ಲಿ ಶ್ರೀರಂಗಪಟ್ಟಣಕ್ಕೆ ಬಂದವರಾದರೂ ಶ್ರೀರಂಗನಾಥಸ್ವಾಮಿಯನ್ನು ಸೇವಿಸಿದ್ದಾಗಿ ಹೇಳಿರುವುದಿಲ್ಲ. ಶ್ರೀರಂಗಪಟ್ಟಣಕ್ಕೆ ಬಂದಿದ್ದರೆಂದು ಹೇಳಿದಾಗಲೇ ಶ್ರೀರಂಗನಾಥಸ್ವಾಮಿ ಪ್ರತಿಷ್ಠಿತರಾಗಿದ್ದರೆಂದು ತಿಳಿಯಬೇಕು ಇಲ್ಲವಾದಲ್ಲಿ ಆ ಊರಿಗೆ ಆ ಹೆಸರೇ ಬರುತ್ತಿರಲಿಲ್ಲ. ಅಲ್ಲದೆ ಶ್ರೀರಾಮಾನುಜರು A.D. 1098 ರಲ್ಲಿ ಈ ದೇಶಕ್ಕೆ ಬಂದು ೧೨ ವರ್ಷಗಳ ಕಾಲ ಇಲ್ಲಿದ್ದಾಗ ಒಂದು ದಿನವೂ ಈ ದೇವರನ್ನು ಸೇವಿಸಿದ್ದಾಗಿ ಹೇಳಿರುವುದಿಲ್ಲ. ಆದ್ದರಿಂದ ಆ ಕಾಲದಲ್ಲಿ ಶ್ರೀರಂಗನಾಥಸ್ವಾಮಿಯು ಪ್ರತಿಷ್ಠಿತರಾಗಿರಲಿಲ್ಲವೆ? ವೇದಾಂತದೇಶಿಕರು ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇಶಕ್ಕೆ ಬಂದಾಗ ಅವರು ಶ್ರೀರಂಗನಾಥಸ್ವಾಮಿಯ ದರ್ಶನಕ್ಕೆ ಬರಲಿಲ್ಲವೆ? ಗ್ರಂಥಗಳಲ್ಲಿ ಬರೆಯಲಿಲ್ಲವೆಂಬ ಒಂದು ಕಾರಣದಿಂದ ವಿಗ್ರಹಮೂರ್ತಿಯು ಪ್ರತಿಷ್ಠಿತವಾಗಿರಲಿಲ್ಲವೆಂದು ಹೇಳುವುದು ಸರಿಹೋಗುವುದಿಲ್ಲ. ಎಷ್ಟೋ ವಿಷಯಗಳು ಗ್ರಂಥಗಳಲ್ಲಿ ಬರೆಯುವುದಿಲ್ಲ. ಆದ್ದರಿಂದ ವಿಷಯಗಳು ನಡೆದಿರುವುದಿಲ್ಲವೆಂದು ಹೇಳಲಾಗುವುದೆ ? 1054ಕ್ಕೆ ಪೂರ್ವದಲ್ಲೇ ದೇವಸ್ಥಾನವಿದ್ದಿತಾದರೂ ಆನಂದಾಳ್ವಾರು, ಶ್ರೀರಾಮಾನುಜರು, ಪರಾಶರಭಟ್ಟರು, ಶ್ರೀವೇದಾಂತದೇಶಿಕರು ಶ್ರೀರಂಗನಾಥಸ್ವಾಮಿಯ ದರುಶನಕ್ಕೆ ಬರದೇ ಇರಲು ಅಥವಾ ಗ್ರಂಥಗಳಲ್ಲಿ ಬರೆಯದೇ ಇರಲು ಅನೇಕ ಕಾರಣಗಳಿರಬಹುದು.

ಪ್ರಕೃತ ಇನ್ನೊಂದು ಶಾಸನವು ದೊರಕಿರುವುದು. ಅದರಲ್ಲಿ ಈ ರೀತಿ ಇರುವುದು. ಗಂಗರಾಜ್ಯ ಕಾಲದಲ್ಲಿ (887-985) ಒಬ್ಬ ವ್ಯಕ್ತಿ ತಿರುಮಲಯ್ಯ ಎಂಬಾತನು 887ರಲ್ಲಿ ಈ ದ್ವೀಪದ ಭಾಗದಲ್ಲಿ ಬಂದುನಿಂತನೆಂದೂ ಆಗ ಈ ಭೂಭಾಗವು ಅರಣ್ಯವಾಗಿದ್ದಿತೆಂದೂ ಅಲ್ಲಿ ಎರಡು ದೇವಸ್ಥಾನಗಳನ್ನು ನೋಡಿದನಂತೆ. ಅವುಗಳಲ್ಲಿ ಒಂದು ಗುಡಿ ಆವರಣದೊಳಗೆ ೧. ಶ್ರೀರಂಗನಾಥಸ್ವಾಮಿ ೨. ತಿರುಮಲ ದೇವಸ್ಥಾನ (ಚಿಕ್ಕಗುಡಿ) ನೋಡಿದರಂತೆ. ಇದರಿಂದ ತಿಳಿಯುವುದೇನೆಂದರೆ ತಿರುಮಲಯ್ಯ ಎಂಬಾತನು 887ರಲ್ಲಿ ಈ ಕ್ಷೇತ್ರಕ್ಕೆ ಬಂದು ಇಲ್ಲಿ ಶ್ರೀರಂಗನಾಥಸ್ವಾಮಿ ದೇವಸ್ಥಾನ - ತಿರುಮಲ ದೇವಸ್ಥಾನ ಕಂಡನು ಎಂದು ಹೇಳಿರುವುದರಿಂದ 887ಕ್ಕೆ ಪೂರ್ವದಲ್ಲೇ ಈ ದೇವಸ್ಥಾನವು ಇದ್ದುದು ತಿಳಿಯಬರುವುದು. ಈ ಊರನ್ನು ಶ್ರೀರಂಗಪುರ ಅಥವಾ ಶ್ರೀರಂಗಪಟ್ಟಣ ಎಂದು ಕರೆಯಲ್ಪಟ್ಟಿರುವುದೆಂದೂ ತಿಳಿಸಿರುವುದು. J.R.A.S VIII-6 M.J.L.S. XIV-13 ಈಗಿನ ಕಿರಂಗೂರು ಗ್ರಾಮದ ಸಮೀಪ ಶಿರಿಪ್ರತ್ತೂರು ಅಗ್ರಹಾರದಲ್ಲಿ ವಾಸವಾಗಿದ್ದ ಆನಂದಾಳ್ವಾರ ಚರಿತ್ರೆಯನ್ನು ಬರೆದಿದೆ ಓದಬಹುದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ.ಉ.ವೇ. ಮಹಾವಿದ್ವಾನ್ ಅನಂತಾಚಾರ್ಯರು (ಶ್ರೀಅನಂದಾಳ್ವಾರ್ರವರು) ೧೦೫೧-೧೧೫೧

ಉಭಯ ವೇದಾಂತ ವಿದ್ವಾನ್ ಅನಂತಾಚಾರ್ಯರು ಶ್ರೀರಂಗಪಟ್ಟಣದ ಕಿರಂಗೂರು ಗ್ರಾಮದ ಬಳಿ ತಿರುಪತ್ತೂರು ಎಂಬ ಅಗ್ರಹಾರದಲ್ಲಿ ಚೈತ್ರಮಾಸ ಚಿತ್ತ ನಕ್ಷತ್ರದಲ್ಲಿ ಕೇಶವಾಚಾರ್ಯರೆಂಬುವರಿಗೆ ಪುತ್ರರಾಗಿ ಕ್ರಿ.ಶ. 1051ರಲ್ಲಿ ಅವತರಿಸಿದರು. ಶ್ರೀರಂಗದಲ್ಲಿ ದರ್ಶನ ಸ್ಥಾಪಕರಾಗಿದ್ದ ಶ್ರೀರಾಮಾನುಜರ ವೈಭವವನ್ನು ಕೇಳಿ ಅವರ ಶಿಷ್ಯರಾಗಬೇಕೆಂಬ ಅಭಿಪ್ರಾಯದಿಂದ ಶ್ರೀರಂಗಕ್ಕೆ ದಯಮಾಡಿಸಿ ಶ್ರೀರಾಮಾನುಜರ ಶಿಷ್ಯರಾದರು. ಶ್ರೀರಂಗದಲ್ಲಿ ವೇದ ವೇದಾಂತ ಕಾಲಕ್ಷೇಪವನ್ನು ನಡೆಸಿ ಶ್ರೀರಾಮಾನುಜರ ಆಜ್ಞೆಯಂತೆ ತಿರುಪತಿ ಶ್ರೀನಿವಾಸ ದೇವರ ಕೈಂಕರ್ಯದಲ್ಲಿ ನಿರತರಾದುದು ಲೋಕಪ್ರಸಿದ್ಧವು. ತಿರುಪತಿಯಲ್ಲಿ ಅನೇಕ ವರ್ಷಗಳು ಕೈಂಕರ್ಯ ಮಾಡಿ ಪುನಃ ಶ್ರೀರಂಗಪಟ್ಟಣಕ್ಕೆ ಬಂದರು. ಕೂರತ್ತಾಳ್ವಾರ್ (ಶ್ರೀವತ್ಸಾಂಕ ಮಿಶ್ರರು) ಕುಮಾರರಾದ ಮಹಾ ವಿದ್ವಾನ್ ಪರಾಶರ ಭಟ್ಟರು ಮಹಾವಿದ್ವಾಂಸನಾದ ವೇದಾಂತಿ ಮಾಧವರನ್ನು ಶಾಸ್ತ್ರಗೋಷ್ಠಿಯಲ್ಲಿ ಜಯಿಸಬೇಕೆಂದು ಹೊರಟು ಶ್ರೀರಂಗಪಟ್ಟಣದ ತಿರುಪ್ಪುತ್ತೂರಿಗೆ ಬಂದರು. ತಿರುಪತ್ತೂರಿನಲ್ಲಿದ್ದ ಆನಂದಾಳ್ವಾರ್ರು ಭಟ್ಟರನ್ನು ಸ್ವಾಗತಿಸಿ ಬರಮಾಡಿಕೊಂಡು ತಮ್ಮ ಮನೆಯಲ್ಲಿ ಆತಿಥ್ಯವನ್ನು ನಡೆಸಿ ಅವರ ಜೊತೆಯಲ್ಲಿ ತಿರುನಾರಾಯಣಪುರಕ್ಕೆ (ಮೇಲುಕೋಟೆ) ಬಂದು ತಿರುನಾರಾಯಣ ದೇವರನ್ನು ದರ್ಶನ ಮಾಡಿ ಅಲ್ಲಿಂದ ಹೊರಟು ವೇದಾನ್ತಿಯನ್ನು ಜಯಿಸಲು ಸಾಮಾನ್ಯ ವೇಷವನ್ನು ಧರಿಸಿ ವೇದಾಂತಿಯು ನಡೆಸುವ ಅನ್ನ ಸಂತರ್ಪಣ ಶಾಲೆಗೆ ಹೋದರು. ಅಲ್ಲಿದ್ದ ವೇದಾಂತಿಯನ್ನು ಕಂಡು ಅವನೊಡನೆ ಹತ್ತು ದಿನಗಳು ವೇದಾಂತ ಶಾಸ್ತ್ರದಲ್ಲಿ ವಾದಿಸಿ ಜಯಿಸಿದರು. ಭಟ್ಟರಿಗೆ ಆನಂದಾಳ್ವಾರ್ರು ವಿದ್ವದ್‌ವಾದದಲ್ಲಿ ಸಹಾಯಕರಾಗಿದ್ದರು. ಭಟ್ಟರು ವಾದದಲ್ಲಿ ಜಯಿಸಿದ ಮೇಲೆ ಭಟ್ಟರನ್ನೂ ವೇದಾಂತಿಯನ್ನೂ ಕರೆದುಕೊಂಡು ತಿರುನಾರಾಯಣಪುರಕ್ಕೆ ಬಂದು ಶ್ರೀಮನ್ನಾರಾಯಣನನ್ನು ದರ್ಶನ ಮಾಡಿಸಿ ಇಬ್ಬರನ್ನೂ ಅವರ ಪರಿವಾರವನ್ನೂ ತಿರುಪ್ಪುತ್ತೂರಿಗೆ ಕರೆದುಕೊಂಡು ಬಂದರು. ಅವರನ್ನೆಲ್ಲಾ ಉಪಚರಿಸಿ ಶ್ರೀರಂಗಕ್ಕೆ ಕಳುಹಿಸಿಕೊಟ್ಟರು. ಈ ವೇದಾಂತಿಗೆ ವೈರಾಗ್ಯವುಂಟಾಗಲು ತಮ್ಮ ಆಸ್ತಿಯನ್ನು ಮೂರು ಭಾಗಮಾಡಿ ತಮ್ಮ ಇಬ್ಬರು ಪತ್ನಿಯರಿಗೂ ಎರಡು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಗ ಕೊಟ್ಟು ಒಂದು ಭಾಗವನ್ನು ತೆಗೆದುಕೊಂಡು ತಿರುಪ್ಪುತ್ತೂರು ಆನಂದಾಳ್ವಾರ್ರ ಸನ್ನಿಧಿಗೆ ಬಂದು ಸೇರಿದರು. ಆನಂದಾಳ್ವಾರು ವೇದಾಂತಿಗೆ ಸಕಲವಾದ ಸಂಪ್ರದಾಯ ರಹಸ್ಯಗಳನ್ನೆಲ್ಲಾ ಉಪದೇಶಿಸಿ ಶ್ರೀರಂಗಕ್ಕೆ ಕಳುಹಿಸಿಕೊಟ್ಟರು. ಈ ರೀತಿಯಲ್ಲಿ ಆನಂದಾಳ್ವಾರು ಶ್ರೀರಾಮಾನುಜ ಸಿದ್ಧಾಂತ ಸ್ಥಾಪಕರಾಗಿದ್ದರು. ಇವರು ಒಂದು ನೂರು ವರ್ಷಗಳಕಾಲ ಜೀವಂತರಾಗಿದ್ದರು. ಇವರ ಸ್ಮಾರಕವಾಗಿ ಇವರ ವಿಗ್ರಹವನ್ನು ದೇವಾಲಯಗಳಲ್ಲಿ ಪ್ರತಿಷ್ಟಿಸಿ ಪೂಜಿಸಿ ಬರುವರು. ವಿದ್ವಾನ್ ಆನಂದಾಳ್ವಾರಿಗೆ ಇಬ್ಬರು ಕುಮಾರರು ೧.ಇಂಬೆರುಮಾನಾರು ೨.ಶ್ರೀನಿವಾಸಯ್ಯಂಗಾರ್ಯರು ಎಂಬುದಾಗಿ. ಆನಂದಾಳ್ವಾರ ಸಂತತಿ ಮತ್ತು ವಂಶಸ್ಥರು ಮೈಸೂರು ದೇಶದಲ್ಲೂ ಮದರಾಸು ಪ್ರಾಂತ, ಕುನ್ರಪಾಕ್ಕಂ, ಕುಣಕರಪಾಕ್ಕಂ, ಕುನ್ನತ್ತೂರು, ವೆಳ್ಳಚೇರಿ, ಪುರಿಶೈಎಂಬಿವೇ ಮೊದಲಾದ ಅಗ್ರಹಾರಗಳಲ್ಲಿದ್ದು ಪಂಚಗ್ರಾಮವಾಸಿಗಳಾಗಿದ್ದರೆಂದು ತಿಳಿದುಬರುವುದು. ಅವರ ಮಕ್ಕಳು, ಮೊಮ್ಮಕ್ಕಳು ಮತ್ತು ವಂಶಸ್ಥರನ್ನೆಲ್ಲಾ ಆನಂದಾಪಿಳ್ಳೆಯವರೆಂದೇ ಕರೆಯಲಾಯಿತು. ಆನಂದಾಳ್ವಾರ್ರ ವಂಶದಲ್ಲಿ ಪರಂಪರೆಯಾಗಿ ಬಂದವರು ಮೈಸೂರು ದೇಶದ ರಾಜಾಶ್ರಯವನ್ನು ಹೊಂದಿದವರಾದರು. ಅವರ ಧ್ಯಾನಶ್ಲೋಕವು.

ಅಖಿಲಾತ್ಮ ಗುಣಾವಾಸಮಜ್ಞಾನ ತಿಮಿರಾಪಹಂ |
ಆಶ್ರಿತಾನಾಮಶರಣಂ ವನ್ದೇಽನಂತಾರ್ಯದೇಶಿಕಂ |
ಶ್ರೀಮದ್ರಾಮಾನುಜಾಚಾರ್ಯ ಮನನ್ತಾರ್ಯಗುರುಂಭಜೇ |
ಸದುತ್ತಮಾಂಗ ಸಂಧಾರ್ಯ ಮನನ್ತಾರ್ಯ ಗುರುಂಭಜೇ |

ಯತೀಂದ್ರಪಾದಾಂಬುಜ ಚಂಚರೀಕಂ ಶ್ರೀಮದ್ದಯಾಪಾಲದಯೈಕಪಾತ್ರಂ|
ಶ್ರೀವೇಂಕಟೇಶಾಂಘ್ರಿಯುಗಳಾಂತರಂಗಂ ನಮಾಮ್ಯನನ್ತಾರ್ಯಮನನ್ತ ಕೃತ್ಯಂ|

ಶ್ರೀರಂಗಪಟ್ಟಣ - ಕೋಟೆ - ರಾಜ್ಯಬಲ - ರಕ್ಷಣೆ -

ಶ್ರೀರಾಮಾನುಜರು ವಿಷ್ಣುವರ್ಧನನನ್ನು ಶಿಷ್ಯನಾಗಿ ಮಾಡಿಕೊಂಡ ಮೇಲೆ ಶ್ರೀರಂಗಪಟ್ಟಣದ ಕಾವೇರೀ ತೀರದ ಉಭಯಪಾರ್ಶ್ವಗಳಲ್ಲಿಯೂ ಅಷ್ಟಗ್ರಾಮವನ್ನು ಕಟ್ಟಿಸಿದರು. ಅಷ್ಟಗ್ರಾಮದ ಪರಿಪಾಲನೆಗಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀರಾಮಾನುಜರು ತಮ್ಮ ಶಿಷ್ಯರನ್ನು ಏರ್ಪಡಿಸಿದರು. ಆ ರೀತಿ ಏರ್ಪಡಿಸಿದ ಶಿಷ್ಯರ ಅಧಿಕಾರವರ್ಗದವರಿಗೆ ಪ್ರಭುಗಳು,ಪ್ರಧಾನರು,ಮಂಡಯಂ, ಹೆಬ್ಬಾರು - ಎಂಬ ಸಂಕೇತ ಅನ್ವರ್ಥನಾಮವನ್ನು ಕೊಟ್ಟರು. ಇದರಿಂದ ತಿಳಿಯುವುದೇನೆಂದರೆ ಕಾವೇರಿ ಮಧ್ಯದ ಈಭೂಭಾಗವನ್ನು ಮೊದಲು ಶ್ರೀವಿಷ್ಣುವರ್ಧನನ ಅಣ್ಣ ಉದಯಾದಿತ್ಯನು ೧೧೩೦ರಲ್ಲಿ ಮೊಟ್ಟ ಮೊದಲ ಕೋಟೆಯನ್ನು ಕಟ್ಟಿಸಿದನು. M.A.R. 1917 Page 15

ಶ್ರೀರಾಮಾನುಜರ ಶಿಷ್ಯರಲ್ಲಿ ಒಬ್ಬರು ಮಾರುತಿಯಾಂಡಾನ್. ವಂಶಪರಂಪರೆಯಲ್ಲಿ ಬಂದ ಶಿಂಗಣ ಒಡೆಯರು ರಾಜಕಾರ್ಯದಲ್ಲಿ ಪ್ರವೇಶಿಸಿ ವಿಜಯನಗರದ ಅರಸರ ಪ್ರತಿನಿಧಿಯಾಗಿ ನಾಗಮಂಗಲದ ಪ್ರಾಂತವನ್ನು ಆಳುತ್ತಿದ್ದರು. ಇವರು ಮಂಡಯಂ ಹೆಬ್ಬಾರ್ ಸಮುದಾಯಕ್ಕೆ ಸೇರಿದವರು. ಇವರಿಗೆ ಇಬ್ಬರು ಕುಮಾರರು. ಹಿರಿಯರು ತಿರುಮಲಾಚಾರ್ಯರು. ವಿಜಯನಗರದ ರಾಜರಾದ ಮಲ್ಲಿಕಾರ್ಜುನ ಮಹಾರಾಜರಿಗೆ ಮಂತ್ರಿಗಳಾಗಿದ್ದು ನಾಗಮಂಗಲದ ಆಳ್ವಿಕೆಯನ್ನು ನೋಡುತ್ತಿದ್ದರು. ಈ ತಿರುಮಲಾಚಾರ್ಯರು ವಿಜಯನಗರದ ರಾಜಧಾನಿಗೆ ೧೪೫೪ ರಲ್ಲಿ ಹೋಗಿದ್ದಾಗ ಮಹಾರಾಜರು ಇವರಿಗೆ ದಣ್ಣನಾಯಕ ಅಧಿಕಾರವನ್ನು ಕೊಟ್ಟು ಶ್ರೀರಂಗಪಟ್ಟಣದ ಕೋಟೆಯನ್ನು ಕಟ್ಟಲು ಅನುಜ್ಞೆಯಿತ್ತರು. ಸೈನ್ಯಾಧಿಕಾರಿಯಾಗಿದ್ದುದರಿಂದ ತಿಮ್ಮಣ್ಣ ದಣ್ಣನಾಯಕರೆಂದೇ ಪ್ರಸಿದ್ಧರಾಗಿದ್ದರು. ಶ್ರೀರಂಗಪಟ್ಟಣದ ಕೋಟೆಯನ್ನು ಕಟ್ಟಿಸಿದವರು ಇವರೇ - ಕಾಲ ಸುಮಾರು 1446-1467.

ಈ ತಿಮ್ಮಣ್ಣ ದಣ್ಣನಾಯಕರಿಗೆ ಅಕಸ್ಮಾತ್ ಅದೃಷ್ಟವಶದಿಂದ ಭೂಮಿಯಲ್ಲಿ ಹುದಗಿದ್ದ ದ್ರವ್ಯವು ದೊರೆತು ಶ್ರೀರಂಗಪಟ್ಟಣದ ಕೋಟೆಯನ್ನು ಕಟ್ಟಿಸಿದುದಲ್ಲದೆ ಶ್ರೀರಂಗನಾಥಸ್ವಾಮಿ ದೇವಸ್ಥಾನವನ್ನು ವಿಸ್ತಾರವಾಗಿ ಕಟ್ಟಿಸಿದರು. ಮೇಲುಕೋಟೆ ಶ್ರೀನಾರಾಯಣಸ್ವಾಮಿ, ಚೆಲುವರಾಯ ಸ್ವಾಮಿಯವರಿಗೆ ರತ್ನಾಭರಣ ಖಚಿತ ಅನೇಕ ಆಭರಣಗಳನ್ನೂ ಸಮರ್ಪಿಸಿ ದೇವಸ್ಥಾನ ಜೀರ್ಣೋದ್ಧಾರಮಾಡಿ ಲಕ್ಷ್ಮೀ ಅಮ್ಮನವರ ಕೈಸಾಲೆ ಮಂಟಪವನ್ನೂ, ಈಗ ಜೀಯರ (ಮಣವಾಳ ಮಾಮುನ್ನಿಗಳು1446-1467) ಗುಡಿ ಇರುವ ಸ್ಥಳದಲ್ಲಿ ಅನ್ನ ಛತ್ರವನ್ನೂ ಕಟ್ಟಿಸಿ, ತುಲಾಭಾರವನ್ನು ಮಾಡಿಸಿದರು. ಅನಂತರ ಕಾಲದಲ್ಲಿ ಎಂದರೆ ವಿಜಯನಗರದ ಅರಸರು ತಿರುಮಲರಾಜರ ಕಾಲದಲ್ಲಿ ಪ್ರವೃದ್ಧಮಾನಕ್ಕೆ ಬರುತ್ತಿದ್ದ ರಾಜ ಒಡೆಯರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾಗಿ ರಾಜರಾದರು. ಆಗಿನಿಂದ ಶ್ರೀರಂಗಪಟ್ಟಣವು ಮೈಸೂರು ರಾಜರಿಗೆ ರಾಜಧಾನಿಯಾಯಿತು.

ಅನಂತರದ ಕಾಲದಲ್ಲಿ ಕೋಟೆಯು ಶಿಥಿಲವಾದ್ದರಿಂದ ರಣಧೀರ ಕಂಠೀರವ ನರಸರಾಜರು ಪ್ರಮಾಧಿ ಸಂ. (A.D. 1639)ದಲ್ಲಿ ವಿಸ್ತಾರವಾದ ಕೋಟೆ ಕೊತ್ತಲ, ಮದ್ದಿನಮನೆ, ಕತ್ತಿ ಕಠಾರಿ, ತೋಪು ಮುಂತಾದ ಯುದ್ಧ ಸಾಮಗ್ರಿಗಳನ್ನಿಡಲು ಆಯುಧಶಾಲೆ, ದವಸ ಧಾನ್ಯಗಳನ್ನಿಡಲು ಉಗ್ರಾಣ, ಇವುಗಳನ್ನೆಲ್ಲಾ ಹೊಸದಾಗಿ ನಿರ್ಮಿಸಿದರು. ಕೋಟೆಯು ಶತ್ರುಗಳಿಗೆ ಜಯಿಸಲು ಅಭೇದ್ಯವಾಗಿರುವಂತೆ ಮಾಡಿದರು.

ಕೋಟೆಗೆ ಪೂರ್ವಪಶ್ಚಿಮ - ದಕ್ಷಿಣೋತ್ತರ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಹಾದ್ವಾರಗಳಿದ್ದವು. ಅನುಕೂಲಕ್ಕಾಗಿ ಅಲ್ಲಲ್ಲಿ ಚಿಕ್ಕ ಚಿಕ್ಕ ದ್ವಾರಗಳು ನಿರ್ಮಿಸಲ್ಪಟ್ಟಿದ್ದವು.

ಉಭಯಕಾವೇರಿಮಧ್ಯೆ ಇರುವ ಭೂಭಾಗವು ಸುಮಾರು ಮೂರು ಮೈಲಿ ಉದ್ದ ಒಂದೂವರೆ ಮೈಲಿ ಅಗಲವಿರುವುದು. ಈ ಭೂಭಾಗದ ಮಧ್ಯೆ ಅಗಲವಾದ ಸ್ಥಳದಲ್ಲಿ ಕೋಟೆಯು ಉತ್ತರ ಕಾವೇರಿಗೆ ಸೇರಿದಂತೆಯೂ, ಮತ್ತು ಕಾವೇರಿಯು ಕವಲು ಒಡೆದ ಸ್ಥಳಕ್ಕೆ ಸೇರಿದಂತೆಯೂ ಕಟ್ಟಲ್ಪಟ್ಟಿತು. ಕಟ್ಟಲ್ಪಟ್ಟಿರುವ ಕೋಟೆಯು ಒಂದು ಮೈಲಿ ಉದ್ದವೂ ೧೧೦೦ ಗಜ (ಒಂದುಸಾವಿರದ ನೂರು ಗಜ) ಅಗಲವೂ ಉಳ್ಳದ್ದಾಗಿರುವುದು. ಅದರಲ್ಲಿ ಕೋಟೆ - ಪೇಟೆ ಎಂದು ಎರಡು ಭಾಗವು ಕೋಟೆಯೊಳಗೆ ಅರಮನೆ ದೇವಸ್ಥಾನಗಳೂ, ಕೋಟೆಯಿಂದ ಹೊರಕ್ಕೆ ಸುಮಾರು ೫೦೦ ಗಜ ದೂರದಲ್ಲಿ (ಶೃಂಗಾರತೋಟ) ಪೇಟೆ (ಷಾಹಿರ್‌ಗಂಜಾಂ) ಲಾಲ್‌ಬಾಗ್ ತೋಟ, ಟೀಪುವಿನ ಅರಮನೆ ಇತ್ಯಾದಿಗಳಿವೆ. ಲಾಲ್‌ಭಾಗ್ ಎನ್ನುವುದು ಶ್ರೀರಂಗಪಟ್ಟಣದ ರಕ್ಷಣೆಗಾಗಿ ಕಂದಕ ತೋಡಲ್ಪಟ್ಟು, ಯುದ್ಧ ಸಾಮಗ್ರಿಗಳಿಂದ ಸಜ್ಜುಗೊಳಿಸಿ ಉಭಯಕಾವೇರಿ ಸಂಗಮಸ್ಥಳದಲ್ಲಿರುವುದು.

ಕೋಟೆ ರಾಜ್ಯದ ಬಲ - ರಕ್ಷಣೆ - ಚಿಕ್ಕದೇವರಾಜ ಒಡೆಯರು (1673-1704) ತಮ್ಮ ರಾಜ್ಯವನ್ನು ವಿಸ್ತರಿಸುವ ಕಾಲದಲ್ಲಿ ಪೂರ್ವದಲ್ಲಿದ್ದ ಸೇನೆಯು ಸಾಲದೆಂದು ಯೋಚಿಸಿ ಹೊಸದಾಗಿ ಸೇನೆಯನ್ನು ಕಟ್ಟಿಸುವುದಕ್ಕೆ ತಮ್ಮ ಆದಾಯ ವೆಚ್ಚಗಳನ್ನು ನೋಡಿಕೊಂಡು ಪೂರ್ವದಲ್ಲಿ ಇದ್ದುದು ಮತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೊಸದಾಗಿ ಕಟ್ಟಿದ ಸೇನೆಗಳ ವಿವರ -

ಕಾಲ್ಬಲ - ೧೦೦೦೦೦ - ಒಂದು ಲಕ್ಷ

ಅಶ್ವಬಲ - ೧೨೦೦೦ ಇದಕ್ಕೆ ತಕ್ಕ ಕಾವಾಟಿ, ಕಲಾಶಿ, ಫಿರಂಗಿ, ತುಪಾಕಿ, ಕತ್ತಿ, ಕಠಾರಿ, ಗುರಾಣಿ, ಈಟಿ, ಮೊದಲಾದ ಆಯುಧಗಳನ್ನೂ, ಮದ್ದು, ಗುಂಡು, ಆನೆ,ಕುದುರೆ, ಒಂಟೆ, ಬಂಡಿ, ಗುಡಾರ, ಮುಂತಾದ ಯುದ್ಧಸಾಮಗ್ರಿಗಳನ್ನು ಸಿದ್ಧಪಡಿಸಿ ಶ್ರೀರಂಗಪಟ್ಟಣದ ಒಳಕೋಟೆ ಹೊರಕೋಟೆ ಕೊತ್ತಲಗಳಲ್ಲಿ ಫಿರಂಗಿಗಳನ್ನು ಇಡಿಸಿದ ವಿವರ -

ಒಳಕೋಟೆ ಕೊತ್ತಲಗಳು	ಫಿರಂಗಿ
೧. ಹೊಸಕೇರಿ ಹನುಮಂತನ ಕೊತ್ತಳದಲ್ಲಿ	೧
೨. ಮೂಲೆ ಕೊತ್ತಳ ಬಲರಾಮ ಕೊತ್ತಳದಲ್ಲಿ	೨
೩. ನಾಗಮಂಗಲದ ಚೆನ್ನಯ್ಯನ ಬಳಿ ಹುಚ್ಚುನರಸಿಂಹ ಕೊತ್ತಳದಲ್ಲಿ	೨
೪. ಬೇಡಗೆರೆಯಲ್ಲಿ ವಿಷ್ಣುಚಕ್ರವೆಂಬ ಕೊತ್ತಳದಲ್ಲಿ ದೊಡ್ಡ ಫಿರಂಗಿ	೧
೫. ಮರದ ಕೇರಿಯಲ್ಲಿ ಭೂತನಾಥನ ಕೊತ್ತಳದಲ್ಲಿ	೧
೬. ಹುಲ್ಲುಮೆದೇ ಬಳಿ ಚಾಮುಂಡಿ ಕೊತ್ತಳದಲ್ಲಿ	೧
೭. ಹುಲ್ಲುಮೆದೇ ಬಳಿ ಸಿಡಿಮಲ್ಲನ ಕೊತ್ತಳದಲ್ಲಿ	೧
೮. ಬ್ರಹ್ಮಪುರದ ಬಾಗಿಲಬಳಿ ನಾಗಮರಿ ಕೊತ್ತಳದಲ್ಲಿ	೧
೯. ಬಸವನಗುಡಿ ಬಳಿ ಸಿಡಿಲಮರಿ ಕೊತ್ತಳದಲ್ಲಿ	೧
೧೦.ದೊಡ್ಡ ಹೊರಕೋಟೆ ಕೊಳದ ಬಳಿ ರಾಮಲಿಂಗನ ಕೊತ್ತಳದಲ್ಲಿ	೧
೧೧.ಕೃಷ್ಣದಿಡ್ಡಿಯ ಬಳಿ ಗೋಪಾಲಕೃಷ್ಣನ ಕೊತ್ತಳದಲ್ಲಿ	೧
೧೨.ಚಿಕ್ಕೇ ಅರಸಿನ ಕೊತ್ತಳದ ಬಳಿ ಬಿಲಾರಿಕಾಯನ ಕೊತ್ತಳದಲ್ಲಿ	೧
೧೩.ಬಾಮೋಜಿದಿಡ್ಡಿಯ ಬಳಿ ಚಲುವರಾಯನ ಕೊತ್ತಳದಲ್ಲಿ	೨
೧೪.ಬಾಮೋಜಿ ದಿಡ್ಡಿಯಬಳಿ ಅನಂತಯ್ಯನ ಮನೆಹತ್ತಿರ ರಣಭೀಮನ ಕೊತ್ತಳದಲ್ಲಿ ರಣಭೀಮ, ರಣಶೂರನೆಂಬ ಫಿರಂಗಿ	೨
೧೫.ಮೂಡಣಬಾಗಿಲಬಳಿ ಕಿಂಡಿನಲ್ಲಿರುವ ಬಡಗಚಾರಿ ವೆಂಕಟಾಚಲನ ಕೊತ್ತಲದಲ್ಲಿ	೧
೧೬.ಈ ತೆಂಕಚಾರಿಯ ಚಾಮುಂಡಿಯ ಕೊತ್ತಲದಲ್ಲಿ	೧
೧೭.ಈ ಮೂಲೆಯಲ್ಲಿರುವ ಪ್ರಳಯಕಾಲರುದ್ರ, ಪ್ರಳಯಕಾಲ	

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭೈರವ ಕೊತ್ತಲದಲ್ಲಿ ೨

೧೮.ಈ ಪಡುವಚಾರಿ ನಿಟ್ಟಿನಲ್ಲಿ ಕೋಟೆ, ನಲ್ಲೂರನ
ಮನೆಯಬಳಿ, ಧನಂಜಯನ ಕೊತ್ತಲದಲ್ಲಿ ೧

೧೯.ಚಿಕ್ಕೇ ಅರಸೀನವರ ಕಣಜದಬಳಿಯಲ್ಲಿ ಮುದ್ದುಕೃಷ್ಣಕೊತ್ತಲದಲ್ಲಿ ೧

೨೦.ಕೋಟೆಯಗಾರೆ ಹಟ್ಟಿಯ ಬಳಿಯಲ್ಲಿ ಗಾರೆಹಟ್ಟಿ
ಚಲುವರಾಯನ ಕೊತ್ತಲದಲ್ಲಿ ೨

೨೧. ಮೈಸೂರು ಬಾಗಿಲ ರಾಡಿನಲ್ಲಿ ಜಯ,ವಿಜಯ ಕೊತ್ತಳಗಳಲ್ಲಿ ೨

೨೨.ಈ ಬಾಗಿಲಲ್ಲಿ ಜೀಜಕೋಟೆಯ ಮೇಲಿರುವ
ಚಿಕ್ಕರಾಮಬಾಣ ಕೊತ್ತಲದಲ್ಲಿ ೧

೨೩.ಸೇತುವೆಯ ಬಾಗಿಲರಾಡಿನಲ್ಲಿ ಫಿರಂಗಿ ೧

ಇವುಗಳಲ್ಲದೇ ತಾಳ ಫಿರಂಗಿಗಳು ಬೇರೆ ಬೇರೆ ಸ್ಥಳಗಳಲ್ಲಿ ೧೪

ಫಿರಂಗಿಗಳ ಮೊತ್ತ ೪೪

ಇವುಗಳಲ್ಲಿ ಒಳಕೋಟೆ ಕೊತ್ತಲಗಳಲ್ಲಿ ೨೫

ಹೊರಕೋಟೆ ಕೊತ್ತಲಗಳಲ್ಲಿ ೧೯ ೪೪

ಕಂಠೀರವ ನರಸರಾಜರು ಯುದ್ಧಕಾಲದಲ್ಲಿ ಗುಂಡುಗಳನ್ನು ಹೊಡೆದರೆ ಅವು ಸಿಡಿದು ಒಳಗೆ ತುಂಬಿರುವ ಚೂರಿ,ಕತ್ತಿ,ಕತ್ತರಿ,ಮೊಳೆ,ಸಣ್ಣಗುಂಡು ಮೊದಲಾದವುಗಳಿಂದ ಬಹುಜನರು ಹತವಾಗುವಂತೆ ಮಾಡಿರುವ ಟೊಳ್ಳು ಗುಂಡುಗಳನ್ನೂ ತುಪಾಕಿ ಗುಂಡುಗಳನ್ನೂ ಇರಿಸುವುದಕ್ಕೆ ಮದ್ದಿನ ಮನೆಗಳನ್ನೂ, ಆಯುಧ ಶಾಲೆಗಳನ್ನೂ, ಆಹಾರಕ್ಕಾಗಿ ದೊಡ್ಡ ಉಗ್ರಾಣಗಳನ್ನೂ ಕಟ್ಟಿಸಿದರು.

ಇಲ್ಲಿಂದ ಮುಂದೆ ಸೈನ್ಯದ ವಿವರ ಬೇಕಾಗಿರುವುದಿಲ್ಲ. ಪ್ರಸಂಗಾತ್ ವಾಚಕರ ಕುತೂಹಲಕ್ಕಾಗಿ ಸೈನ್ಯದ ಗಣತಿ ವಿವರವನ್ನು ತಿಳಿಸಿರುವುದು.

ಸೈನ್ಯದ ಗಣತಿ ವಿವರ - ಖಾಸಾ ಚಾಮರಾಜ ಒಡೆಯರ ಕಾಲದಲ್ಲಿ ಶಾರ್ವರಿ ಸಂ. (A.D. 1780) ರಲ್ಲಿ ಫೌಜು ಸೈನ್ಯಗಳ ಗಣತಿ ವಿವರ - ೨೨೬೦೦೦ಕ್ಕೆ ವಿವರ -

ಅಶ್ವ ಸೈನ್ಯ -

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾರಗಿರತ ಬೇಲೆ ಕುದುರೆ ಸವಾರರು		೧೩೦೦೦	
ಸವಾರ ಕಚೇರಿ ಕುದುರೆಸವಾರರು		೧೮೦೦೦	
ಕಡಪೆ ಮೀರ್ ಅಲ್ಲಾ ರಜಾಖಾನನ ಕಡೆ ಸವಾರರು		೬೦೦೦	
ಶ್ರವಣೂರು ಹಕೀಂಖಾನನ ಇಬ್ಬರು ಮಕ್ಕಳ ಸವಾರರು		೨೦೦೦	
ಅಲೆಮಾನಿ ಸವಾರರು		೫೦೦	೩೯೫೦೦
ಬಾರಿನವರು			
ಬಾರುಕಚೇರಿಯವರು		೬೦೦೦೦	
ಕಡಪೆ ಮೀರ್ ಅಲ್ಲಿ ರಜಾಖಾನನ ಕಡೆಯವರು		೪೦೦೦	೬೪೦೦೦
ಓಲೆಕಾರರು			
ಸೀಮೆಕಂದಾಚಾರ		೮೦೦೦೦	
ಅಮರಿಷಾ		೨೦೦೦೦	
ಕಡಪೆ ಮೀರ್ ಅಲ್ಲಿ ರಜಾಖಾನನ ಕಡೆಯವರು		೪೦೦೦	೧೪೦೦೦೦
ಇತರರು			
ಮೂಸಾಲಾಲಿಕಡೆ ಪರಾಷೀರು		೨೦೦೦	
ಇಂಗ್ಲೀಷ್ ಜಾನಿಗೋರಾ		೫೦೦	
ಬಿಳ್ಳಿಬಾಲ್ಯದವರು		೪೦೦೦	
ಬಾಣದಾರರು		೨೦೦೦	
ಕಲಾಶಿ ಕೋಲಂದಾಜ್‌ಚಟ್ಟೇದಾರ್ ಮೊದಲಾದವರು		೪೦೦೦	
ಹಬ್ಬಿಗಳು		೧೦೦೦	
ಅರಬಸ್ಥಾನದವರು		೧೦೦೦	
ದಂಡಿನ ಕಮಾಟಿಗಳು	೬೦೦೦		೨೦೫೦೦
			೨೨೮೦೦೦
ಮೊತ್ತ			೩೩೮೦೦೦

೨೦೦ ತೋಪು ಇದಕ್ಕೆ ಬೇಕಾದಷ್ಟು ಗನ್ನರ್ ಮಕರಡಿಬ್ಬಿ ಬಾರೂದುಗೋಲಿ ಸಹ

೧೨೦೦೦ ಮೋದಿಖಾನೆ ವರದಿಯ ಎತ್ತು

೧೦೦೦ ಪೀಲಖಾನೆ ಆನೆ

೬೦೦೦ ಷುತರಖಾನೆ ಒಂಟೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೧೦೦೦ ಬ್ರಾಹ್ಮಣನಾಯಕ, ಹರಿಕಾರರು ಸಹ
೧೦೦೦ ಜಾಸೋದರ ಮುಂತಾದ್ದು
೨೧೩೦೦ ಮೊತ್ತ.

ಇದಲ್ಲದೆ ಚೋಪದಾರ, ಮಹಲದಾರ, ನಖೀಬ, ಖಿದಮತಗಾರ, ಪರಾಷರು, ಮಷಾಲಚಿ, ಜೀನಗಾರ, ವೈದ್ಯ, ಸಂಗೀತಗಾರ, ಜಾಸೋದರ, ನಾಯಕ,ಹರಿಕಾರ ಗೊಲ್ಲಬೋಯಿ, ಷುಂತಾದವರು. ಈ ಪೈಕಿ ೬೦೦೦೦ ಫೌಜು ಸೈನ್ಯವು ಸೀಮೆಯಮೇಲೆ ರಕ್ಷಣೆಯಾಗಿ ಇಟ್ಟು, ನಿಂತ ೧೬೬೦೦೦ ಸೈನ್ಯವು ಸದಾ ಯುದ್ಧ ಸನ್ನದ್ಧವಾಗಿದ್ದಿತು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ (1673-1704) ರಾಜ್ಯಕ್ಕೆ ಸೇರಿದಂತೆ ೮೪ ಗಡಿಗಳಿದ್ದವು. ರಾಜ್ಯವು ನಡೆಸಲು ೧೮ ಚಾವಡಿಗಳು ಏರ್ಪಾಡಾಗಿದ್ದವು. ೧೭೮೦ರಲ್ಲಿ ಮೊತ್ತ ರಾಜ್ಯದಲ್ಲಿ ೩೭೩ ಗಡಿಗಳಿದ್ದವು. (ಗಡಿ=ತಾಲ್ಲೂಕು)

ವರಮಾನ - ಸಂಸ್ಥಾನದ ಹುಟ್ಟುವಳಿ. ಎರಡುಕೋಟಿ ಹತ್ತು ಲಕ್ಷ ವರಹಗಳು. ಸಂಸ್ಥಾನಿಕರು ಮತ್ತು ಪಾಳೆಯಗಾರರಿಂದ ೨೦ ಲಕ್ಷ
ಮೊತ್ತ ೨ ಕೋಟಿ ೩೦ ಲಕ್ಷ ವರಹಗಳು ೧೦೦,೨೦೦,೩೦೦೨೪೦೦, ಜನಪದ ಮೇಲಿನ ಅಧಿಕಾರಿ, ಓಲೆಕಾರ, ಈ ರೀತಿ ಆರು ಜನ ಓಲೆಕಾರರ ಮೇಲೆ ಅಧಿಕಾರಿ ದಫೇದಾರ. ೫೦ ಜನ ದಫೇದಾರರ ಮೇಲೆ ಹೋಬಳಿದಾರ, ಇವರು ಕಾರ್ಯಬಿದ್ದಾಗ ಯುದ್ಧ ಮಾಡಲು ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳೊಡನೆ ಸದಾ ಸಿದ್ಧವಾಗಿರುತ್ತಿದ್ದರು.

ಸೈನ್ಯದ ಅಧಿಕಾರಿಗಳು -

ರಿಸಾಲದಾರರು - ಸುಬ್ಬರಾವು ಘೋರ್ಪಡೆ. ಸುಬ್ಬರಾವು ಘಟಕೇ-ಸಯದ್ ವಾಜಿಲ್ ಇದಾರುಸ್ ಸಯ್ಯಾಜಿ-ಬಲವಂತರಾವು, ಚಂದರರಾವು ಭರಕ್ಕೀ- ದಲೇಜ್‌ಲ್‌ದಿಲ್-ಖಾನ್

ಜಮಾದಾರರು - ಶ್ರೀಪತಿರಾವು-ಮಡ್ಡುಖಾನ್ - ಫಾಜಿಖಾನ್-ಸಯ್ಯದ್‌ಯಾಕುಸ್-ಹಿರುದಾಂಗಲ-ಹಿರ್ರೋತ್ರಿಪಾದ

ನಾಣ್ಯಗಳು -

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾರತೀಯ ನಾಣ್ಯ ಚರಿತ್ರೆಯಲ್ಲಿ ಶ್ರೀರಂಗಪಟ್ಟಣ ರಾಜ್ಯಾಡಳಿತ ಅಧಿಕಾರಿಯ ನಾಣ್ಯಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಟೀಪುವು ತನ್ನ ಆಯಸ್ಸು ಪೂರ್ತಿಯಾಗಿ ಯುದ್ಧಗಳಲ್ಲಿಯೇ ನಿರತನಾಗಿದ್ದರೂ ನಾಣ್ಯಗಳ ವಿಷಯದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಿ ಸುಂದರವೂ, ಕಲಾತ್ಮಕವೂ, ವೈಶಿಷ್ಟ್ಯಪೂರ್ಣವೂ ಆದ ಅನೇಕ ವಿಧವಾದ ನಾಣ್ಯಗಳನ್ನು ಅಚ್ಚು ಹಾಕಿಸಿದನು.

ಟೀಪುವಿನ ಕಾಲದಲ್ಲಿ ಕೊನೆಯ ವರ್ಷ ೧೫ ವಿವಿಧ ಸ್ಥಳಗಳಲ್ಲಿ ಟಂಕಸಾಲೆಗಳಿದ್ದವು. ಇವುಗಳಲ್ಲಿ ಮುಖ್ಯವಾದವು ಶ್ರೀರಂಗಪಟ್ಟಣ, ನಗರ, ಗುತ್ತಿ, ಬೆಂಗಳೂರು, ಚಿತ್ರದುರ್ಗ, ಕಲ್ಲಿಕೋಟೆ, ಪೆರೋಕ್, ಸತ್ಯಮಂಗಲ, ದಿಂಡಿಗಲ್, ಗುರುಂಕೊಂಡ, ಧಾರವಾಡ ಮತ್ತು ಮೈಸೂರು. ಶಿವಮೊಗ್ಗದ ಹೊಳೆಹೊನ್ನೂರಿನಲ್ಲಿಯೂ ಒಂದು ಟಂಕಸಾಲೆ ಇತ್ತೆಂದು ತಿಳಿದುಬರುತ್ತದೆ. ಆದರೆ ಇಲ್ಲಿಯ ನಾಣ್ಯಗಳು ದೊರೆಯುವುದಿಲ್ಲ. ಈ ಟಂಕಸಾಲೆಗಳಿಗೆ ಟೀಪುವು ಕಾಲ್ಪನಿಕ ಹೆಸರುಗಳನ್ನು ಕೊಟ್ಟಿದ್ದನು. ಹೊಳೆಹೊನ್ನೂರಿನ ಟಂಕಸಾಲೆಯು ಸದೃಶವಾದುದು - ಇದನ್ನು ಬೆನಜೀರ್ ಎಂದು ಕರೆದಿದ್ದಾರೆ.

ಪ್ರತಿಯೊಂದು ನಾಣ್ಯಕ್ಕೂ ಒಂದೊಂದು ಹೆಸರು ಕೊಡಲ್ಪಟ್ಟಿತ್ತು. ಆ ಹೆಸರುಗಳು ಸಾಮಾನ್ಯವಾಗಿ ಪ್ರವಾದಿಮಹಮ್ಮದ್-ಕಲೀಫ ಮತ್ತು ನಕ್ಷತ್ರ ಇವುಗಳಿಗೆ ಸಂಬಂಧಿಸಿದವು.

೪ ಪಗೋಡಗಳು - ಅಹ್ಮದಿ

೨ ಪಗೋಡ - ಸಾಂದಕೀ

೧ ಪಗೋಡ - ಪರೂಕೀ

೨ ರೂಪಾಯಿ - ಹೈದರೀ - ಹೈದರೀ ೩೫೫ ಗ್ರಾಂ ತೂಕವಿರುವುದು.

೧ ರೂಪಾಯಿ - ಇಮಾಮಿ - ಇಮಾಮಿ ೧೭೫ ಗ್ರಾಂ ತೂಕ

ಅರ್ಧ ರೂಪಾಯಿ - ಆಬಿದೀ

ಕಾಲು ರೂಪಾಯಿ - ಬಾಬರೀ

೧/೮ .. - ಜಾಫರೀ

೧/೧೬ .. - ಖಾಸಿಮೀ

೧/೩೨ .. - ಕೈಸರೀ -ಖಿಸ್ತ್ರೀ ೫ ಗ್ರಾಂ ತೂಕ

೨ ಪೈಸೆ - ಉಸ್ಮಾನೀ ಅಥವಾ ಮುಷ್ತರೀ

೧ ಪೈಸೆ - ಜೋಹು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರ್ಧ ಪೈಸೆ - ಬ್ರಹ್ರಾಮ್

ಕಾಲು ಪೈಸೆ - ಅಖ್ತರ್

೧/೮ ಪೈಸೆ - ಕುತ್ಬ್

ಬೆಳ್ಳಿ ನಾಣ್ಯಗಳೂ ಹೀಗೆಯೇ ಇವೆ. ಚಿನ್ನದ ನಾಣ್ಯಗಳಿಗೆ ಮಾತ್ರ ಈ ರೀತಿಯ ಹೆಸರುಗಳಿಲ್ಲ. ಏಕೆಂದರೆ ಇದು ಬಹು ಸಣ್ಣವಾದ್ದರಿಂದ ಅದರ ಮೇಲೆ ನಾಣ್ಯದ ಹೆಸರನ್ನು ಮುದ್ರಿಸುವಷ್ಟು ಸ್ಥಳವಿರಲಿಲ್ಲ. ಕಾಲವನ್ನು ತಿಳಿಸಲು ಮೊದಲು ನಾಲ್ಕು ವರ್ಷಗಳು ಹಿಜಿರ ಕಾಲವನ್ನು ಬರೆದಿದೆ. ಐದನೆಯ ವರ್ಷದಿಂದ ತನ್ನ ಆಳ್ವಿಕೆಯ ಕಾಲದವರೆಗೂ ತೌಲೂದಿ ಕಾಲಮಾನವನ್ನು ಅಚ್ಚುಹಾಕಿಸಿದನು.

ಚಿನ್ನದ ನಾಣ್ಯಗಳಲ್ಲಿ ಅಹ್ಮದೀ, ಸಾದಿಕೀ, ಫರೂಕೀ (ಪಗೋಡ) ಮತ್ತು ಪಣಂ ಎಂಬುದಾಗಿ ನಾಲ್ಕು ವಿಧವು.

೧. ಅಹ್ಮದೀ ನಾಣ್ಯ - ಸುಮಾರು ೨೧೧ ಗ್ರಾಂ ತೂಕ, ೪ ಪಗೋಡ

ಸಾದಿಕೀ - ೧೦೦ ಗ್ರಾಂ ತೂಕವಿದೆ.

ಫರೂಕೀ - ಸುಮಾರು ೫೨ ಗ್ರಾಂ ತೂಕವಿದೆ.

ಪಣಂ - ೫-೬ ಗ್ರಾಂ ಇರಬಹುದು.

ಕೆಲವು ನಾಣ್ಯಗಳ ಮೇಲೆ ಟಂಕಸಾಲೆ ಹೆಸರೂ ಇರುವುದು.

ಕನ್ನಡ ವಿಶ್ವಕೋಶ.

ಶ್ರೀರಂಗನಾಥಸ್ವಾಮಿ ದೇವಸ್ಥಾನ - ಕಟ್ಟಡ - ಶಿಲ್ಪ ರಚನೆ.

ದೇವಸ್ಥಾನವು ಪೂರ್ವಾಭಿಮುಖವಾಗಿರುವುದು.

ಗರ್ಭಗೃಹ - ಭಗವದ್‌ಸಾನ್ನಿಧ್ಯ ಸ್ಥಳ. ಶ್ರೀರಂಗನಾಥಸ್ವಾಮಿ ಶಯನರೂಪದಲ್ಲಿರುವುದರಿಂದ ಗರ್ಭಗೃಹವು ಆಯತ ಚತುರಶ್ರವಾಗಿರುವುದು. ಗರ್ಭಗೃಹದ ಮೇಲೆ ಪ್ರಸ್ತರವಿದ್ದರೂ ವಿಮಾನ ಶಿಖರದಲ್ಲಿ ಕಂಠಭಾಗವಿರುವುದಿಲ್ಲವಾದ್ದರಿಂದ (ಪ್ರಸ್ತರ= ಮೇಲ್‌ಭಾವಣಿ) ಲೆಕ್ಕಕ್ಕೆ ತೆಗೆದುಕೊಳ್ಳದೆ ನಾಲ್ಕೇ ಅಂಗಗಳೆಂದು ಹೇಳಬೇಕಾಗಿದೆ. ೧. ಅಧಿಷ್ಠಾನ ೨.ಸ್ತಂಭವರ್ಗ , ೩ ಶಿಖರ ೪.ಸ್ತೂಪಿ, ಎಂಬ ನಾಲ್ಕು ವರ್ಗಗಳು - ಈ ದೇವಸ್ಥಾನವು ಲುಫಾ ವರ್ಗಕ್ಕೆ ಸೇರಿದ್ದರೂ ವಿಮಾನ ಶಿಖರವು ಆಯತ ಚತುರಶ್ರವಾಗಿರುವುದರಿಂದ ನಾಗರ, ದ್ರಾವಿಡ, ವೇಸರನೆಂಬ ಬೇಧಗಳಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ದೇವಸ್ಥಾನವು ನಾಗರಜಾತಿಗೆ ಸೇರಿದುದಾಗಿರುವುದು. ಗರ್ಭಗೃಹಕ್ಕೆ ಬಾಗಿಲುವಾಡವಿರುವುದಿಲ್ಲ. ತೆರೆದ ವಿಶಾಲವಾದ ಸ್ಥಳವಾಗಿರುವುದು. ಮೇಲೆ ವಿಮಾನ ಶಿಖರದಲ್ಲಿ ಕಲಶಗಳು ಪ್ರತಿಷ್ಠಿತವಾಗಿವೆ.

ಶಕ ೧೬೬೬ ಜಯ ಸಂ. ವೈಶಾಖ ಮಾಸದಲ್ಲಿ(A.D.1773) ಶ್ರೀರಂಗನಾಥಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿದ್ದ ಮದ್ದಿನ ಉಗ್ರಾಣಕ್ಕೆ ಬೆಂಕಿ ಬಿದ್ದುದರ ಫಲವಾಗಿ ವಿಶಿಷ್ಟ ಪದಾರ್ಥಗಳೂ ನಷ್ಟವಾದವು. ಅನೇಕ ಜನರು ಮಡಿದರು. ಅನೇಕರು ನಾಶವಾದರು. ಆಗ ಶ್ರೀರಂಗನಾಥಸ್ವಾಮಿ ಗರ್ಭಗೃಹ, ಮೇಲ್‌ಭಾಗಕ್ಕೂ ಅಪಾಯವಾಗಿ ತದನಂತರ ಜೀರ್ಣೋದ್ಧಾರ ಮಾಡಲ್ಪಟ್ಟಿತು. M.A.R. 1930- page 93

ಅರ್ಧಮಂಡಪ - ಗರ್ಭಗೃಹದ ಮುಂದೆ ಅರ್ಧ ಮಂಡಪ ಅಥವಾ ಶುಕನಾಸಿ ಸ್ಥಳ . ಈ ಸ್ಥಳವು ಗರ್ಭಗೃಹಕ್ಕಿಂತ ಕಿಂಚಿತ್ ದೊಡ್ಡದಾಗಿರುವುದು. ಅರ್ಧಮಂಡಪವು ಎಷ್ಟೇ ದೊಡ್ಡದಾಗಿದ್ದರೂ ಭಗವಂತನ ಸಾನ್ನಿಧ್ಯವಿರುವ ಸ್ಥಳಕ್ಕೆ ಪೂರ್ಣಮಂಡಪವೆಂದೂ, ಇತರ ಸ್ಥಳಗಳು ಅರ್ಧವೆಂದೂ ಅರ್ಥವು.

ನವರಂಗ - ಅರ್ಧಮಂಡಪದಿಂದ ಹೊರಕ್ಕೆ ಬಂದರೆ ನವರಂಗಕ್ಕೆ ಬರುತ್ತೇವೆ. ಬರುವ ದ್ವಾರದ ಉಭಯ ಪಾರ್ಶ್ವಗಳಲ್ಲಿಯೂ ಚಂಡಪ್ರಚಂಡರೆಂಬ ದ್ವಾರಪಾಲಕರಿರುತ್ತಾರೆ. ಈ ದ್ವಾರದ ಬಾಗಿಲುವಾಡದ ಹಿತ್ತಾಳೆ ಚೌಕಟ್ಟಿನ ಅಲಂಕಾರವನ್ನು ಪರಮಭಾಗವತೆ ಅಯೋಧ್ಯೆ ಶಿಂಗಮ್ಮ ಎಂಬುವರ ಧರ್ಮವಾಗಿರುವುದು. ಈ ಚೌಕಟ್ಟಿನಲ್ಲಿ ದಶಾವತಾರಗಳು ಚಿತ್ರಿಸಲ್ಪಟ್ಟಿರುವುದು.

ಪ್ರಥಮ ಪ್ರಾಕಾರ - ಗರ್ಭಗೃಹವನ್ನು ಪ್ರದಕ್ಷಿಣವಾಗಿ ಬರಲು ನವರಂಗದಲ್ಲಿನ ಪಾಲಕರ ಉಭಯಪಾರ್ಶ್ವದಲ್ಲೂ ದ್ವಾರವಿರುವುದು. ಗರ್ಭಗೃಹವನ್ನು ಪ್ರದಕ್ಷಿಣವಾಗಿ ಬರಬಹುದು. ಇಲ್ಲಿ ಗರ್ಭಗೃಹದ ಅಧಿಷ್ಠಾನದ ಅಲಂಕಾರವನ್ನು ನೋಡಬಹುದು.ಅಧಿಷ್ಠಾನವು ಉಪಾನ,ಜಗತೀ,ಪದ್ಮ,ಕಂಪ, ಕಂಠ,ಪದ್ಮ, ಮಹಾಪಟ್ಟಿ ಇತ್ಯಾದಿಗಳಿಂದ ಅಲಂಕರಿಸಲ್ಪಟ್ಟಿರುವುದು.

ಈ ನವರಂಗವು ೨೫ ಅಂಕಣಗಳಿಂದ ೩೨ ಕಂಭಗಳನ್ನೊಳಗೊಂಡು ಚತುರಶ್ರವಾಗಿರುವುದು. ಕಂಭಗಳಲ್ಲಿ ವಿಶೇಷಾಲಂಕಾರಗಳೇನೂ ಇರುವುದಿಲ್ಲ. ನವರಂಗದಿಂದ ಹೊರಕ್ಕೆ ಬಂದರೆ ದ್ವಿತೀಯ ಪ್ರಾಕಾರಕ್ಕೆ ಬರುತ್ತೇವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದ್ವಿತೀಯ ಪ್ರಾಕಾರ - ನವರಂಗದಿಂದ ಹೊರಕ್ಕೆ ಬರುವ ಬಾಗಿಲುವಾಡ ದ್ವಾರದ ಉಭಯಪಾರ್ಶ್ವಗಳಲ್ಲಿಯೂ ಜಯವಿಜಯರೆಂಬ ದ್ವಾರಪಾಲಕರಿರುತ್ತಾರೆ. ಇಲ್ಲಿಂದ ಪ್ರದಕ್ಷಿಣವಾಗಿ ಹೊರಟರೆ ದಕ್ಷಿಣ,ಪಶ್ಚಿಮ,ಉತ್ತರ ಪ್ರಾಕಾರವು ಮೇಲ್‌ಭಾವಣಿಯಿಂದ ಮುಚ್ಚಲ್ಪಟ್ಟಿರುವುದು.

ದಕ್ಷಿಣಭಾಗದಲ್ಲಿ ಆಳ್ವಾರಾಚಾರ್ಯರೂ, ಅದರ ಪಕ್ಕದಲ್ಲಿ ದೇವರ ಸನ್ನಿಧಿಗಳಾದ ರಾಜಮನ್ನಾರ್‌ಕೃಷ್ಣ, ಅವರ ಪಕ್ಕದಲ್ಲಿ ಕೋದಣ್ಡರಾಮಸ್ವಾಮಿ ಸನ್ನಿಧಿ, ಅದರ ಪಕ್ಕದಲ್ಲಿ ಪಟ್ಟಾಭಿರಾಮರ ಸನ್ನಿಧಿ, ಅಲ್ಲಿಂದ ಮುಂದೆ ಬಂದರೆ ಎದುರಿಗೆ ಶ್ರೀಲಕ್ಷ್ಮೀನರಸಿಂಹಸ್ವಾಮಿ ಸನ್ನಿಧಿ, ಅದರ ಪಕ್ಕದಲ್ಲಿ ಸುದರ್ಶನಾಳ್ವಾರ್ ಸನ್ನಿಧಿ, ಅದರ ಪಕ್ಕದಲ್ಲಿ ಶ್ರೀವರದರಾಜರ ಸನ್ನಿಧಿ ಇರುವುದು.

ಶ್ರೀ ಲಕ್ಷ್ಮೀ ಅಮ್ಮನವರ ಸನ್ನಿಧಿ (ರಂಗನಾಯಕಿ ಅಮ್ಮನವರು)-

ವಾಯವ್ಯ ಮೂಲೆಯಲ್ಲಿ ಶ್ರೀಲಕ್ಷ್ಮೀ - ರಂಗನಾಯಕೀ ಅಮ್ಮನವರ ಸನ್ನಿಧಿ ಇರುವುದು. ಗರ್ಭಗೃಹ, ಶುಕನಾಸಿ, ಮುಂದೆ ಕೈಸಾಲೆ, ಮಂಡಪದಿಂದ ಕೂಡಿರುವುದು. ಅಮ್ಮನವರ ಶುಕನಾಸಿ ಸ್ಥಳದ ಎಡಭಾಗದಲ್ಲಿ ಚಿಕ್ಕದಾದ ನೆಲಮಾಳಿಗೆ ಇರುವುದು.

ಮುಂದೆ ಬರುವಾಗ (ದೇವಸ್ಥಾನದ ಉತ್ತರಭಾಗ) ನಮ್ಮ ಎಡಭಾಗಕ್ಕೆ ಉದ್ವಕ್ಕೂ ಆಳ್ವಾರಾಚಾರ್ಯರ ಸನ್ನಿಧಿ. ಶ್ರೀರಾಮಾನುಜರು, ಅವರ ಪಕ್ಕದಲ್ಲಿ ವೇದಾಂತದೇಶಿಕರ ಸನ್ನಿಧಿ, ಅವರ ಪಕ್ಕದಲ್ಲಿ ಯಾಗಶಾಲೆ ಇರುವುದು.

ಜಯ ವಿಜಯರ ಎಡಭಾಗದಲ್ಲಿ ಶ್ರೀನಿವಾಸಸ್ವಾಮಿ ದೇವರ ಸನ್ನಿಧಿ ಇರುವುದು. ಬಲಭಾಗದಲ್ಲಿ ವೈಕುಂಠನಾಥಸ್ವಾಮಿ ಮೂರ್ತಿ ಪ್ರತಿಷ್ಠಿತವಾಗಿರುವುದು. ದೇವರ ಎದುರಿಗೆ ಧ್ವಜಸ್ತಂಭ, ಬಲಿಪೀಠವಿರುವುದು. ಈ ಪರಿಸರವು ತೆರೆದ ಆವರಣವಾಗಿರುತ್ತೆ. ಈ ಭಾಗವು ೩೭ ಕಂಭಗಳಿಂದ ಕೂಡಿರುವುದು. ಇಲ್ಲಿರುವ ಕಂಭಗಳಲ್ಲಿ ಕೇಶವ, ನಾರಾಯಣ, ಮಾಧವ ಆದಿಯಾಗಿ ಚತುರ್ವಿಂಶತಿ ಮೂರ್ತಿಗಳು (24)ಅರ್ಧಾಂಕಿತವಾಗಿ ಚಿತ್ರಿಸಲ್ಪಟ್ಟಿರುವುದು.

ಇದರ ಹೊರಕ್ಕೆ ಹೋಗುವ ದ್ವಾರದ (ಒಳಭಾಗಕ್ಕೆ) ಉಭಯ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪಾರ್ಶ್ವಗಳಲ್ಲಿಯೂ ಅತ್ಯಾಶ್ಚರ್ಯಕರವಾದ, ಸುಂದರವಾದ ಆಂಜನೇಯಸ್ವಾಮಿ ಗರುಡದೇವರುಗಳ ಮೂರ್ತಿ ಬೃಹದಾಕಾರದಲ್ಲಿ ನಿಂತಿರುವುದನ್ನು ಕಾಣಬಹುದು.

ಧ್ವಜಸ್ತಂಭ - ಪ್ರತಿ ದೇವಸ್ಥಾನದಲ್ಲಿಯೂ ಆಯಾದೇವರ ವಾಹನವನ್ನು ದೇವರ ಎದುರಿಗೆ ಸಮಸೂತ್ರದಲ್ಲಿ ಧ್ವಜಸ್ತಂಭ, ಬಲಿಪೀಠವನ್ನು ನಿರ್ಮಿಸಿ ಆ ಧ್ವಜಸ್ತಂಭದ ಮುಂದೆ ಗರುಡದೇವರನ್ನು ಪ್ರತಿಷ್ಠಿಸುವರು. ಇಲ್ಲಿ ಸ್ಥಳ ಸಂಕೋಚದಿಂದ ಪ್ರತ್ಯೇಕ ಗರುಡ ವಿಗ್ರಹವು ಸ್ಥಾಪಿತವಾಗಿರುವುದಿಲ್ಲ. ಧ್ವಜಸ್ತಂಭದಲ್ಲೇ ಗರುಡ ರೂಪವನ್ನು ಚಿತ್ರಿಸಿರುವರು.

ದೇವಸ್ಥಾನದಲ್ಲಿ ಉತ್ಸವ ಮೂರ್ತಿ ಪ್ರತಿಷ್ಠಿತವಾಗಿದ್ದಲ್ಲಿ ಆಗ ಧ್ವಜಸ್ತಂಭವನ್ನು ಪ್ರತಿಷ್ಠಿಸಬೇಕು. ಉತ್ಸವಮೂರ್ತಿ ಇಲ್ಲವಾದಲ್ಲಿ ಉತ್ಸವ ವಿಶೇಷಗಳು ಇಲ್ಲವಾದ್ದರಿಂದ ಆಗಮೋಕ್ತವಾದ ಧ್ವಜಾರೋಹಣ ಕಾರ್ಯವಿರುವುದಿಲ್ಲ. ಅಲ್ಲದೆ ನಿತ್ಯ ಪೂಜಾವಿಧಾನದಲ್ಲಿ ಧ್ವಜಸ್ತಂಭಕ್ಕೆ ಯಾವ ಕೆಲಸವೂ ಇರುವುದಿಲ್ಲ. ಆದರೂ ದೇವಸ್ಥಾನದ ಲಕ್ಷಣ ಅಲಂಕಾರಗಳನ್ನನುಸರಿಸಿ ಧ್ವಜಸ್ತಂಭವನ್ನು ಪ್ರತಿಷ್ಠಿಸಬಹುದು

ಬಲಿಪೀಠ - ದೇವಸ್ಥಾನದಲ್ಲಿ ಪ್ರತಿನಿತ್ಯ ದೇವರಿಗೆ ಪೂಜಾ ನಿವೇದನಾದಿಗಳು ನಡೆದಮೇಲೆ ಪರಿವಾರ ದೇವತೆಗಳಿಗೂ ಪೂಜಾ ನಿವೇದನಾದಿಗಳು ನಡೆಯುತ್ತವೆ. ಪರಿವಾರ ದೇವತೆಗಳಿಗೆ ಪೂಜಾನಿವೇದನಾದಿಗಳಾಗದಿದ್ದಲ್ಲಿ ದೇವರಿಗೂ ಪೂಜಾ ನಿವೇದನಗಳಾಗಲಿಲ್ಲವೆಂದರ್ಥವು. ನಮ್ಮ ಮಕ್ಕಳು ಊಟಮಾಡಿ ಸಂತೋಷವಾಗಿದ್ದರೆ ನಮಗೆ ಸಂತೋಷವು. ಅಂತೆಯೇ ಭಾಗವತನಿಗೂ ತನ್ನ ಪರಿವಾರ ಭಕ್ತಜನಗಳಿಗೆ ಪೂಜಾನಿವೇದನವಾದರೆ ಭಗವಂತನಿಗೆ ತೃಪ್ತಿಕರವು. ಸಮಾಧಾನವು. ದೇವರು ಮತ್ತು ಪರಿವಾರ ದೇವತೆಗಳಿಗೂ ಪೂಜಾ ನಿವೇದನೆಗಳಾಯಿತು ಎಂದು ತಿಳಿಯುವುದು ಹೇಗೆ? ಅದಕ್ಕಾಗಿ ಅಷ್ಟದಿಕ್ಪಾಲಕರಿಗೆ ಬಲಿ ಎಂಬ ಪೂಜಾನಿವೇದನಗಳು ನಡೆಸಲ್ಪಡುವುದು. ಅದಕ್ಕಾಗಿಯೇ ಬಲಿಪೀಠವೆಂಬುದು ಏರ್ಪಟ್ಟಿರುವುದು. ಎಂಟು ದಿಕ್ಕುಗಳಲ್ಲಿಯೂ ಬಲಿಪೀಠವು ಪ್ರತಿಷ್ಠಿತವಾಗಿರುವುದನ್ನು ಕಾಣಬಹುದು. ಈ ಬಲಿಪೂಜಾ ವಿಧಾನವು ನಡೆದ ಮೇಲೆಯೇ ದೇವಸ್ಥಾನದಲ್ಲಿ ಮಹಾಮಂಗಳಾರತಿ ಮತ್ತು ತೀರ್ಥಪ್ರಸಾದಗಳು ನಡೆಯುತ್ತವೆ. ಬಲಿಪೀಠದಿಂದ ದೇವಸ್ಥಾನವು ಆರಂಭವಾಗುವುದರಿಂದ ನಾವು ಅಲ್ಲಿ ನಮಸ್ಕಾರ ಮಾಡಬೇಕು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತೃತೀಯ ಆವರಣ - ಎರಡನೇ ಪ್ರಾಕಾರದಿಂದ ಮುಂದೆ ಬಂದರೆ ಮೂರನೇ ಪ್ರಾಕಾರದ ವಿಶಾಲವಾದ ಮಂಡಪಕ್ಕೆ ಬರುತ್ತೇವೆ. ಈ ಮಂಡಪವು ವಿಶಾಲವಾಗಿದ್ದು ಎತ್ತರವೂ, ಚತುರಶ್ರವೂ ಆದ ೩೦ ಸ್ತಂಭಗಳಿಂದ ಕೂಡಿರುವುದು. ಈ ಮಂಡಪದ ಮಧ್ಯದಲ್ಲಿ ದೀಪಸ್ತಂಭವಿರುವುದು.

ಈ ದೀಪಸ್ತಂಭವು ಕೆಳಗೆ ಚತುರಶ್ರವಾದ ಆಧಾರ ಪೀಠದಿಂದ ಕೂಡಿರುವುದು. ಸ್ತಂಭವನ್ನು ನಾಲ್ಕು ಭಾಗಮಾಡಿ ಕೆಳಗಿನ ಒಂದು ಭಾಗವು ಚತುರಶ್ರವಾಗಿಯೂ ಮೇಲಿನ ಮೂರು ಭಾಗವು ಅಷ್ಟಾಶ್ರ ಷೋಡಶಾಶ್ರವಾಗಿಯೂ ರಚಿಸಲ್ಪಟ್ಟಿರುವುದು. ಈ ಸ್ತಂಭದ ಮೇಲುಭಾಗದಲ್ಲಿ ಕುಡ್ಮಲಾಕಾರವಾದ ಮಂಡಪವು ರಚಿಸಲ್ಪಟ್ಟು ಅದರ ಮೇಲೆ ಕಾರ್ತಿಕಮಾಸದಲ್ಲಿ ದೀಪವನ್ನು ಹಚ್ಚಿಡುವರು.

ಇಲ್ಲಿಂದ ಪ್ರದಕ್ಷಿಣವಾಗಿ ಬಂದರೆ ಆಗ್ನೇಯ ಮೂಲೆಯಲ್ಲಿ ಪಾಕಶಾಲೆ, ಅದರ ಪಕ್ಕದಲ್ಲಿ ರಾಮಾನುಜಕೂಟ. ಈ ರಾಮಾನುಜಕೂಟದಲ್ಲಿ ದೇಶಾಂತ್ರಿಗಳಿಗೆ ಭೋಜನ ಸೌಕರ್ಯ ಏರ್ಪಟ್ಟಿದ್ದಿತು. ಅಲ್ಲಿಂದ ಮುಂದೆ ಬಂದರೆ ವಾಯುವ್ಯ ಭಾಗದಲ್ಲಿ ಪ್ರಸನ್ನವೆಂಕಟರಮಣಸ್ವಾಮಿ ಸನ್ನಿಧಿ. ಗರ್ಭಗೃಹ ಅದರ ಮುಂದೆ ನವರಂಗ ಅಲ್ಲಿಂದ ಹೊರಕ್ಕೆ ಬಂದರೆ ಚಿಕ್ಕ ಮಂಡಪ. ಈ ಮಂಡಪವನ್ನು ಶಕ ೧೭೫೨ ವಿರೋಧಿ ಸಂ. ಆಶ್ವಯುಜ ಶುದ್ಧ ೧೦ (A.D. 8-10-1829) ಸೀರ್ಯದ ಕ್ಷತ್ರಿಯ ಲಾಡರಿ ರಾಮಣ್ಣನ ಪೌತ್ರ ತಿಮ್ಮಣ್ಣನ ಪುತ್ರನಾದ ತುಪ್ಪದ ವೆಂಕಟಪ್ಪನು ಕಟ್ಟಿಸಿ ಅದರ ಮುಂದೆ ಭಾವಿಯನ್ನು ನಿರ್ಮಿಸಿದನು.

ವಸಂತಮಂಡಪ - ಮುಂದೆ ಈಶಾನ್ಯ ಮೂಲೆಯಲ್ಲಿ ವಸಂತ ಮಂಡಪವಿರುವುದು. ಶ್ರೀಪ ೩೩

ಪ್ರಾಕಾರ ವೇದಾಂತ ತತ್ವ - ಪ್ರಾಕಾರ ನಿರ್ಮಿಸುವುದರಲ್ಲಿ ಒಂದು ವೇದಾಂತ ತತ್ತ್ವವೂ ಅಡಗಿರುವುದು. ಈ ಬ್ರಹ್ಮಾಂಡದ ಸುತ್ತಲೂ ಸಪ್ತ ಆವರಣಗಳಿವೆಯೆಂದು ಶಾಸ್ತ್ರ ಸಮ್ಮತವು. ಎಂದರೆ ವಾಯು,ಜಲ,ಅಗ್ನಿ,ಆಕಾಶ ಮೊದಲಾದ ಶಕ್ತಿಗಳು ತುಂಬಿದ್ದು ಅದರಿಂದ ಒಳಗಿರುವ, ಚತುರ್ದಶ ಭುವನಗಳೂ, ಸೂರ್ಯ,ಚಂದ್ರ, ನಕ್ಷತ್ರಾದಿ ಗ್ರಹಗಳೆಲ್ಲವೂ ಸಹ ತಮ್ಮ ತಮ್ಮ ಸ್ಥಳಗಳಲ್ಲಿ ಬಿಟ್ಟು ಹೋಗದಂತೆ ಆಕರ್ಷಿತವಾಗಿ ತಮ್ಮ ತಮ್ಮ ಸ್ಥಳಗಳಲ್ಲಿದ್ದು ನಿಯಮಗಳನ್ನನುಸರಿಸಿ ಚಲಿಸುತ್ತವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವಾತ್ಮನು ಈ ಶರೀರವನ್ನು ಬಿಟ್ಟು ಬ್ರಹ್ಮಾಂಡವೆಂಬ ಈ ಪ್ರಕೃತಿ ತತ್ತ್ವವನ್ನು ಕಳೆದು ಸಪ್ತಾವರಣವನ್ನು ಭೇದಿಸಿಕೊಂಡು ಅರ್ಚರಾದಿ ಮಾರ್ಗದಲ್ಲಿ ಭಗವಂತನ ಸಾನ್ನಿಧ್ಯವನ್ನು ಸೇರುತ್ತಾನೆ. ಎಂಬ ವೇದಾಂತ ತತ್ತ್ವವನ್ನು ಈ ದೇವಾಲಯದ ಗೋಪುರ ಪ್ರಾಕಾರಗಳು ಬೋಧಿಸುತ್ತವೆ. ಸ್ಥೂಲವಾದ ಈ ಪ್ರಕೃತಿ ತತ್ತ್ವವಾದ ಗೋಪುರದಲ್ಲಿ ಪ್ರವೇಶಿಸಿ ಒಂದೊಂದು ಆವರಣವನ್ನು ದಾಟುತ್ತಾ ಕೊನೆಯಲ್ಲಿ ಭಗವಂತನ ಸನ್ನಿಧಿಗೆ ಸೇರುತ್ತೇವೆ. ಪಂಚಾವರಣ ದಾಟುವುದೆಂದರೆ ಈ ಪಾಂಚಭೌತಿಕ ಶರೀರದಿಂದ ದಾಟುವುದೆಂದರ್ಥವು. ಮೂರು ಆವರಣವೆಂದರೆ ಸತ್ವ,ರಜ,ತಮಸ್ಸೆಂಬ ಗುಣಗಳಿಂದ ಬಿಡುಗಡೆಯಾಗುವುದು. ಏಕಾವರಣವೆಂದರೆ ಈ ಪ್ರಕೃತಿ ತತ್ತ್ವದಿಂದ ಬಿಡುಗಡೆ ಅದಕ್ಕೆ ಮೋಕ್ಷವೆಂದು ಅರ್ಥವು.

ಗೋಪುರ - ಮಂದಿರಕ್ಕೆ ಅಲಂಕಾರಪ್ರಾಯವಾಗಿಯೂ, ನೋಡುವವರಿಗೆ ಆಕರ್ಷಕವಾಗಿಯೂ ಪ್ರಾಕಾರ ಮಧ್ಯದಲ್ಲಿ ಮಹಾದ್ವಾರದ ಮೇಲೆ ಬೃಹದಾಕಾರವಾಗಿ ರಚಿಸಿರುವ ಕಟ್ಟಡಕ್ಕೆ ಗೋಪುರವೆಂದು ಹೆಸರು. ಈ ಗೋಪುರವು ಆಯತ ಚತುರಶ್ರವಾಗಿದ್ದು ಮೇಲೆ ಮೇಲೆ ಹೋಗುತ್ತಾ ಚಿಕ್ಕದಾಗಿರುವುದು. ಇದು ಎಲ್ಲಾ ಗೋಪುರಗಳಿಗೂ ಒಂದೇ ನಿಯಮವು. ನಮ್ಮ ದೇವಸ್ಥಾನದ ಎರಡು ಪಕ್ಕದಲ್ಲೂ ಸಿಂಹ ಲಲಾಟಕ್ಕೆ ಬದಲಾಗಿ ಎರಡು ಕೋರಂಬಗಳನ್ನು ರಚಿಸಿರುವರು. ಈ ಗೋಪುರವು ಏಳು ಅಂತಸ್ತುಗಳಿಂದಲೂ, ಏಳು ದ್ವಾರಗಳಿಂದಲೂ, ನಿರ್ಮಿಸಲ್ಪಟ್ಟಿರುವುದು. ಅಲ್ಲದೆ ಕರ್ಣಕೂಟ, ಹಾರ, ಪಂಜರ ಶಾಲಾ ಎಂಬ ಅಲಂಕಾರಗಳಿಂದ ರಚಿಸಲ್ಪಟ್ಟಿರುವುದು.

ರಣಧೀರ ಕಂಠೀರವ ನರಸರಾಜ ಒಡೆಯರು ಶ್ರೀರಂಗನಾಥಸ್ವಾಮಿ ದೇವಸ್ಥಾನದ ಗೋಪುರ ಮಂಟಪಗಳನ್ನೂ ಹೊರಗಿನ ವಿಸ್ತಾರವಾದ ಪ್ರಾಕಾರವನ್ನೂ, ಒಳಗಿನ ಪ್ರಾಕಾರವನ್ನೂ ಕಟ್ಟಿಸಿದರು. ಆದರೆ ಒಳಗಿನ ಪ್ರಾಕಾರದ ದಕ್ಷಿಣ,ಉತ್ತರ,ಪಶ್ಚಿಮ ಗೋಡೆಗಳು ಕಂಠೀರವ ನರಸರಾಜ ಒಡೆಯರಿಗೂ ಪೂರ್ವ ರಾಜ ಒಡೆಯರಿಗೂ ಪೂರ್ವ ಆ ಗೋಡೆಗಳು ನಿರ್ಮಾಣವಾಗಿವೆ. ಏಕೆಂದರೆ ಆ ಗೋಡೆಯ ಮೇಲೆ ವಿಜಯನಗರದ ಅರಸರ ೧೫೨೮ - ೧೫೭೧ನೇ ವರ್ಷಗಳ ಶಾಸನವು ಕಂಡುಬರುವುದರಿಂದ ಆ ಶಾಸನ ಕಾಲಕ್ಕೆ ಪೂರ್ವದಲ್ಲಿಯೇ ಒಳ ಪ್ರಾಕಾರದ ಗೋಡೆಗಳು ಕಟ್ಟಲ್ಪಟ್ಟಿರಬೇಕು.

ವಾಹನ ಮಂಡಪ - ದೇವಸ್ಥಾನದ ಮುಂದೆ ಎಡದ ಪಕ್ಕದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎತ್ತರವಾದ ಮಂಡಪವಿರುವುದು. ಉತ್ಸವಕಾಲದಲ್ಲಿ ದೇವರು ಬಿಜಯ ಮಾಡಿಸಿ ಇಲ್ಲಿ ವಾಹನಾರೋಹಣದಿಂದ ಉತ್ಸವ ನಡೆಯುವುದು.

ತಟಾಕ ಪುಷ್ಕರಿಣಿ - ದೇವಸ್ಥಾನದ ಮುಂಭಾಗದಲ್ಲಾಗಲಿ, ಉತ್ತರಭಾಗದಲ್ಲಾಗಲಿ ತಟಾಕ ಅಥವಾ ಪುಷ್ಕರಿಣಿಯನ್ನು ರಚಿಸಬೇಕೆಂದು ಆಗಮಶಾಸ್ತ್ರದಲ್ಲಿ ಹೇಳಿರುವುದು. ಪುಷ್ಕರಿಣಿ ತೀರ್ಥವು ದೇವಾಲಯದಲ್ಲಿ ಪೂಜಾ, ಅರ್ಚನಾದಿಗಳಿಗೂ, ಅಭಿಷೇಕ ತೀರ್ಥ ಮತ್ತು ಇತರ ಶುದ್ಧೀಕರಣಗಳಿಗೂ ಸ್ನಾನ, ಪಾನ, ಸಂಧ್ಯೆಗಳಿಗೂ/ಉಪಯೋಗಪಡುತ್ತದೆ. ಈ ಪುಷ್ಕರಿಣಿ ನಿರ್ಮಿಸುವ ಮೊದಲು ಶ್ರೀರಂಗನಾಥಸ್ವಾಮಿಗೆ ಅಭಿಷೇಕ ತೀರ್ಥವು ಕಾವೇರಿ ನದಿಯಿಂದ ತರುತ್ತಿದ್ದರು.

ಶಕ ೧೭೨೩ ರೌದ್ರಿ ಸಂ. ಶ್ರಾವಣ ಶುದ್ಧ ೫ (A.D. 26.7. 1800) ರಲ್ಲಿ ದೇವಸ್ಥಾನದ ಮುಂದೆ ಈಶಾನ್ಯ ಭಾಗದಲ್ಲಿ ಅಮರಂಬೋದು ಮುತ್ತಪ್ಪ ಮೊದಲ ಪೌತ್ರ ವೇಲಾಯುಧ ಮೊದಲಿ ಜ್ಯೇಷ್ಠ ಪುತ್ರನಾದ ನಲ್ಲತಂಬಿ ಮೊದಲಿ ಎಂಬುವರು ದೇವರ ನಿತ್ಯಗಟ್ಟಲೆ ತಿರುಮಂಜನಕ್ಕೂ, ಸಕಲ ಬ್ರಾಹ್ಮಣರ ಸ್ನಾನ, ಪಾನ,ಸಂಧ್ಯೆಗಳಿಗೆ ಉಪಯುಕ್ತವಾಗಿರಲು ವೇದಪುಷ್ಕರಿಣಿ (ಚತುರಶ್ರವಾದ ಕೊಳ) ನಿರ್ಮಿಸಿದ ಧರ್ಮವಾಗಿದೆ.

ಶ್ರೀ.ಪ.ಶಾ. ೧೯-೨೦

ರಾಜ ಸೋಪಾನ - ಮುಮ್ಮಡಿ ಕೃಷ್ಣರಾಜ ಒಡೆಯರು ಕಾವೇರಿ ನದಿಗೆ ರಮಣೀಯವಾದ ಕಾಶಿ ಕೆಲಸದ ಸೋಪಾನ, ಮಂಡಪಗಳನ್ನೂ ನದೀತೀರದಲ್ಲಿ ಒಂದು ಗುಡಿಯನ್ನೂ ಕಟ್ಟಿಸಿ ಆ ಗುಡಿಯಲ್ಲಿ ಅಮೃತಶಿಲಾ ರಾಮದೇವರನ್ನೂ ಸಾಧಾರಣ ಶಿಲೆಯಿಂದ ಆಂಜನೇಯಸ್ವಾಮಿ, ಗಣಪತಿ, ವಿಗ್ರಹಗಳನ್ನೂ ಪ್ರತಿಷ್ಠೆ ಮಾಡಿಸಿದರು.

ಕೃಷ್ಣಾ ಗೇಟ್ - ಶ್ರೀರಂಗನಾಥಸ್ವಾಮಿ ಗೋಪುರ ದ್ವಾರದಿಂದ ನೇರಾಗಿ ಉತ್ತರಕ್ಕೆ ಒಂದು ಮಾರ್ಗವಿದೆ. ಇಲ್ಲಿಂದ ದೇವಸ್ಥಾನಕ್ಕೆ ದೇವರಿಗೆ ಮಜ್ಜನ ತೀರ್ಥ ಬರುತ್ತಿದ್ದಿತು. ಈಗಲೂ ಬರುತ್ತಿದೆ.

ಮೂರ್ತಿಗಳು - ಶ್ರೀರಂಗನಾಥಸ್ವಾಮಿ ಮೂಲ ಮೂರ್ತಿ ಸಾಧಾರಣವಾಗಿ ದೇವರ ವಿಗ್ರಹಗಳು = ಮೂರ್ತಿಗಳಲ್ಲ= ಸ್ಥಿತ = ನಿಂತಿರುವಿಕೆ, ಆಸೀನ = ಕುಳಿತಿರುವುದು, ಶಯನ = ಮಲಗಿರುವುದು, ಗರುಡಾರೂಢ ಎಂಬುದಾಗಿ ನಾಲ್ಕು ವಿಧ ಚೇಷ್ಟಾರೂಪಗಳುಂಟು. ನಮ್ಮ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೇವಸ್ಥಾನದಲ್ಲಿ ಶಯನರೂಪವು, ಅರ್ಧಾರ್ಧಶಯನ (ಅರವತ್ತೇಳುವರೆ ಡಿಗ್ರಿ ಶಯನ) ದ್ವಿಭುಜವು. ಬಲದ ಕೈ ತಲೆದಿಂಬಾಗಿಟ್ಟುಕೊಂಡು ಎಡದ ಕೈ ಪ್ರಸಾರಿತ ಹಸ್ತ ಅಥವಾ ಆಜಾನುಬಾಹು ಲಂಬ ಹಸ್ತವಾಗಿರುವುದು.. ಬಲದ ಪಾದ ದೀರ್ಘವಾಗಿದ್ದು, ಎಡದ ಪಾದವು ಸ್ವಲ್ಪ ಕುಂಚಿತವಾಗಿರುವುದು. ಬಹು ಸೌಮ್ಯಮೂರ್ತಿ. ಶಾಸನಗಳಲ್ಲಿ ಕೂಡ ಸೌಮ್ಯರಾಜ ಎಂದು ಹೇಳಿರುವುದು. ಕಿರೀಟ, ಕುಂಡಲ, ಶ್ರೀವತ್ಸ, ಹಾರ, ಕಂಕಣ, ಉದರಬಂಧ, ಕಟಿಬಂಧ ಯಜ್ಞೋಪವೀತ, ಹೃದಯದಲ್ಲಿ ಲಕ್ಷ್ಮೀ. ಈ ರೀತಿ ಅಲಂಕಾರ ವಿನ್ಯಾಸಗಳಿಂದ ಕೂಡಿರುವುದು. ಐದು ಹೆಡೆಯ ಆದಿಶೇಷನೊಂದಿಗೆ ಒಂದೇ ಸಾಲಗ್ರಾಮ ಮೂರ್ತಿ. ಕದಲದೆ ಪ್ರತಿಷ್ಠಿತವಾಗಿರುವುದರಿಂದ ಧ್ರುವಬೇರವೆಂದು ಕರೆಯಲ್ಪಡುವುದು. ಪಾದ ಭಾಗದಲ್ಲಿ ಮಹಾಲಕ್ಷ್ಮೀ ಪಾದ ಸಂವಾಹನ ರೂಪದಲ್ಲಿರುವುದನ್ನು ಕಾಣಬಹುದು.

ದೇವರ ಪಾದದ ಕೆಳಭಾಗದಲ್ಲಿ ಅಂಜಲಿಬದ್ಧರೂಪವಾದ ಗೌತಮಋಷಿ ವಿಗ್ರಹ ಮೂರ್ತಿಯಿರುವುದು. ಪಾದತಲದಲ್ಲಿ ಕಾವೇರಿ ಮೂರ್ತಿಯನ್ನು ಕಾಣಬಹುದು.

ಉತ್ಸವ ಮೂರ್ತಿ - ಮೂಲ ಮೂರ್ತಿಯ ಮುಂದೆ ಉತ್ಸವ ಮೂರ್ತಿ, ಸಮಭಂಗ, ಚತುರ್ಭುಜ, ಶಂಖಚಕ್ರ, ಗದಾ ಪದ್ಮಗಳಿಂದಲಂಕೃತವು. ಉಭಯ ಪಾರ್ಶ್ವದಲ್ಲಿ ಶ್ರೀ ಭೂ, ನೀಳಾದೇವಿಯರು . ಶ್ರೀದೇವಿ ಬಲದ ಕೈ ಲಂಬಹಸ್ತವಾಗಿ ಎಡದ ಕೈಯಲ್ಲಿ ಅರಳಿದ ಕಮಲವನ್ನೂ, ಭೂದೇವಿಯು, ಎಡದ ಕೈ ಲಂಬಹಸ್ತವಾಗಿ ಬಲದ ಕೈಯಲ್ಲಿ ಕಮಲದ ಮೊಗ್ಗನ್ನು ಹಿಡಿದಿರುವಳು. (ಬಲದಕೈಯಲ್ಲಿ ಅರಳಿದ ಕಮಲವನ್ನಿಡಬಾರದೆಂದು ಆಗಮಶಾಸ್ತ್ರದ ವಿಧಿಯು) ಉತ್ಸವಮೂರ್ತಿ ಉಭಯ ನಾಚ್ಚಿಮಾರು ಎಲ್ಲಾ ದೇವಸ್ಥಾನಗಳಲ್ಲೂ ಒಂದೇ ರೀತಿಯಲ್ಲಿರುವುದು.

ಶಕ ೧೬೭೩ ವಿಕೃತಿ ಸಂ. (1770) ರಲ್ಲಿ ಶ್ರೀರಂಗನಾಥಸ್ವಾಮಿ ರಥಯಾತ್ರೆ ನಡೆಯುತ್ತಿದ್ದಾಗ ಅಕಸ್ಮಾತ್ ರಥಕ್ಕೆ ಅಗ್ನಿಪ್ರಮಾದವಾಗಿ ಉತ್ಸವಮೂರ್ತಿ (ಕಸ್ತೂರಿ ರಂಗನ್) ವಿಗ್ರಹವು ನಷ್ಟವಾಯಿತು. ತದನಂತರ ನೂತನವಾಗಿ ನಿರ್ಮಿಸಿದಾಗ ಆ ಮೂರ್ತಿ ಲಕ್ಷಣವು ವ್ಯತ್ಯಾಸವಾಗಿ ಪುನಃ ಇನ್ನೊಂದಾವೃತ್ತಿ ನಿರ್ಮಿಸಿ ಪ್ರತಿಷ್ಠಿಸಿದರು. ಈ ಮೂರ್ತಿಗೆ ಕಾವೇರಿ ರಂಗನ್ ಎಂದು ಹೆಸರು. ವ್ಯತ್ಯಾಸವಾದ ಮೂರ್ತಿಯೂ, ಕಾವೇರಿರಂಗನ್ ಮೂರ್ತಿಯೂ ಸಹ ಈಗ ಗರ್ಭಗೃಹದಲ್ಲೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇರುವುದು.

ಇದೇ ಕಾಲದಲ್ಲಿ ಮದ್ದಿನ ಮನೆಗೆ ಬೆಂಕಿ ಬಿದ್ದು ದೊಡ್ಡ ಉಗ್ರಾಣ ನಷ್ಟವಾದ ಕಾಲದಲ್ಲಿ ಶ್ರೀರಂಗನಾಥಸ್ವಾಮಿ ದೇವಸ್ಥಾನಕ್ಕೂ ಅಪಾಯವಾಗಿ ಪುನಃ ಜೀರ್ಣೋದ್ಧಾರ ಮಾಡಲಾಯಿತು. (A.D. 177 ವೈಶಾಖಮಾಸ)

ಶ್ರೀ ಲಕ್ಷ್ಮೀ ಅಮ್ಮನವರು -

ಪದ್ಮಾಸನರೂಪ, ಚತುರ್ಭುಜದಿಂದ ಕೂಡಿ ಮೇಲಿನ ಎರಡು ಹಸ್ತಗಳಲ್ಲಿ ಪದ್ಮವನ್ನೂ ಕೆಳಗಿನ ಬಲದ ಕೈ ಅಭಯ ಹಸ್ತವಾಗಿಯೂ, ಎಡದ ಕೈ ವರದ ಹಸ್ತವಾಗಿಯೂ ಇರುವುದು. ಎಲ್ಲಾ ದೇವಸ್ಥಾನಗಳಲ್ಲೂ ಒಂದೇ ವಿಧವು. ಸ್ವಲ್ಪವೂ ವ್ಯತ್ಯಾಸವಿರುವುದಿಲ್ಲ. ಕಿರೀಟ, ಹಾರ, ಕುಂಡಲಾದಿ ವಿವಿದಾಭರಣಗಳಿಂದಲಕೃತವು. ಆ ವಿಗ್ರಹದ ಮುಂದೆ ಅದೇ ಆಕಾರದ ಉತ್ಸವಮೂರ್ತಿ ಬಹುಸೌಂದರ್ಯವಾಗಿರುವುದು.

ಸಾಧಾರಣವಾಗಿ ಆಯಾ ದೇವಸ್ಥಾನದ ದೇವರ ಲಕ್ಷ್ಮೀ ಅಮ್ಮನವರನ್ನು ಅಲ್ಲಲ್ಲಿನ ಕ್ಷೇತ್ರ ಮಹಾತ್ಮೆಯನ್ನನುಸರಿಸಿ ವಿವಿಧ ಹೆಸರುಗಳಿಂದ ಕರೆಯುವರು. ಮೇಲುಕೋಟೆಯಲ್ಲಿ ಯದುಗಿರಿಯೆಂದೂ, ಶ್ರೀರಂಗದಲ್ಲಿ ರಂಗನಾಯಕಿಯೆಂದೂ, ಕಾಂಚೀಪುರದಲ್ಲಿ ಪೆರುಂದೇವಿಯೆಂದೂ, ಮದರಾಸ್ ತಿರುವಕ್ಕೇಣಿಯಲ್ಲಿ ವೇದವಲ್ಲಿ ಎಂದೂ, ತಿರುಪತಿಯಲ್ಲಿ ಪದ್ಮಾವತಿ (ಅಲಮೇಲುಮಂಗೈ)ಎಂದೂ ಕರೆಯುವರು. ನಮ್ಮ ದೇವಸ್ಥಾನದಲ್ಲಿ ಲಕ್ಷ್ಮೀ ಅಮ್ಮನವರಿಗೆ ಶ್ರೀರಂಗನಾಯಕಿ ಎಂದು ಹೆಸರು.

ಸೇನೈ ಮೊದಲಿಯಾರು (ವಿಷ್ವಕ್ಸೇನರು) ಮೂಲಮೂರ್ತಿ ನವರಂಗ ಮಂಡಪದಲ್ಲಿ ಪ್ರತಿಷ್ಠಿತರಾಗಿರುವರು. ದೇವರ ಪರಿವಾರ. ದೇವತೆಗಳಿಗೆಲ್ಲಾ ಅಧಿಪತಿಯು. ಗೃಹಗಳಲ್ಲಾಗಲಿ, ದೇವಸ್ಥಾನಗಳಲ್ಲಾಗಲಿ ನಡೆಯುವ ಎಲ್ಲಾ ಶುಭಶೋಭನಗಳಲ್ಲಿ ಕೆಲಸಕಾರ್ಯವನ್ನಾರಂಭಿಸುವಾಗ ನಿರ್ವಿಘ್ನವಾಗಿ ನಡೆಯಲು, ಮೊದಲು ವಿಷ್ವಕ್ಸೇನರಿಗೆ ಪೂಜಾನಿವೇದನಗಳಾದ ಮೇಲೆಯೇ ಇತರ ಕೆಲಸಕಾರ್ಯಗಳನ್ನಾರಂಭಿಸುವರು. ಯಾವ ದೇವಸ್ಥಾನವೇ ಆಗಲಿ ವಾಯವ್ಯ ಭಾಗದಲ್ಲಿ ವಿಷ್ವಕ್ಸೇನರ ಸ್ಥಾನವು. ವಿಷ್ವಕ್ಸೇನರು ನಮ್ಮ ಶ್ರೀವೈಷ್ಣವ ಮತಕ್ಕೆ ಮಹಾಲಕ್ಷ್ಮೀಯಾದ ನಂತರ ಅವರು ಪ್ರಥಮ ಗುರುಗಳು. ಆದ್ದರಿಂದಲೇ ಶ್ರೀವೈಷ್ಣವರಾದ ನಾವು ಗುರುಪರಂಪರೆಯನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅನುಸಂಧಿಸುವಾಗ ವಿಷ್ವಕ್ಸೇನರನ್ನು ಅನುಸಂಧಿಸಿಬಿರುತ್ತೇವೆ. ಶ್ರೀಮಹಾಲಕ್ಷ್ಮಿಯಾದ ಮೇಲೆ ಇವರ ಸ್ಥಾನವು. ಇವರು ಚತುರ್ಭುಜಯುಕ್ತರಾಗಿ ಮೇಲಿನ ಎರಡು ಕೈಗಳಲ್ಲಿ ಚಕ್ರ, ಶಂಖವನ್ನೂ ಕೆಳಗಿನ ಬಲದ ಕೈ ತರ್ಜನೀ ಮುದ್ರೆ (ಶಾಸನಕ್ರಮ) ಎಡದ ಕೈಯಲ್ಲಿ ಗದೆ ಹಿಡಿದು ಆಸೀನರೂಪದಲ್ಲಿ ಬಲಗಾಲನ್ನು ಇಳಿಬಿಟ್ಟು ಎಡದ ಕಾಲನ್ನು ಮಡಿಸಿರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಳ್ವಾರಾಚಾರ್ಯರುಗಳು -

ಭಗವಂತನಲ್ಲಿ ಭಕ್ತಿಪರವಶರಾಗಿ ಭಗವಂತನ ರೂಪ, ಗುಣ, ಲಕ್ಷಣ, ಔದಾರ್ಯ ಗುಣಗಳನ್ನು ಕೊಂಡಾಡಿ ಅನುಭವಿಸಿ ಆನಂದದಲ್ಲಿ ಮುಳುಗಿದವರಿಗೆ ಆಳ್ವಾರುಗಳೆಂದೂ, ಭಗವಂತನ ಆದೇಶವಾದ ವೇದಾಂತ ಮತ್ತು ಶಾಸ್ತ್ರಗ್ರಂಥಗಳನ್ನು ಓದಿ ಅನುಷ್ಠಿಸಿ, ಉಪದೇಶ ಮಾಡಿ ವೇದಾಂತ ಭಕ್ತಿ ಮಾರ್ಗವನ್ನು ಪ್ರಚಾರ ಮಾಡಿದವರಿಗೆ ಆಚಾರ್ಯರುಗಳೆಂದೂ ಕರೆಯಲ್ಪಡುವರು. ಆ ರೀತಿ ಶ್ರೀವೈಷ್ಣವ ಸಂಪ್ರದಾಯದಲ್ಲಿ ೧೨ ಆಳ್ವಾರುಗಳೂ, ಅನೇಕ ಆಚಾರ್ಯರುಗಳೂ ಇರುತ್ತಾರೆ. ಅವರಲ್ಲಿ ಮುಖ್ಯರಾದವರು ಆಳ್ವಾರುಗಳಲ್ಲಿ ನಮ್ಮಾಳ್ವಾರು, ತಿರುಮಂಗೈಯಾಳ್ವಾರು, ಆಂಡಾಳ್ ಎಂಬ ಈ ಮೂವರಿರುವರು. ಆಚಾರ್ಯರುಗಳಲ್ಲಿ, ಶ್ರೀರಾಮಾನುಜಾಚಾರ್ಯರು, ಶ್ರೀವತ್ಸಾಂಕಮಿಶ್ರರು, ವೇದವ್ಯಾಸ ಭಟ್ಟರು, ಪೆಳ್ಳೈಲೋಕಾಚಾರ್ಯರು, ಶ್ರೀವೇದಾಂತ ದೇಶಿಕರು, ಮಣವಾಳಮಾಮುನಿಗಳು (ವರವರ ಮುನಿಗಳು) ಇವರುಗಳಲ್ಲಿ ಶ್ರೀರಾಮಾನುಜಾಚಾರ್ಯರೇ ಪ್ರಧಾನರು. ಇವರ ವಿಗ್ರಹ, ಮೂರ್ತಿ ದೇವಸ್ಥಾನದಲ್ಲಿ ಪ್ರತಿಷ್ಠಿತವಾಗಿಲ್ಲದಿದ್ದರೆ ಆ ದೇವಸ್ಥಾನದಲ್ಲಿ ತೀರ್ಥಪ್ರಸಾದಗಳನ್ನು ಸ್ವೀಕರಿಸುವುದಿಲ್ಲ ಎಂಬ ನಿಯಮವೂ ಇರುವುದು.

ನಮ್ಮ ದೇವಸ್ಥಾನದಲ್ಲಿ ಧ್ವಜಸ್ತಂಭವಿರುವ ೨ನೆಯ ಪ್ರಾಕಾರದಲ್ಲಿ ಪ್ರದಕ್ಷಿಣವಾಗಿ ಬರುವಾಗ ಮೊದಲನೆಯ ಸನ್ನಿಧಿಯು ಪಿಳ್ಳೈಲೋಕಾಚಾರ್ಯರು. -ಅಜಾನುಬಾಹು, ಉಪದೇಶಮುದ್ರೆ, (ಶಿಲಾಮೂರ್ತಿ) ಮುಂಭಾಗದಲ್ಲಿ ತದ್ವತ್ ಉತ್ಸವ ಮೂರ್ತಿ (ಲೋಹಮೂರ್ತಿ) ಈ ಆಚಾರ್ಯರು ಶ್ರೀ ವೈಷ್ಣವ ಸಂಪ್ರದಾಯದಲ್ಲಿ ಅನೇಕ ಗ್ರಂಥಗಳನ್ನು ಬರೆದಿರುವರು. ಆಜೀವ ಬ್ರಹ್ಮಚಾರಿಗಳು.

೨. ಮಣವಾಳ ಮಹಾಮುನಿ - ಇವರ ಮೂರ್ತಿ ಶ್ರೀರಾಮಾನುಜಾಚಾರ್ಯರಂತೆಯೇ ಪದ್ಮಾಸನ, ಅಂಜಲಿಬದ್ಧ, ತ್ರಿದಣ್ಡಧಾರಿ, ಇವರಿಗೂ, ರಾಮಾನುಜರಿಗೂ ವ್ಯತ್ಯಾಸ ತೋರಿಸಲು ಇವರ ಶಿರಸ್ಸಿನ ಮೇಲೆ ಆದಿಶೇಷರೂಪದ ಅಲಂಕಾರವನ್ನು ತೋರಿಸಿರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಸನ್ನ ಕೋದಣ್ಡರಾಮ ಸನ್ನಿಧಿ - ಕೋದಣ್ಡರಾಮಸ್ವಾಮಿ

೧. ಮನ್ನಾರ್ ಶ್ರೀಕೃಷ್ಣ ಸನ್ನಿಧಿ (ರಾಜಮನ್ನಾರ್ ಕೃಷ್ಣ)

ಶ್ರೀ ಕೋದಣ್ಡರಾಮಸ್ವಾಮಿ ಮೂರ್ತಿಯು ಬಿಲ್ಲುಬಾಣ ಸಹಿತವಾಗಿ, ಪಕ್ಕದಲ್ಲಿ ಸೀತಾ ಲಕ್ಷ್ಮಣ ವಿಗ್ರಹವಿರುವುದು. ಮುಂದೆ ಆಂಜನೇಯಸ್ವಾಮಿ ಉತ್ಸವಮೂರ್ತಿ ಇರುವುದಿಲ್ಲ.

ಈ ಮೂರ್ತಿಗೆ ಚಿಕ್ಕ ದೇವರಾಯ ಒಡೆಯರ ಕಾಲದಲ್ಲಿ ಶಕ ೧೬೦೯ ಅಕ್ಷಯ ಸಂ. ಮಾರ್ಗಶಿರ ಶುದ್ಧ ೧೫ (19-11-1686) ರಲ್ಲಿ ದೇವರಾಜ ಒಡೆಯರ ಬೊಂಬಿನ ಊಳಿಗದ ಚಲುವವ್ವೆ ಮಗ ದೊಡ್ಡದೇವಯ್ಯನು ಚಿಕ್ಕದೇವ ಮಹಾರಾಜ ಒಡೆಯರ ಅಪ್ಪಣೆ ಪಡೆದು ಕ್ರಯಕ್ಕೆ ತೆಗೆದುಕೊಂಡ. ಬಳ್ಳ ಗುಳ್ಳದ ಜನ್ನೈಯ್ಯಂಗಾರ್ರ ೪ - ೩ ವೃತ್ತಿಗಳು ಚಿಂತಾಮಣಿ ಅಯ್ಯಂಗಾರ್ರ ೩ ವೃತ್ತಿಗಳು ಮತ್ತು ಅವ್ವೇರಹಳ್ಳಿಯ ಗ್ರಾಮವನ್ನೂ ಅದಕ್ಕೆ ಸೇರಿದ ಗದ್ದೆ, ಬೆದ್ದಲು, ತೋಟ, ಮಗ್ಗ, ಮನೆಸುಂಕ ಎಲ್ಲಾ ಆದಾಯಗಳನ್ನೂ ಶ್ರೀರಂಗನಾಥಸ್ವಾಮಿಯವರಿಗೆ ಕ್ರಯಪತ್ರ ಬರೆದು ಅದರಿಂದ ಬರುವ ವರಮಾನದಿಂದ ಶ್ರೀಕೋದಣ್ಡರಾಮಚಂದ್ರ ದೇವರಿಗೆ ನಿತ್ಯ ನಿವೇದನ ಪಡಿತರ ದೀಪಾರಾಧನೆ, ಶ್ರೀರಾಮನವಮಿ ಉತ್ಸವ ನಡೆಸುವುದು.

ಶ್ರೀ.ಪ. ೨೪ ತಾಮ್ರಶಾಸನ-

ಆಣ್ಡಾಳ್ - ಗೋದಾದೇವಿ - ಶೂಡಿಕೊಡುತ್ತಾನಾಚ್ಚಿಯಾರ್-

ಶ್ರೀವಿಲ್ಲಿಪುತ್ತೂರಿನ ವಾಸಸ್ಥರಾದ ಪೆರಿಯಾಳ್ವಾರವರು (ವಿಷ್ಣುಚಿತ್ತರು) ಸಾತ್ವಿಕರು, ಭಗವದ್ಭಕ್ತರು, ನಂದನವನವನ್ನು ಕಲ್ಪಿಸಿ ಭಗವಂತನಿಗೆ ಪುಷ್ಪ ಕೈಂಕರ್ಯವನ್ನು ನಡೆಸುತ್ತಿದ್ದರು. ಇವರ ಮಗಳು ಗೋದಾದೇವಿಗೆ ಚಿಕ್ಕಂದಿನಿಂದಲೂ ಪುರಾಣಕಥೆಗಳು, ಭಾಗವತ ಮುಂತಾಗಿ ಶ್ರೀಕೃಷ್ಣ ಚರಿತ್ರೆಯನ್ನು ಬೋಧಿಸಿದ್ದರು. ಗೋದೆಗೆ ಶ್ರೀಕೃಷ್ಣನಲ್ಲಿ ಅಪಾರ ಭಕ್ತಿಯುಂಟಾಯಿತು. ಗೋದಾದೇವಿಯು ಪ್ರಾಪ್ತವಯಸ್ಕಳಾದಾಗ ರುಕ್ಮಿಣಿಯಂತೆ ತಾನೂ ಏಕೆ ಭಗವಂತನನ್ನು ವಿವಾಹವಾಗಬಾರದು ? ಎಂದಾಲೋಚಿಸಿ ಪೆರಿಯಾಳ್ವಾರು ಭಗವಂತನಿಗೆ ಸಮರ್ಪಿಸಲು ಇಟ್ಟಿದ್ದ ಪುಷ್ಪಮಾಲೆಯನ್ನು ಧರಿಸಿ ಅಲಂಕರಿಸಿಕೊಂಡು ಭಗವಂತನ ಅನುಗ್ರಹಕ್ಕೆ ಪಾತ್ರಳಾಗಲು ತನಗೆ ರೂಪ, ಯೌವನ, ಗುಣ, ಭಕ್ತಿಗಳು ಇವೆಯೆ? ಎಂದು ಕನ್ನಡಿಯಲ್ಲಿ (ದರ್ಪಣ) ನೋಡಿಕೊಂಡು ಸಂತೋಷಪಟ್ಟು. ತಂದೆಯವರು ಕೋಪಮಾಡುವರೆಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಯಪಟ್ಟು ಅಲಂಕರಿಸಿಕೊಂಡಿದ್ದ ಪುಷ್ಪಗಳನ್ನು ಕಳೆದು ಇಡುತ್ತಿದ್ದಳು. ಪೆರಿಯಾಳ್ವಾರು ಇದನ್ನು ತಿಳಿಯದೆ ದೇವರಿಗೆ ಸಮರ್ಪಿಸುತ್ತಿದ್ದರು. ಒಂದು ದಿನ ಪೆರಿಯಾಳ್ವಾರು ಗೋದಾದೇವಿ ಪುಷ್ಪವನ್ನಲಂಕರಿಸಿಕೊಂಡು ಕಳಚಿ ಇಡುವುದನ್ನು ಕಂಡು ಖಿನ್ನರಾಗಿ ಆ ದಿನ ದೇವರಿಗೆ ಪುಷ್ಪವನ್ನು ಸಮರ್ಪಿಸದೆ ಇದ್ದರು.

ಭಗವಂತನು ಪೆರಿಯಾಳ್ವಾರ್ರ ಸ್ವಪ್ನದಲ್ಲಿ ಗೋದಾದೇವಿಯು ಮುಡಿದು ಇಟ್ಟ ಪುಷ್ಪವೇ ತನಗೆ ಇಷ್ಟವೆಂದು ತಿಳಿಸಲು ಪೆರಿಯಾಳ್ವಾರು ಭಯಪಟ್ಟವರಾಗಿ ಗೋದೆಯು ಸಾಕ್ಷಾತ್ ಲಕ್ಷ್ಮಿಯ ಅಂಶವಾಗಿರಬೇಕೆಂದು ಭಾವಿಸಿದರು. ಕಾಲಕ್ರಮದಲ್ಲಿ ಆಂಡಾಳ್ ಗೋದಾದೇವಿಯು ತನ್ನ ಭಕ್ತಿಯ ಅತಿಶಯದಿಂದ ಶ್ರೀಕೃಷ್ಣನ ಮೇಲೆ ಅನೇಕ ಪದ್ಯ, ಸ್ತೋತ್ರಗಳನ್ನು ರಚಿಸಿ ಶ್ರೀರಂಗನಾಥರ ದಿವ್ಯ ಚರಣಕಮಲದಲ್ಲಿ ಐಕ್ಯಳಾದಳು. ಅವಳು ಬರೆದ ತಿರುಪ್ಪಾವೈ ಎಂಬ ಪದ್ಯಮಾಲೆಯು ವೇದಾಂತಾರ್ಥವನ್ನು ಕೊಡುವುದರಿಂದ ಈ ಪ್ರಪಂಚಕ್ಕೆ ಆದರ್ಶಪ್ರಾಯವಾಗಿರುವುದು. ಶ್ರೀವೈಷ್ಣವರು ತಮ್ಮ ನಿತ್ಯ ಜೀವನಕ್ರಮ ಮತ್ತು ಭಗವಂತನ ಪೂಜಾಕ್ರಮದಲ್ಲಿ ದೇವಸ್ಥಾನಗಳಲ್ಲಿಯೂ, ಮನೆಗಳಲ್ಲಿಯೂ ನಿತ್ಯವೂ ಅನುಸಂಧಿಸಿ ಬರುವರು.

ಆಂಡಾಳ್ ಸ್ವರೂಪ - ಸಾಧಾರಣವಾಗಿ ಅಂಡಾಳ್ ಗೋದಾದೇವಿಯ ವಿಗ್ರಹವು ಸುಂದರವಾದ ೧೨ ವರ್ಷದ ಕನ್ಯಾ ಸ್ತ್ರೀ. ನಿಂತಿರುವ ರೂಪ ಕೇಶಬಂಧದಿಂದ ಕೂಡಿ ಬಲದ ಕೈಯಲ್ಲಿ ಮೊಗ್ಗಾದ ಕಮಲ ಪುಷ್ಪವನ್ನು ಹಿಡಿದು ಎಡದ ಕೈ ಗಜಹಸ್ತವಾಗಿರುವುದು. ಇದು ಆಂಡಾಳ್ ಮೂರ್ತಿಸ್ವರೂಪವು. ಆದರೆ ನಮ್ಮ ದೇವಸ್ಥಾನದಲ್ಲಿ ಆಂಡಾಳ್ ವಿಗ್ರಹ = ಮೂರ್ತಿಯು ಪದ್ಮಾಸನರೂಪದಲ್ಲಿ ಕುಳಿತಿರುವುದು. ಅಲ್ಲದೆ ಅಂಜಲಿಹಸ್ತವಾಗಿರುವುದು. ಈ ಮೂರ್ತಿಯನ್ನು ಅಂಡಾಳ್ ಎಂದು ಕರೆದು ಅದಕ್ಕೆ ಸಲ್ಲಬೇಕಾದ ಎಲ್ಲಾ ಮರ್ಯಾದೆ, ಉಪಚಾರಗಳನ್ನು ನಡೆಸುವರು.

ವಸ್ತುತಃ ಈ ಮೂರ್ತಿಯು ಆಂಡಾಳ್ ಮೂರ್ತಿಯಲ್ಲವು. ಆಂಡಾಳ್ ವಿಗ್ರಹವು ನಷ್ಟವಾಗಿ ಆಸ್ಥಾನದಲ್ಲಿ ದೊರೆತ ವಿಗ್ರಹ ಮೂರ್ತಿಯನ್ನು ಆಂಡಾಳ್ ಎಂದು ಪ್ರತಿಷ್ಠಿಸಿರುವರು. ಬೇರೆ ಆಂಡಾಳ್ ವಿಗ್ರಹ ಮೂರ್ತಿ ಇಲ್ಲವಾದ್ದರಿಂದ ದೊರೆತ ಈ ವಿಗ್ರಹಕ್ಕೆ ಎಲ್ಲಾ ಮರ್ಯಾದೆಗಳನ್ನು ನಡೆಸುವರು.

ಶ್ರೀಲಕ್ಷ್ಮೀನರಸಿಂಹಸ್ವಾಮಿ ಸನ್ನಿಧಿ -

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಲಕ್ಷ್ಮೀನರಸಿಂಹಸ್ವಾಮಿಯವರ ತೊಡೆಯಮೇಲೆ ಶ್ರೀಮಹಾಲಕ್ಷ್ಮೀ ಅಮ್ಮನವರು ಕುಳಿತಿರುವ ಆಕಾರ- ಶ್ರೀಮಹಾಲಕ್ಷ್ಮೀ ಅಮ್ಮನವರ ಬಲಹಸ್ತವೂ ಮತ್ತು ಶ್ರೀಲಕ್ಷ್ಮೀನರಸಿಂಹಸ್ವಾಮಿಯವರ ಎಡದ ಕೈ ಹಸ್ತವೂ ಸೇರಿ ಒಬ್ಬರನ್ನೊಬ್ಬರು ಆಲಿಂಗನ ಮಾಡಿಕೊಂಡಿರುವಂತೆ ಇರುವುದು. ಈ ರೀತಿ ಇತರ ಸ್ಥಳಗಳಲ್ಲಿಯೂ ಕಾಣಬರುವುದಿಲ್ಲ. ಅಪೂರ್ವವಾದ ಸನ್ನಿವೇಶ.

ಸುದರ್ಶನಾಳ್ವಾರ್‌ಸನ್ನಿಧಿ- ಕಲಾಮೂರ್ತಿ ಬೃಹದಾಕಾರವಾಗಿರುವುದು

ಗಜೇಂದ್ರವರದರಾಜರ ಸನ್ನಿಧಿ - ಶ್ರೀಸುದರ್ಶನಾಳ್ವಾರ್ ಸನ್ನಿಧಿ ಪಕ್ಕದಲ್ಲಿ ಶ್ರೀವರದರಾಜಸ್ವಾಮಿ ಸನ್ನಿಧಿ, ಶ್ರೀವರದರಾಜರು ಶಂಖ, ಚಕ್ರ ಗದಾಧಾರಿಯಾಗಿರುವರು. ಕೆಳಗಿನ ಬಲದಕೈನ್ನು ಗಜರಾಜನ (ಆನೆ) ತಲೆಯ ಮೇಲೆ ಅನುಗ್ರಹಿಸುವಂತಿದೆ.

ನಾಥಮುನಿ - ಆಳವಂದಾರು -

ನಾಥಮುನಿಗಳು - ನಮ್ಮಾಳ್ವಾರು ರಚಿಸಿದ ನಾಲ್ಕುಸಾವಿರ ದ್ರಾವಿಡ ಪ್ರಬಂಧಗಳನ್ನು ಸಂಪಾದಿಸಿ ಪ್ರಚಾರ ಮಾಡಿದವರು. ಶ್ರೀವೈಷ್ಣವರಿಗೆ ಪ್ರಥಮ ಆಚಾರ್ಯರು. ಅವರ ಮೊಮ್ಮಕ್ಕಳಾದ ಆಳವಂದಾರ್ರು ಇವರಿಗೆ ಯಾಮುನಾಚಾರ್ಯರೆಂದು ಹೆಸರು. ಅನೇಕ ವೇದಾಂತ ರಹಸ್ಯ ಗ್ರಂಥಗಳನ್ನು ಬರೆದಿರುವುದು. ಉತ್ಸವಮೂರ್ತಿ ಇರುವುದಿಲ್ಲ.

ತಿರುಮಂಗೈ ಆಳ್ವಾರು - ಮೂಲಮೂರ್ತಿ, ಉತ್ಸಮೂರ್ತಿ ಎರಡೂ ಇರುವುದು. ಇವರು ಶ್ರೀವೈಷ್ಣವರ - ತದೀಯಾರಾಧನ ದೇವಸ್ಥಾಗಳ ಜೀರ್ಣೋದ್ಧಾರ ಮಾಡಿದವರು. ಅನೇಕ ಪ್ರಬಂಧ ಸ್ತೋತ್ರಗಳನ್ನು ಬರೆದಿರುವರು.

ನಮ್ಮಾಳ್ವಾರು - ಮೂಲಮೂರ್ತಿ ಉತ್ಸವಮೂರ್ತಿ ಸಹಿತವಾಗಿಧಾರೆ, ಮೂಲಮೂರ್ತಿ ದ್ವಿಭುಜ ಉಪದೇಶ ಮುದ್ರೆ, ತದ್ವತ್ ಉತ್ಸವಮೂರ್ತಿ ಆಳ್ವಾರುಗಳಲ್ಲಿ ಪ್ರಧಾನರು. ದ್ರಾವಿಡ ಪ್ರಬಂಧಗಳಲ್ಲಿ ಮುಖ್ಯವಾದ ತಿರುವಾಯ್ಮೊಳಿ ಎಂಬ ೧೦೦೦ ಒಂದು ಸಾವಿರ ಪದ್ಯಗಳನ್ನು ರಚಿಸಿ ಅದರಲ್ಲಿ ಭಗವಂತನ ಗುಣಾನುಭವಗಳಿಂದ ಸ್ತೋತ್ರ ಮಾಡಿ ಭಗವತಂನನ್ನು ಸಾಕ್ಷಾತ್ಕರಿಸಿದವರು.

ಈ ಸನ್ನಿಧಿಯಲ್ಲೇ ಮೊದಲಾಳ್ವಾರ್ರು ಎಂದು ಕರೆಯುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೊಯ್‌ಕೈಯಾರ್, ೨. ಪೂದತ್ತಾರ್, ೩. ಪೇಯಾಳ್ವಾರ್ ಎಂಬುವರ ವಿಗ್ರಹ ಮೂರ್ತಿಗಳಿವೆ. ಈ ಮೂವರೂ ಭಗವಂತನ ಗುಣಗಳನ್ನು ಗಾನಮಾಡಿ ಹಾಡಿ ಆನಂದಿಸಿರುವರು. ಅಲ್ಲದೆ ಪೆರಿಯಾಳ್ವಾರ್ (ಗೋದಾದೇವಿ ತಂದೆ) ತಿರುಮೊಳಿಶೈಯಾಳ್ವಾರ್, ಕುಲಶೇಖರ ಆಳ್ವಾರ್, ತಿರುಪ್ಪಾಣಿ ಆಳ್ವಾರ್ ಇವರ ವಿಗ್ರಹ ಮೂರ್ತಿಗಳಿವೆ.

ಶ್ರೀಮಣವಾಳಮಹಾಮುನಿಗಳು - (A.D. 1370-1444)

ಶ್ರೀವೈಷ್ಣವರ ಹೆಮ್ಮೆಗೆ ಕಾರಣವಾಗಿ ಮಣವಾಳಮುನಿ ಎಂಬುವರ ಜೀವನಚರಿತ್ರೆಯು. ಇವರು ರಚಿಸಿದ ಸಂಪ್ರದಾಯಕ ಗ್ರಂಥಗಳು ಮತ್ತು ಶ್ರೀವೈಷ್ಣವರು ನಿಯಮವನ್ನನುಸರಿಸಿ ಇರುವಂತೆ ಏರ್ಪಡಿಸಿದ ಕ್ರಿಯಾಶಕ್ತಿ ಇವರು. ಇವರನ್ನು ಶ್ರೀವೈಷ್ಣವರು ಮನಸ್ಸಿನಲ್ಲಿ ಯಾವಾಗಲೂ ಸ್ಮರಿಸಿ ಬರುವವರಾಗಿರುವರು.

ನಮ್ಮಾಳ್ವಾರು ಅವತರಿಸಿದ ಆಳ್ವಾರ್ ತಿರುನಗಿರಿ ಎಂಬ ಊರಿನಲ್ಲಿ 1370ರಲ್ಲಿ ಜನಿಸಿದರು. ಇವರು ಶ್ರೀಶೈಲ ಎಂದು ಕರೆಯುವ ತಿರುವಾಯ್ಮೊಳಿಪಿಳ್ಳೆಯವರ ಶಿಷ್ಯರು. ಇವರು ಮೊದಲು ಗೃಹಸ್ಥರಾಗಿದ್ದು ಅನಂತರ ಸನ್ಯಾಸವನ್ನು ಸ್ವೀಕರಿಸಿ ಶ್ರೀರಂಗದಲ್ಲಿ ನೆಲೆಸಿದ್ದರು. ಇವರು ತಮ್ಮ ಜೀವನ ಚಟುವಟಿಕೆಗಳನ್ನೆಲ್ಲಾ ಆಳ್ವಾರಾಚಾರ್ಯರುಗಳ ಮತ್ತು ಶ್ರೀರಾಮಾನುಜರ ಉಪದೇಶ ಗ್ರಂಥಗಳನ್ನು ಪ್ರಚಾರ ಮಾಡುವುದರಲ್ಲೇ ಕಾಲಕಳೆದರು. ಇವರ ವಿದ್ವತ್ಪ್ರಭೆಯನ್ನು ಕಂಡು 1 ಕೋಯಿಲ್‌ಕಂದಾಡೈ ಅಣ್ಣನ್ 2 ಪ್ರತಿವಾದಿಭಯಂಕರ ಅಣ್ಣನ್ 3 ಎರುಂಬಿಯಪ್ಪ
4 ವಾನಮಾಮಲೈಜೀಯರ್ 5. 6. 7. 8. ಶಿಷ್ಯರಾಗಿ ಕಡೆಗೆ ಶ್ರೀರಾಮಾನುಜರ ವೇದಾಂತ ಪ್ರಚಾರ ನಡೆಸಲು ಮಣವಾಳಮಹಾಮುನಿಗಳು ಇವರನ್ನು ಅಷ್ಟದಿಗ್ಗಜಗಳೆಂದು ಕರೆದು, ಸಿದ್ಧಾಂತ ಸ್ಥಾಪನೆಗೆ ಏರ್ಪಡಿಸಿದರು.

ಮಣವಾಲಮಾಮುನಿಗಳು, ಪಿಳ್ಳೈಲೋಕಾಚಾರ್ಯರೆಂಬುವರು ಬರೆದ ಗ್ರಂಥಗಳಿಗೆಲ್ಲಾ ವ್ಯಾಖ್ಯಾನ ಬರೆದಿರುವರು. ಅಲ್ಲದೆ ಪ್ರತ್ಯೇಕವಾದ ಗ್ರಂಥಗಳನ್ನೂ ಬರೆದಿರುವರು.

ಶ್ರೀರಾಮಾನುಜಾಚಾರ್ಯರ ಪರಿಚಯ -

ಶ್ರೀರಾಮಾನುಜಾಚಾರ್ಯರು ಮದರಾಸಿಗೆ ಮೂವತ್ತು ಮೈಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೂರದಲ್ಲಿರುವ ಶ್ರೀಪೆರಂಬೂದೂರಿನಲ್ಲಿ ಶಕ ೯೩೯ ಪಿಂಗಲ ಸನ್ (1017 A.D.) ರಲ್ಲಿ ಅವತರಿಸಿದರು. ಅವರ ತಂದೆ ಕೇಶವಸೋಮಯಾಜಿಗಳು-ತಾಯಿ ಕಾಂತಿಮತಿ. ರಾಮಾನುಜರಿಗೆ ಉಪನಯನವನ್ನು ಮಾಡಿ ಅವರಿಗೆ ಕಲಿಸಬೇಕಾದ ವಿದ್ಯೆಗಳನ್ನೆಲ್ಲಾ ಕಲಿಸಿದರು. ಸೋಮಯಾಜಿಗಳ ಕಾಲಾನಂತರ ರಾಮಾನುಜರು ಕಾಂಚೀಪುರಕ್ಕೆ ಬಂದು ಅಲ್ಲಿ ಅದ್ವೈತ ವೇದಾಂತ ಪ್ರಸಿದ್ಧರಾದ ಯಾದವಪ್ರಕಾಶರಲ್ಲಿ ಶಾಸ್ತ್ರಗಳನ್ನೆಲ್ಲಾ ಓದಿದರು.

ಬಹು ಮೇಧಾವಿಯಾದ ರಾಮಾನುಜರನ್ನು ಕಂಡು ಯಾದವ ಪ್ರಕಾಶರಿಗೆ ಬಹಳ ಸಂತೋಷವಾಗಿತ್ತು. ಆದರೆ ಯಾದವ ಪ್ರಕಾಶರು ಹೇಳುವ ವೇದಾಂತಾರ್ಥವು ರಾಮಾನುಜರಿಗೆ ಸರಿಬೀಳಲಿಲ್ಲ. ಆದ್ದರಿಂದ ರಾಮಾನುಜರು ಅವರಲ್ಲಿ ವಿದ್ಯಾಭ್ಯಾಸವನ್ನು ಬಿಟ್ಟು ಶಾಂತಸ್ವಭಾವದವರಾಗಿ ವರದರಾಜದೇವರ ಶೈತ್ಯೋಪಚಾರ ಕೈಂಕರ್ಯನಿರತರಾಗಿದ್ದ ತಿರುಕಚ್ಚಿನಂಬಿಗಳಲ್ಲಿ ಸೇರಿದರು. ತಿರುಕಚ್ಚಿನಂಬಿಗಳು ಶ್ರೀರಂಗದ ಪಿರಿಯನಂಬಿಗಳ ಹತ್ತಿರ ಓದುವಂತೆ ತಿಳಿಸಿದರು.

ಅದೃಷ್ಟವಶಾತ್ ಪೆರಿಯನಂಬಿಗಳೂ ರಾಮಾನುಜರೂ ಮಧುರಮಂಗಲವೆಂಬ ಸ್ಥಳದಲ್ಲಿ ಸಂಧಿಸಿದರು. ಅನಂತರ ರಾಮಾನುಜರು ಪೆರಿಯನಂಬಿಗಳನ್ನು ಕಾಂಚೀಪುರದಲ್ಲಿ ತಮ್ಮ ಮನೆಗೆ ಕರೆದುಕೊಂಡುಬಂದು ಒಂದುಭಾಗದಲ್ಲಿರಿಸಿ ಅವರಲ್ಲಿ ಶಾಸ್ತ್ರ ಸಂಪ್ರದಾಯಗಳನ್ನೂ ರಹಸ್ಯಗಳನ್ನೂ ತಿಳಿದರು. ಶ್ರೀರಾಮಾನುಜರು ಶಾಸ್ತ್ರ ಸಂಪ್ರದಾಯ ಕಲಿತು ನಿಪುಣರಾದ ಮೇಲೆ ಗೃಹಸ್ಥಾಶ್ರಮವನ್ನು ಬಿಟ್ಟು ಸನ್ಯಾಸವನ್ನು ಸ್ವೀಕರಿಸಿದರು.

ಇವರ ಜೊತೆಗೆ ಕಂದಾಡೈ ಮೊದಲಿಯಾಂಡಾನ್ (ರಾಮಾನುಜರ ಚಿಕ್ಕಮ್ಮನ ಮಗ) ಜ್ಞಾತಿಯಾದ ಕೂರತ್ತಳ್ವಾನ್ ಎಂಬುವರೂ ರಾಮಾನುಜರ ಶಿಷ್ಯರಾಗಿ ಸೇರಿದರು. ತದನಂತರ ಕಾಲದಲ್ಲಿ ಅವರಿಬ್ಬರೂ ರಾಮಾನುಜರನ್ನು ಬಿಡಲಾರದೆ, ರಾಮಾನುಜರ ವೇದಾಂತಭಾಗ ಪ್ರಚಾರದಲ್ಲಿ ಸಹಾಯಕರಾಗಿದ್ದರು. ಯಾದವ ಪ್ರಕಾಶರು ರಾಮಾನುಜರ ವೇದಾಂತವನ್ನು ಒಪ್ಪಿ ತಾವೂ ವಿಶಿಷ್ಟಾದ್ವೈತ ವೇದಾಂತವನ್ನು ಸ್ವೀಕರಿಸಿ ಶ್ರೀವೈಷ್ಣವರಾದರು.. ಶ್ರೀರಾಮನುಜರ ಕೀರ್ತಿಯು ದೇಶದಲ್ಲೆಲ್ಲಾ ಹರಡಿತು. ಭಗವಂತನಲ್ಲಿ ಭಕ್ತಿಯನ್ನು ಭೋದಿಸಿದರು. ರಾಮಾನುಜರ ವೇದಾಂತವು ಲೋಕಪ್ರಖ್ಯಾತವಾಗಿ ಎಲ್ಲರಿಂದಲೂ ಅಂಗೀಕರಿಸಲ್ಪಟ್ಟಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀರಾಮಾನುಜರು ತಮ್ಮ ವಿದ್ವತ್ತು ಮತ್ತು ದೈವದತ್ತವಾದ ಅನುಗ್ರಹ ಶಕ್ತಿಗಳಿಂದ ಕೂಡಿ ನಾಥಮುನಿ, ಆಳವಂದಾರ್, ಪೆರಿಯನಂಬಿಗಳಂತೆ ಶ್ರೀವೈಷ್ಣವರಿಗೆಲ್ಲಾ ಆಚಾರ್ಯರಾದರು.

ಶ್ರೀರಂಗವು ಶ್ರೀರಾಮಾನುಜರ ಕಾರ್ಯಕ್ರಮಗಳಿಗೆ ಕೇಂದ್ರಸ್ಥಾನವಾಗಿದ್ದಿತು. ಅವರು ದೇವಸ್ಥಾನದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿದರು. ರಾಮಾನುಜರು ಚೋಳರಾಜರ ನಿಮಿತ್ತ ಅಜ್ಞಾತವಾಸವಾಗಿ ನಮ್ಮ ಹೊಯ್ಸಳ ಕರ್ಣಾಟಕಕ್ಕೆ ಬಂದು ವಿಷ್ಣುವರ್ಧನ ಮಾಹಾರಾಜನನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡು ಮೇಲುಕೋಟೆ ತಿರುನಾರಾಯಣಪುರವನ್ನು ಜೀರ್ಣೋದ್ಧಾರ ಮಾಡಿದರು.

ಶ್ರೀ ರಾಮಾನುಜರು ಬ್ರಹ್ಮಸೂತ್ರ, ಉಪನಿಷತ್ತು ಮತ್ತು ಭಗವದ್ಗಿತೆ ಇವುಗಳಿಗೆ ವ್ಯಖ್ಯಾನ ಬರೆದಿರುವರು.

೧. ಶ್ರೀ ಭಾಷ್ಯ ೨. ಗೀತಾಭಾಷ್ಯ ೩.ವೇದಾರ್ಥ ಸಂಗ್ರಹ ೪.ವೇದಾಂತ ದೀಪ ೫. ಗದ್ಯತ್ರಯ ೬.ನಿತ್ಯಗ್ರಂಥ (ತಿರುವಾರಾಧನ ಕ್ರಮ) ಮುಂತಾಗಿ.

ಒಟ್ಟು ೯ ಗ್ರಂಥಗಳನ್ನು ರಚಿಸಿದ್ದಾರೆ. ಸಂಪ್ರದಾಯದಲ್ಲಿ ಇವು 'ನವರತ್ನ'ಗಳೆಂದು ಪ್ರಸಿದ್ಧವಾಗಿವೆ.

ಶ್ರೀಮನ್ನಾರಾಯಣನೇ ಪರಾತ್ಪರವಸ್ತು. ಅವನಿಗೆ ಸಮಸ್ತ ಶಕ್ತಿಯೂ, ಗುಣಗಳೂ ಉಂಟು. ಅವನು ಶೇಷಿ. ನಾವು ಶೇಷ. ಎಂದರೆ ಚೇತನರಾದ ನಾವು ಭಕ್ತಿಯಿಂದ ಶರಣಾಗತರಾದಲ್ಲಿ ಶ್ರೀಮನ್ನಾರಾಯಣನು ನಮ್ಮನ್ನು ಕಾಪಾಡುವನು. ಶೇಷಿ. ನಾವು ಅವನಿಂದ ಕಾಪಾಡಲ್ಪಡತಕ್ಕವರು. ಶೇಷ - ಶೇಷಿ ಸಂಬಂಧವನ್ನು ತಿಳಿಸುವುದು. ಭಗವಂತನಲ್ಲಿ ಮಾಡುವ ಭಕ್ತಿಯ ಉಪದೇಶವೇ ವಿಶಿಷ್ಟಾದ್ವೈತ ವೇದಾಂತಾಭಿಪ್ರಾಯವು. ಈ ಅಭಿಪ್ರಾಯವನ್ನು ಭಾರತಾದ್ಯಂತ ತಿಳಿಸಿ ಪ್ರಚಾರ ಮಾಡಲು ೭೪ ಸಿಂಹಾಸನಾಧಿಪತಿಗಳು ಎಂದು ಏರ್ಪಡಿಸಿದರು.

೧. ಶ್ರೀರಾಮಾನುಜರು ಲೋಕಕಲ್ಯಾಣಕ್ಕಾಗಿ ಶ್ರಮಪಟ್ಟಿದ್ದನ್ನು ಕಂಡು ಅವರ ಜ್ಞಾಪಕಾರ್ಥವಾಗಿ ಅವರ ವಿಗ್ರಹವನ್ನು - ಮೂರ್ತಿಯನ್ನು ಅವರು ಇರುವಾಗಲೇ ನಮಗಾಗಿ ಮೇಲುಕೋಟೆ ತಿರುನಾರಾಯಣಪುರದಲ್ಲಿ ಅವರೇ ತಮ್ಮ ವಿಗ್ರಹ ಮೂರ್ತಿಯನ್ನು ಮಾಡಿಸಿ ೧೧೧೦ ರಲ್ಲಿ ಪ್ರತಿಷ್ಠಿಸಿದರು.

೨. ಅವರ ಜನ್ಮಸ್ಥಳವಾದ ಶ್ರೀಪೆರಂಬುದೂರಿನಲ್ಲಿ ಪರಮಪದಿಸುವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂಚಿತವಾಗಿ ೧೧೩೭ರಲ್ಲಿ ಶಿಷ್ಯರಿಂದ ಸ್ಥಾಪಿಸಲಾಯಿತು.

೩. ಅವರ ಕಾಲಾನಂತರ ಎಂದರೆ ೧೧೩೮ ರಲ್ಲಿ ಸ್ಥಾಪಿಸಿದರು.

೪. ಶ್ರೀರಾಮಾನುಜರು ಪರಮಪದಿಸಿದ ೫೫ ವರ್ಷಗಳಾದ ಮೇಲೆ ಕಾಂಚೀಪುರದಲ್ಲಿ ೧೧೯೩ ರಲ್ಲಿ ಸ್ಥಾಪಿಸಿದರು.

ಅರ್ಥಾತ್ ಶ್ರೀರಾಮಾನುಜರ ಮೂರ್ತಿಯನ್ನು ದೇವಸ್ಥಾನದಲ್ಲಿ ಪ್ರತಿಷ್ಠಿಸಿರಲೇಬೇಕು. ಇಲ್ಲವಾದಲ್ಲಿ ಆ ದೇವಸ್ಥಾನದಲ್ಲಿ ತೀರ್ಥ ಪ್ರಸಾದಗಳನ್ನು ಸ್ವೀಕರಿಸಬಾರದೆಂಬ ನಿಯಮವುಂಟು. ಆದ್ದರಿಂದಲೇ ಶ್ರೀರಾಮಾನುಜರ ಈ ವಿಗ್ರಹವನ್ನು `ತಾನುಹನ್ದ ತಿರುಮೇನಿ'ಎನ್ನಲಾಗುತ್ತದೆ.

ಪೂಜಾಕ್ರಮ - ಈ ಕ್ಷೇತ್ರದ ದೇವರು ಶ್ರೀರಂಗನಾಥಸ್ವಾಮಿ, ಇವರ ಪೂಜಾವಿಧಾನವು ಪಾಂಚರಾತ್ರ ಆಗಮಶಾಸ್ತ್ರ ಈಶ್ವರ ಸಂಹಿತೆ, ಪಾದ್ಮ ಸಂಹಿತಾ ಪ್ರಕಾರ ನಡೆಯುವುದು.

ನಮ್ಮ ಹಿಂದೂ ದೇವಾಲಯಗಳಲ್ಲಿ ಮೂಲದೇವರು, ಪರಿವಾರ ದೇವರುಗಳಿಗೆ ಪ್ರತಿದಿನ ನಡೆಸುವ ಪೂಜೆಗೆ ನಿತ್ಯಪೂಜೆಯೆಂದು ಹೆಸರು. ಆಗಿಂದಾಗ್ಯೆ ಹಬ್ಬ ಹರಿದಿನ, ಜಯಂತಿ, ತಿರುನಕ್ಷತ್ರ, ಬ್ರಹ್ಮೋತ್ಸವ ಇತ್ಯಾದಿಗಳನ್ನು ನಡೆಸುವುದಕ್ಕೆ ನೈಮಿತ್ತಿಕಪೂಜೆಯೆಂದು ಹೆಸರು. ನಮ್ಮ ಮಕ್ಕಳ ಹುಟ್ಟಿದ ಹಬ್ಬ ಮುಂತಾಗಿ ನಾವು ಇಷ್ಟಪಟ್ಟ ವಿಶೇಷದಿನಗಳಲ್ಲಿ ನಡೆಸುವ ಪೂಜೆಗೆ ಕಾಮ್ಯವೆಂದು ಹೆಸರು.

ನಿತ್ಯಪೂಜೆ, ನಿತ್ಯ ನಿವೇದನ, ನಂದಾದೀಪ, ಇವುಗಳು ದೇವರ ಸಾನ್ನಿಧ್ಯವನ್ನು ತೋರಿಸುವುದು. ನಿತ್ಯಪೂಜೆ ಎನ್ನುವುದು ಆಗಮಶಾಸ್ತ್ರವನ್ನನುಸರಿಸಿ ನಡೆಸಲ್ಪಡುತ್ತದೆ. ವೇದ,ಇತಿಹಾಸ,ಪುರಾಣಗಳಲ್ಲಿ ತಿಳಿಸಿರುವ ಅವತಾರಗಳನ್ನು ಅರ್ಚಾರೂಪದಲ್ಲಿ ಪೂಜಿಸುವ ಕ್ರಮವನ್ನು ಪಾಂಚರಾತ್ರಶಾಸ್ತ್ರವು ತಿಳಿಸುತ್ತದೆ. ಆ ಶಾಸ್ತ್ರದಲ್ಲಿ ವಿಗ್ರಹ ಪ್ರತಿಷ್ಠೆ, ಸ್ವರೂಪ, ಲಕ್ಷಣ, ಪೂಜಾ, ಉತ್ಸವ, ಪ್ರಾಯಶ್ಚಿತ್ತಾದಿ ಕ್ರಮಗಳನ್ನು ತಿಳಿಸುವುದು.

ಪೂಜಾ ವಿಧಾನವು ಆರು ಪ್ರಕರಣಗಳಲ್ಲಿ ಪೂರ್ತಿಯಾಗುವುದು. ಮೊದಲು ಭಗವಂತನಿಗೆ ಸುಪ್ರಭಾತವನ್ನು ಹೇಳಿ ವಿಶ್ವರೂಪದರ್ಶನಕ್ಕೆ ಮಂತ್ರಾಸನವೆಂದು ಹೆಸರು. ೨ ನೆಯದಾಗಿ ಸ್ನಾನಾಸನ. ಇದರಲ್ಲಿ ದೇವರಿಗೆ ದಂತಧಾವನ ತೋರಿಸಿ ದೇವರ ಪ್ರತಿನಿಧಿಯಾಗಿ ಸಾಲಗ್ರಾಮಗಳಿಗೆ ವೇದಮಂತ್ರಗಳಿಂದ ಅಭಿಷೇಕ ನಡೆಸುವರು. ಅನಂತರ ೩ನೆಯದಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲಂಕಾರಾಸನ. ಇದರಲ್ಲಿ ದೇವರಿಗೆ ವಸ್ತ್ರ ಪುಷ್ಪ ಆಭರಣಗಳಿಂದ ಅಲಂಕಾರಗಳನ್ನು ಮಾಡಿ ದೇವರನ್ನು ವಿವಿಧವಾಗಿ ,ವೇದ,ಪ್ರಬಂಧ ಪುರಾಣ ಶ್ಲೋಕಗಳಿಂದ ಸ್ತೋತ್ರಮಾಡುವರು. ೪. ಭೋಜ್ಯಾಸನ - ಇದರಲ್ಲಿ ದೇವರಿಗೆ ಮತ್ತು ಪರಿವಾರ ದೇವತೆಗಳಾದ ಭಕ್ತ ವಿಗ್ರಹ - ಮೂರ್ತಿಗಳು, ಎಲ್ಲರಿಗೂ ಭೋಜನ ಪದಾರ್ಥಗಳನ್ನು ನಿವೇದಿಸುವರು. ೫. ಪುನಃ ಮಂತ್ರಾಸನ (ಪರ್ಯಂಕಾಸನ)ಈ ಕಾಲದಲ್ಲಿ ದೇವರು ಆರಾಮವಾಗಿರುವಂತೆ ಪ್ರಾರ್ಥಿಸಿ ಮಹಾಮಂಗಳಾರತಿ ನಡೆಸಿ ತೀರ್ಥಪ್ರಸಾದ, ಶ್ರೀಶಠಕೋಪವೆಂಬ ಆಶೀರ್ವಾದ ಮರ್ಯಾದೆ ನಡೆಸುವರು. ೬. ಶಯನಾಸನ - ರಾತ್ರಿ ದೇವರಿಗೆ ಶಯನಾಸನವನ್ನು ಸಮರ್ಪಿಸುವರು.

ಇಲ್ಲಿಗೆ ಪೂಜಾವಿಧಾನವು ಮುಗಿಯುವುದು.

ಆಭರಣಗಳು - ಆರಾಧನ ಪಾತ್ರೆಗಳು -

ಶ್ರೀರಂಗನಾಥಸ್ವಾಮಿಗೆ ಮತ್ತು ಶ್ರೀರಂಗನಾಯಕಿ ಅಮ್ಮನವರಿಗೂ ಅನೇಕರು ವಿವಿಧ ಆಭರಣಗಳನ್ನೂ ಆರಾಧನ ಪಾತ್ರೆಗಳನ್ನೂ ಸಮರ್ಪಿಸಿರುವರು. ಮೂರು ಬೆಳ್ಳಿ ಆರಾಧನ ಪಾತ್ರೆಗಳು ಗಿಂಡಿ ಸಹ ಕಳಲೆ ಕಾಂತಯ್ಯ ಮತ್ತು ಶ್ರೀಕೃಷ್ಣರಾಜ ಒಡೆಯರು. ಮಹಂತಜೀ, ಜಮೇಗಿರಜಿ. ಪಂಚಾರತಿ, ಸಹಸ್ರಧಾರಾ ತಟ್ಟೆ. ೧೬೭ ತೊಲ.

ಈ ತಟ್ಟೆಯ ಮೇಲೆ ಶಕ ೧೨೩೧ ಪ್ರಮಾದಿ ಸಂ. ಎಂದಿರುವುದು. ಅದು ಶಕ ೧೨೩೧ ಇಟ್ಟು ಕೊಂಡರೆ ಕೀಲಕ ಸಂ. ವಾಗುವುದು. (1308) ಪ್ರಮಾದಿ ಸಂ. ಎಂದಲ್ಲಿ ಶಕ ೧೨೦೨ ಅಥವಾ ೧೨೬೨ ಆಗುವುದು. (A.D.1339- or 1279) ೧೨೩೧ ಲೆಕ್ಕವಾದರೆ ೧೮೦೩ ಆಗುತ್ತೆ. ಪ್ರಮಾದೀಚ ಸರಿಪಡಿಸಿದಲ್ಲಿ ಶಕ ೧೨೩೬ (A.D. 1313) ಆಗುವುದು.

ರಂಗಮುಡಿ (ನವರತ್ನಖಚಿತ ಕಿರೀಟ) - ರಾಜ ಒಡೆಯರ ಧರ್ಮ

ವೈಕುಂಠ ಮುಡಿ (ನವರತ್ನ ಖಚಿತ ಕಿರೀಟ) - ಕಂಠೀರವ ನರಸರಾಜ ಒಡೆಯರ ಧರ್ಮ

ಶ್ರೀ ರಂಗನಾಯಕಿ ಅಮ್ಮನವರಿಗೆ

ಬೆಳ್ಳಿ ಗಿಂಡಿ - ರಾಮಾನುಜ ಪರಕಾಲ ಸ್ವಾಮಿಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳ್ಳಿ ಬಟ್ಟಲು - ಮುಮ್ಮಡಿ ಕೃಷ್ಣರಾಜ ಒಡೆಯರು.

ರಾಜ ಒಡೆಯರು ಶ್ರೀರಂಗನಾಥಸ್ವಾಮಿಗೆ ರಂಗಮುಡಿ ಎಂಬ ನವರತ್ನ ಖಚಿತ ಕಿರೀಟವನ್ನು ಮಾಡಿಸಿ ಸಮರ್ಪಿಸಿರುವರು.

ರಣಧೀರಕಂಠೀರವ ನರಸರಾಜ ಒಡೆಯರು ಶ್ರೀರಂಗನಾಥಸ್ವಾಮಿಗೆ ವೈಕುಂಠಮುಡಿ ಎಂಬ ನವರತ್ನ ಖಚಿತ ಕಿರೀಟವನ್ನು ಸಮರ್ಪಿಸಿರುವರು.

ಶ್ರೀರಂಗನಾಥರಿಗೆ ಮೊದಲುಸ್ವಾಮ್ಯದ ರಂಗಪತ್ತಿ ಶ್ರೀರಂಗರಾಜ ಎಂಬವರು ೪೪ ತೊಲ ಬೆಳ್ಳಿಬಟ್ಟಲು ಧರ್ಮ

ಶ್ರೀ.ಪ 11- ರಿಂದ -18 ರ ವರೆಗೆ.

ಧರ್ಮಗಳು - ಶಕ ೧೪೫೧ ಸರ್ವಜಿತು ಸಂ. ಮಾಘಶುದ್ಧ ೩ ರಲ್ಲಿ (24-1-1529) ವಿಜಯನಗರದ ಕೃಷ್ಣದೇವರಾಯರ ಕಾಲ. ಅವುಭಳ ದೇವರ ಮಕ್ಕಳು ಕೃಷ್ಣರಾಯ ನಾಯಕರು ತಮ್ಮ ನಾಯಕತನಕ್ಕೆ ಬಂದ ಕುರುವಂಕ ನಾಡಿನ ಐವತ್ತು ವರಹ ಉತ್ಪತ್ತಿಯಾಗುವ ಬೀರಿ ಸೆಟ್ಟಿಹಳ್ಳಿ ಗ್ರಾಮವನ್ನು ಶ್ರೀರಂಗನಾಥ ದೇವರಿಗೆ ಪ್ರತಿನಿತ್ಯದ ಅಲಂಕಾರ, ೨೫ ಅತಿರಸ ನೈವೇದ್ಯಕ್ಕಾಗಿ ಪ್ರಸಾದ ಹರಿವಾಣ ಒಂದುಕಾಲು ತಳಿಗೆ, ಚಿಂಗಣಿ ಗಿಲದಂಡೆ ಒಂದುಕಾಲು ನಡೆಸಲು ಸರ್ವಮಾನ್ಯವಾಗಿ ಭೂಮಿಧರ್ಮ ಶ್ರೀ. ಪ ೨.

ಶಕ ೧೪೫೨ ಶಾರ್ವರಿ ಸಂ. ಆಷಾಢ ಶುದ್ಧ ೧೨ ಸೋಮವಾರ ಕರ್ಕಾಟಕ ಸಂಕ್ರಾಂತಿ ಪುಣ್ಯಕಾಲದಲ್ಲಿ ವಿಜಯನಗರದ ಕೃಷ್ಣರಾಯರು ಪೃಥ್ವೀರಾಜ್ಯಂಗೈಯುತ್ತಿರಲು ಶ್ರೀಮಹಾಮಂಡಲೇಶ್ವರ ಅರಿವೆಂಟಕಳೂರ ಕೆರೆಯ ಗಜಪತಿ ಉರುಳ್‌ಗೋತ್ರ ಸುರತ್ರಾಣ ಧರಣೀವರಾಹ, ಮಲೆಯ ಶಾರ್ದೂಲ ಚಮಟಿ ಎಂಬಿವೇ ಮೊದಲಾದ ಬಿರುದಾವಳೀ ಭೂಷಿತರಾದ ಸೋಮವಂಶ ಅತ್ರೇಯ ಗೋತ್ರ ಚೇಮಟಿ ತಿಮ್ಮರಾಜ ಅವರ ಪತ್ನಿ ನಾಗಲಾಂಬಾ ಅವರ ಮಕ್ಕಳು ಸಕಲ ವಿದ್ಯಾ ವಿಶಾರದರಾದ ಪ್ರಜಾಪಾಲನಾದಿ ಧರ್ಮ ಪರಾಯಣರಾದ ಭೋಗಯ್ಯದೇವ ಮಾಹಾಅರಸರು ತಮ್ಮ ನಾಯಕತನಕ್ಕೆ ಸಲ್ಲುವ ಶ್ರೀರಂಗಪಟ್ಟಣದ ಸೀಮೆಯೊಳಗಣ ಗುಮ್ಮನವೃತ್ತಿ ಸ್ಥಳದ ದೇವಪುರಿಯೆಂಬ (ದೇವನೂರು) ಗ್ರಾಮವನ್ನು ಕೃಷ್ಣರಾಯರ ಅನುಮತಿಯನ್ನು ಹೊಂದಿ ತಾಯಿ ನಾಗಲಾಂಬಾ ಅಮ್ಮನವರ ಹೆಸರಿನಲ್ಲಿ ನಾಗಲಾಪುರವೆಂಬ ಪ್ರತಿನಾಮವನ್ನು ಮಾಡಿ ಈ ಗ್ರಾಮವನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರ್ವಲೋಕ ಜನನಿಯಾದ ಶ್ರೀರಂಗನಾಯಕಿ ದೇವಿಯರ ದಿವ್ಯ ಲೀಲಾ ವಿಲಾಸಕ್ಕೆ ಪ್ರತಿವರ್ಷವೂ ನಿತ್ಯ ನಿವೇದನ, ಕಜ್ಜಾಯ, ನಂದಾದೀಪ ಇವುಗಳನ್ನು ನಡೆಸಲು ಮೇಲೆ ತಿಳಿಸಿದ ನಾಗಲಾಪುರ ಗ್ರಾಮವನ್ನು ಸಹಿರಣ್ಯೋದಕವಾಗಿ ಧರ್ಮ.

ಈ ಗ್ರಾಮದಲ್ಲಿ ಹುಟ್ಟುವ ೯೦ ವರಹಕ್ಕೆ ಸೇವೆ ನಡೆಸುವ ಧರ್ಮದ ವಿವರ-

ವಿವರ	ವರಹ	ಹಣ
ರಥೋತ್ಸವಕ್ಕೆ	೪೦	
ಪ್ರತಿ ಶುಕ್ರವಾರ ಪಚ್ಚಕರ್ಪೂರ ಕಸ್ತೂರಿ ಸಹಿತವಾದ ಪುಣುಗು ಕಾಪಿಗೆ ಶುಕ್ರವಾರ ಒಂದಕ್ಕೆ ನಾಲ್ಕು ಹಣದ ಪ್ರಕಾರ ವರ್ಷ ಒಂದಕ್ಕೆ	೨೦	೪
ಪ್ರತಿದಿನವೂ ನಡೆಯುವ ನಿತ್ಯ ನೈವೇದ್ಯಕ್ಕೆ ಶ್ರೀರಂಗನಾಥದೇವರ ತಳಿಗೆ ೧ ಶ್ರೀ ಲಕ್ಷ್ಮೀ ಅಮ್ಮನವರ ನಿತ್ಯ ನೈವೇದ್ಯಕ್ಕೆ ತಳಿಗೆ ೧ ಉಭಯ ಹರಿವಾಣ ೨ಕ್ಕೆ ಅಕ್ಕಿ ಇಕ್ಕಳ ಪರವು (ಬೇಳೆ) ಪದಾರ್ಥ,ತುಪ್ಪ ಇತ್ಯಾದಿ ಈ ಪ್ರಕಾರದಲ್ಲಿ ಮೊತ್ತ ಎರಡು ಬಳ್ಳ ಅಕ್ಕಿಯ ತಳಿಗೆ ಪ್ರಸಾದ	೩೦	೬
ಕಜ್ಜಾಯ ಇತ್ಯಾದಿ ಅಮ್ಮನವರ ಸನ್ನಿಧಿಯಲ್ಲಿ ದೀಪ ಎರಡಕ್ಕೆ	೩೨	೬
ಮೊತ್ತ ತೊಂಭತ್ತು ವರಹಗಳು	೯೦	

ಈ ಧರ್ಮವನ್ನು ಗರ್ಗಗೋತ್ರದ ಅಪಸ್ತಂಭಸೂತ್ರ ಶ್ರೀಸುದರ್ಶನಾಚಾರ್ಯರ ಪುತ್ರರಾದ ಕ್ಷಿರಂಗಡಿ ರಾಜಯ್ಯನವರ ಮಕ್ಕಳು. ವರದರಾಜಯ್ಯನವರು ವಂಶಪಾರಂಪರ್ಯವಾಗಿ ನಡೆಸಿಕೊಂಡು ಬರುವುದು.

ಶ್ರೀ.ಪ. ೮

ಚತುಸ್ಸೀಮೆಯ ವಿವರ -

ತುಡಿಕೆ, ಅಣೆ,ಆಚು.ಕಡಂಗುಯಲು ಕಾಡಾರಂಭ, ನೀರಾರಂಭ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರಿಕೊರಾಳ, ಮಗ್ಗಮನೆ, ವೊಣ ಸುಂಕ, ಸುವರ್ಣಾದಾಯೆ, ಮೊದಲಾದ ಸಕಲ ಸ್ವಾಮ್ಯಗಳೊಂದಿಗೆ ನಾಗಲಾಪುರ ಪ್ರತಿನಾಮ ದೇವಲಾಪುರವನ್ನು ಶ್ರೀರಂಗನಾಥಸ್ವಾಮಿಯವರ ಪಟ್ಟಮಹಿಷಿ ಶ್ರೀರಂಗನಾಯಕಮ್ಮನವರಿಗೆ ಸಮರ್ಪಿಸಿದ ಧರ್ಮ. ಶ್ರೀ.ಪ.೮

ಶಕ ೧೪೯೪ಳ ಪ್ರಜೋತ್ಪತ್ತಿ ಸಂ. ಕಾರ್ತಿಕ ಶುದ್ಧ ೧ ರಲ್ಲಿ (1571A.D.) ವಿಜಯನಗರದ ವೀರಪ್ರತಾಪ ತಿರುಮಲದೇವರಾಯರ ಕುಮಾರರು ರಾಮರಾಜಯ್ಯ ಅವರು ಶ್ರೀರಂಗನಾಥಸ್ವಾಮಿಯವರ ನಿತ್ಯ ನಿವೇದನಕ್ಕೆ ಪ್ರತಿದಿನ ೧ ಹರಿವಾಣ ಪ್ರಸಾದ ನಡೆಸಲು ಬಣ್ಣಘಟ್ಟ ಗ್ರಾಮವನ್ನು ಸಮರ್ಪಿಸಿದ ಧರ್ಮ. ಶ್ರೀ.ಪ. ೬

ಶಕ ೧೫೦೭ ಪಾರ್ಥಿವ ಸಂ. ಚೈತ್ರ ಶುದ್ಧ ೧ ಪ್ರಥಮಾ (22-3-1585) ಮಹಾಮಂಡಲೇಶ್ವರ ರಾಮರಾಜ ತಿರುಮಲ ರಾಜಯ್ಯದೇವ ಅವರು ತಮ್ಮ ತಂದೆ ರಾಮರಾಜಯ್ಯ ಅವರಿಗೆ ಪುಣ್ಯವಾಗಬೇಕೆಂದು

ಶ್ರೀರಂಗನಾಥಸ್ವಾಮಿಗೆ ಅಲಂಕಾರ ಪ್ರಸಾದ ಸಣ್ಣಕ್ಕಿ ತಳಿಗೆ	೫
ಪಾಯಸದ ತಳಿಗೆ	೨
ಅದ್ರುಸ (ಅತಿರಸ)	೫೦

ಭಟವಾಲು (ಕಾಯಿಸಿದ ಹಾಲು) ೫ ಈ ರೀತಿ ನಡೆಸಲು ೧ ಪಟಸೋಮನಹಳ್ಳಿ ಗ್ರಾಮ ೧, ೨ ಸುಕತೊಂಡನೂರು ಗ್ರಾಮ ೧, ೩ ಮೇನಾಗರದ ಗ್ರಾಮ ೧, ೪ ನರಿಹಳ್ಳಿಯ ಗ್ರಾಮ ೧, ಅಂತು ಗ್ರಾಮ ೪ ಕ್ಕೆ ಸೇರಿದ ಗದ್ದೆ ಬೆದ್ದಲು ತೋಟ ತುಡಿಕೆ ಮುಂತಾಗಿ ಸರ್ವಸ್ವಾಮ್ಯಗಳೊಂದಿಗೆ ಸಮರ್ಪಿಸಿದ ಧರ್ಮ.

ಪಾಂ ಪು. ೨೨೩ ನರಿಹಳ್ಳಿ, ೨೩೦ ಮೇನಾಗರ

ಶಕ ೧೫೮೬ ಶೋಭಕ್ರತು ಸಂ. ಪಾಲ್ಗುಣ ಬಹುಳ ೧೦ (A. D. 12-3-1664) ರಲ್ಲಿದೇವರಾಜರು ರಾಜ್ಯವಾಳುತ್ತಿರುವಾಗ ದೇವರಾಜ ಒಡೆಯರ ಮಕ್ಕಳು ಮರಿದೇವರಾಜ ಒಡೆಯರು ಶ್ರೀರಂಗನಾಥಸ್ವಾಮಿಗೆ ಪಾದಾದಿ ಕೇಶಪರ್ಯಂತ ನಿತ್ಯ ಅಲಂಕಾರಕ್ಕಾಗಿ ತಿರುಮಾಲೆ ಮತ್ತು ಶ್ರೀರಂಗನಾಯಕಿ ಅಮ್ಮನವರಿಗೆ ಅಲಂಕಾರ ತಿರುಮಾಲೆ, ಕಲ್ಯಾಣ ಅಮ್ಮನವರಿಗೆ (ಉತ್ಸವಮೂರ್ತಿ) ಅಲಂಕಾರ ಮಾಲೆ ಉಭಯನಾಚ್ಚಿ ಮಾರರಿಗೆ ತಿರುಮಾಲೆ ಇತ್ಯಾದಿ ಸೇವಾರ್ಥ ನಡೆಸಲು ಶ್ರೀರಂಗಪಟ್ಟಣದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿರುಮಲೆ ಅನಂದಾಳ್ವಾರ್‌ರ ಮಕ್ಕಳು ಚಿನ್ನಪ್ಪಾಜಿ ಶಿಂಗರಯ್ಯಂಗಾರ್‍ರ ಮಕ್ಕಳು ಶ್ರೀನಿವಾಸಯ್ಯಂಗಾರ್ಯರಿಂದ ಕ್ರಯಕ್ಕೆ ತೆಗೆದು ವೀರಾಂಬುದೀ ಸ್ಥಳದ ಆಲಪ್ಪನಹಳ್ಳಿ ಗ್ರಾಮವನ್ನು ದ್ರಾವಿಡವೇದ ಪ್ರಬಂಧ ವಿದ್ವಾಂಸರಾದ ಶ್ರೀರಂಗ ಮೊದಲಿಯಾಂಡನ್ ಸಂಬಂಧಿಗಳಾದ ಶ್ರೀವೈಷ್ಣವರುಗಳು ತಿರುಮಲೆ ಕೈಂಕರ್ಯ ನಡೆಸಲು ಕುರುವದ ಅಪ್ಪಚ್ಚಿಯಾರ್‍ರ ಅಯ್ಯನವರ ಕುಮಾರರು ಸಿಂಗರಯ್ಯ ೨.ಅಳಹಿಯ ಶಿಂಗರು ೩.ಬೆಳ್ಳಾಳೆಯ ನರಸಯ್ಯನವರ ಕುಮಾರರು ನರಸಪ್ಪ ೪.ವಸಂತಪುರದ ಸಿಂಗರಯ್ಯನವರ ಕುಮಾರರು ಪುಟ್ಟಯ್ಯ ೫.ಕುರುವದ ಸಿಂಗಯ್ಯನವರ ಕುಮಾರರು ನರಸಿಂಗಯ್ಯ ೬.ಸಿಂಗಯ್ಯನವರ ಕುಮಾರರು ನರಸಪ್ಪ ಈ ಆರು ಕುಟುಂಬದವರು ಈ ತಿರುಮಲೆ ಪುಷ್ಪ ಕೈಂಕರ್ಯವನ್ನು ನಡೆಸಬೇಕೆಂದು ಶ್ರೀರಂಗನಾಥಸ್ವಾಮಿಯವರ ಹೆಸರಿನಲ್ಲಿ ಇವರಿಗೆ ಆಲಪ್ಪನ ಹಳ್ಳಿ ಗ್ರಾಮ ಧರ್ಮ. ಶ್ರೀ.ಪ. ೨೩.

ಈ ಗ್ರಾಮದ ಚತುಸ್ಸೀಮೆಯ ವಿವರ -

ಬಂಣಂಗಾಡಿ ಎಲ್ಲೆಯಿಂದ ಮೂಡಲು ಚೆಬಿಯೆಲ್ಲೆಯಿಂದ ತೆಂಕಲು, ಜೆಗಟೆಯ ಮಲ್ಪೆಯನಹಳ್ಳಿ ಯೆಲ್ಲೆಯಿಂದ ಪಡುವಲ ಬಸ್ತಿಹಳ್ಳಿ ಯೆಲ್ಲೆಯಿಂದ ಬಡಗಲು ಈ ಮಧ್ಯೆ ಇರುವ ಗ್ರಾಮ, ಭೂಮಿ. ನಿಧಿನಿಕ್ಷೇಪ ಸಹಿತ ಅಷ್ಟಭೋಗತೇಜ ಸ್ವಾಮ್ಯಗಳೊಂದಿಗೆ ಧರ್ಮ.

ಕಂಠೀರವ ನರಸರಾಜ ಒಡೆಯರು (1704-1714) ಗೌತಮ ಕ್ಷೇತ್ರದ ಚಂದ್ರವನ ಸಮೀಪದಲ್ಲಿ ಕಾವೇರಿಗೆ ಅಡ್ಡಕಟ್ಟಿಸಿ ಕಾಲುವೆಯನ್ನು ತಂದು (ಬಂಗಾರ ದೊಡ್ಡಿನಾಲೆ, ಅಥವಾ ಕಾಲುವೆ) ಅದರೊಳಗೆ ಆಗುವ ಧಾನ್ಯ ಕಬ್ಬು ಮುಂತಾದುವುಗಳನ್ನು ಶ್ರೀರಂಗನಾಥಸ್ವಾಮಿಗೆ ಕೊಡುವಂತೆ ಧರ್ಮ.

ವರ್ಣರಂಜಿತ ಚಿತ್ರಗಳು -

ಶ್ರೀರಂಗನಾಥಸ್ವಾಮಿ ದೇವಸ್ಥಾನದಲ್ಲಿ ಮಣವಾಳಮಹಾಮುನಿ ಸನ್ನಿಧಿಯಲ್ಲಿ ಅತ್ಯಾಶ್ಚರ್ಯಕರವಾದ ವರ್ಣರಂಜಿತ ಚಿತ್ರಕಲೆಯು ಕಾಣಬರುವುದು. ಮಣವಾಳ ಮಹಾಮುನಿಗಳು ವೇದಾಂತಪ್ರಚಾರಕ್ಕಾಗಿ ತಾವು ಏರ್ಪಡಿಸಿದ ಅಷ್ಟದಿಗ್ಗಜಗಳೆಂದು ಕರೆಯುವ ತಮ್ಮ ೮ ಜನ ಶಿಷ್ಯರೊಂದಿಗೆ ವಿರಾಜಮಾನರಾಗಿರುವರು. ಈ ಎಂಟು ಮಂದಿಯೂ, ಶ್ರೀರಾಮಾನುಜ ಸಿದ್ಧಾಂತ ಪ್ರಚಾರಕ್ಕಾಗಿ ಏರ್ಪಟ್ಟವರು. ಇವರಲ್ಲಿ ಕೆಲವರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸನ್ಯಾಸಿಗಳಾಗಿಯೂ, ಕೆಲವರು ಗೃಹಸ್ಥರಾಗಿಯೂ ಇರುವರು.

ಅರಮನೆ - ಶುಕ್ರವಾರಸೆಜ್ಜೆ-

ಮಹಾರಾಜರ ಅರಮನೆಯು ಶ್ರೀರಂಗನಾಥಸ್ವಾಮಿ ದೇವಸ್ಥಾನದ ಮುಂಭಾಗ ಮತ್ತು ಶ್ರೀಲಕ್ಷ್ಮೀನೃಸಿಂಹಸ್ವಾಮಿ ದೇವಸ್ಥಾನದ ಹಿಂಭಾಗದಲ್ಲಿದ್ದಿತು. ಅರಮನೆ ಇದ್ದ ಸ್ಥಳದಲ್ಲಿ ಅದರ ಜ್ಞಾಪಕಾರ್ಥವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರು ಜನನವಾದ ಸ್ಥಳದಲ್ಲಿ ಸ್ಮಾರಕವಾಗಿ ಮಂಡಪ ಒಂದನ್ನು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು ನಿರ್ಮಿಸಿರುವರು. ಈ ಮಂಡಪದ ಸುತ್ತಮುತ್ತಲಿನ ವಿಶಾಲವಾದ ಪ್ರದೇಶದಲ್ಲಿದ್ದ ಅರಮನೆಯಲ್ಲಿ ರಾಜಮನೆತನದವರು ವಾಸಿಸುತ್ತಿದ್ದರು.

ಈ ಮಂಡಪದ ಹಿಂದೆ ಇರುವ ಕರೀಕಲ್ಲು ತೊಟ್ಟಿಯನ್ನು ಈಗಲೂ ಕಾಣಬಹುದು. ಶಿಲ್ಪಕೆತ್ತನೆಯಿಂದ ಕಲ್ಪಿಸಿದ ಈ ಕಲ್ಲನ್ನು ಪಂಚಾಂಗದ ಬಿತ್ತಿಕಲ್ಲು ಎಂದು ಕರೆಯುವರು.

ಪಂಚಾಂಗ ಭಿತ್ತಿಕಲ್ಲು ಎಂದರೆ ಉಪಾನ, ಜಗತಿ ಪದ್ಮ, ಕಂಠ, ಪಟ್ಟಿಕ, ಮಹಾಪಟ್ಟಿಕ ಎಂಬ ಅಲಂಕಾರ ವಿನ್ಯಾಸಗಳಿಂದ ಕೂಡಿರುವುದು ಎಂದರ್ಥವು. ಈ ಅಲಂಕಾರವನ್ನು ದೇವಸ್ಥಾನದ ಗರ್ಭಗೃಹದ ಅಧಿಷ್ಠಾನದಲ್ಲಿ ಕಾಣಬಹುದು. ಈ ಸ್ಥಳದಲ್ಲಿಯೇ ರಾಜ ಒಡೆಯರು ೭ ಅಂತಸ್ತಿನ ಕಟ್ಟಡ ಅರಮನೆಯನ್ನು ಕಟ್ಟಿಸಿದರು. ಮನೆದೇವತೆ ಚಾಮುಂಡೇಶ್ವರಿಗೆ ಶುಕ್ರವಾರವು ಪ್ರೀತಿಯಾದ್ದರಿಂದ ಆಕೆಯ ಹೆಸರಿನಲ್ಲಿಯೇ ರಾಜ ಒಡೆಯರು ಚಿಕ್ಕದೇವರಾಜ ಒಡೆಯರು ಮುಂತಾದ ರಾಜ ಪರಂಪರೆಯು ಸಿಂಹಾಸನದ ಮೇಲೆ ಕುಳಿತು ರಾಜ್ಯ ಪಟ್ಟಾಭಿಷೇಕವಾಗಿ ರಾಜ್ಯವಾಳಿದರು.

ಖಾಸಾ ಚಾಮರಾಜ ಒಡೆಯರಿಗೆ (1796 ವರೆಗೆ) ರಾಜವಂಶೀಕರ ಅರಮನೆಯಾಗಿದ್ದಿತು. ಅನಂತರ ಅರಮನೆಯು. ೧೭೯೯ರ ಪೂರ್ಣಭಾವಿಯಾಗಿ ನಾಶವಾಯಿತು.

ವಿಜಯನಗರದ ರಾಯಭಾರಿಗಳ ಅರಮನೆ -

ಶ್ರೀರಂಗನಾಥಸ್ವಾಮಿ ದೇವಸ್ಥಾನದ ಉತ್ತರ ಭಾಗದ ಮೈದಾನವು ವಿಜಯನಗರದ ರಾಯಭಾರಿಗಳ ವಾಸದ ಅರಮನೆಯು ಇಲ್ಲಿದ್ದಿತು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಜಯನಗರದ ಕಾಲಾನಂತರ ಮೈಸೂರು ರಾಜರ ಆಳ್ವಿಕೆಯಲ್ಲಿ ಮೈಸೂರು ರಾಜ ಭವನಕ್ಕೆ ಸೇರಿದ ಪರಿವಾರದವರಿಗೆ ಆವಾಸಸ್ಥಾನವಾಯಿತು. ಇಲ್ಲಿ ಅನೇಕ ದೇವಸ್ಥಾನಗಳಿದ್ದವು. ಈಗ ಶ್ರೀರಂಗನಾಥ ದೇವಸ್ಥಾನ, ಶ್ರೀಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ ಮತ್ತು ಶ್ರೀ ಗಂಗಾಧರೇಶ್ವರ ಗುಡಿ ಮಾತ್ರ ನಿಂತಿರುವುದು.

ಇತರ ಧರ್ಮಗಳು -

ಶಕ ೧೧೩೨ ಪ್ರಮೋದ ಸಂ. ಧನರ್ಮಾನ ಶುಕ್ಲಪಕ್ಷ ತೃತೀಯಾ ಸೋಮವಾರ. ಶ್ರವಣ ನಕ್ಷತ್ರ (20-12-1210) ಶ್ರೀ ವಿಷ್ಣುವರ್ಧನ ಹೊಯ್ಸಳ ವೀರಬಲ್ಲಾಳದೇವರು ರಾಜ್ಯವಾಳುತ್ತಿರುವಾಗ ಶ್ರೀ ತೊಣ್ಣೈಕೂಡು ಶ್ರೀ. ವು. .. ಮಂಗಲದ ಕು... ಕಾಶ್ಯಪ ಗೋತ್ರ ನಾರಾಯಣ ಅವರ ಮಗ ತಿರುವರಂಗ ಮುಡ್ಯೆಯಾನ್- ಧರ್ಮಪತ್ನಿ ಕಲ್ಪಗಂಕೊಂಡಾಳ್ ಇವರ ಸತ್ಪುತ್ರನಾದ ವರಂತರುಂಪೆರುಮಾಳ್ (ವರದರಾಜ) ಅವರು... ಮಾಗೈ ಸೇರಿದ ತಿರುವತ್ತಿಯೂರಾರಿಯಕ್ಕ ಶ್ರೀ ವೈಷ್ಣವಪ್ರಿಯ ಅವರು ತಿರುವರಂಗ ನಾರಾಯಣ ಚತುರ್ವೇದಿ ಮಂಗಲದ ಭಟ್ಟರು ೮೮ ಜನಗಳಿಗೆ ಬ್ರಹ್ಮಪುರವಾದ ಚತುರ್ಮುಖ ನಾರಾಯಣ ಚತುರ್ವೇದಿ ಮಂಗಲ ಗ್ರಾಮಭೂಮಿಗಳಲ್ಲಿ ಕ್ರಯಕ್ಕೆ ತೆಗೆದು ಅದಕ್ಕೆ ಅಳಗಿಯ ಪೆರುಮಾಳ್‌ಪುರ ಎಂಬ ಹೆಸರನ್ನಿಟ್ಟು ಆ ಗ್ರಾಮಭೂಮಿಯನ್ನು ೬೫ ವೃತಿ. ಅರವತ್ತೈದು ವೃತಿಗಳನ್ನಾಗಿ ಮಾಡಿ ೩೩ ವೃತ್ತಿಗಳನ್ನು ಮೇಲೆ ತಿಳಿಸಿದ ೮೮ ಜನ ಭಟ್ಟರಿಗೆ ಧರ್ಮ ಮಾಡಿದರು.

ಶ್ರೀ.ಪ. ೧ (XIV 161)

ಇತರ ಧರ್ಮಗಳು -

ಅಚ್ಚುತ ಮಹಾರಾಜರ ಕಾಲದಲ್ಲಿ ಶಕ ೧೪೮೭ ರಕ್ತಾಕ್ಷಿ ಸಂ. ಆಷಾಢ ಶುದ್ಧ ೧೨ (21-6-1564) ರಲ್ಲಿ ಅಧಿಕಾರಿ ಶ್ರೀ ರಾಮಾಭಟ್ಟಯ್ಯನವರು ಕಾಶ್ಯಪ ಗೋತ್ರದ ಅಪ್ಪಾಜಿ ಮಕ್ಕಳು ಪದ್ದಿ ರಾಜಗಳಿಗೆ ಅವರ ನಾಯಕತನಕ್ಕೆ ಶ್ರೀರಂಗಪಟ್ಟಣದ ಶೀಮೆಯೊಳಗಣ ಅಗ್ರಹಾರಗಳು, ಮಾನ್ಯ ಗ್ರಾಮಗಳು, ಕರಗ್ರಾಮಗಳು, ಸತ್ರ ದೇವಸ್ಥಾನ ಇವುಗಳನ್ನು ಅಮರ ಮಾಗಣೆಯಾಗಿ ದಯಪಾಲಿಸಿದ್ದರು. ಇವುಗಳಿಗೆ ಯಾವ ವಿಧವಾದ ಸುಂಕ ಬೇಡಿಕೆಗಳಾವುದೂ ಇರಲಿಲ್ಲವು. ಹೀಗಿರುವಾಗ ಪಾರುಪತ್ಯ ಮಾಡುತ್ತಿದ್ದ ರಾಮಪ್ಪನಾಯಕನು ಮೇಲಿನ ಗ್ರಾಮ ಭೂಮಿಗಳಿಗೆ ಕೊಡಬೇಕಾದ ಸುಂಕವನ್ನು (ಇದುವರೆಗೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS
LIBRARY
Jangamwadi Math, Varanasi
ACC No. ೨೪೦೫

ಯಾವ ಸುಂಕವೂ ಇರಲಿಲ್ಲವು) ಕೇಳಿ ಗದ್ಯಾಣ ೩೦೦ ವಸೂಲು ಮಾಡಿದವರಾದರು. ಈ ವಿಷಯವನ್ನು ತಿಳಿದ ಅಪ್ಪಾಜಿ ಮಕ್ಕಳು ಪೆದ್ದಿರಾಜರು ಸತ್ರ ಮತ್ತು ದೇವಸ್ಥಾನಗಳು ಯಾವ ವಿಷಯದಲ್ಲೂ ಯಾವ ಸುಂಕವನ್ನೂ ಕೊಡಬೇಕಾಗಿಲ್ಲವೆಂದು ಸಾರಿದ ಶಿಲಾಶಾಸನವು. ಶ್ರೀ.ಪ. ೫

ದೇವರಾಜಪುರ ಅಗ್ರಹಾರ -

ಶಕ ೧೫೮೬ ಶೋಭನಕ್ರತು ಸಂ. ಆಷಾಢ ಶುದ್ಧ ೧೨ ಸೋಮವಾರ (6-6-1663) ರಲ್ಲಿ ದೇವರಾಜ ಒಡೆಯರ ಕುಮಾರರು ದೇವರಾಜ ಮಹೀಪಾಲಕರು. ಮಾಳಗೂರಿಗೆ ಪ್ರತಿನಾಮ ದೇವರಾಜಪುರ ಅಗ್ರಹಾರ ಎಂದು ಹೆಸರಿಟ್ಟು, ತಮಗೆ ಪಿತ್ರಾರ್ಜಿತವಾಗಿ ಬಂದ ಹೊಯ್ಸಳ ನಾಡು ನಾಗಮಂಗಲಕ್ಕೆ ಒಳಪಟ್ಟ ಪಡುವನಾಡ ಬಾಚಹಳ್ಳಿ ಸ್ಥಳಕ್ಕೆ ಸೇರಿದ ೧ ಮಾಳಗುಂದಗ್ರಾಮ ೨.ಕೊಡಗೆಹಳ್ಳಿಯ ಗ್ರಾಮ ೩.ಹುಬ್ಬನ ಹಳ್ಳಿಯ ಗ್ರಾಮ ೪. ಮಾಚಿ ನಾಯಕನಹಳ್ಳಿ ಗ್ರಾಮ ೫.ಗುಬ್ಬಿಹಳ್ಳಿಯ ಗ್ರಾಮ ೬. ಲೋಕನಹಳ್ಳಿಯ ಕೆರೆ ಮತ್ತು ನಾಗಮಂಗಲದ ಹೋಬಳಿಗೆ ಸೇರಿದ ಕೊಪ್ಪದ ಸ್ಥಳದಲ್ಲಿ ೧. ಗೂಳೂರು ಗ್ರಾಮ ೨.ನಂಬಿನಾಯಕನಹಳ್ಳಿಯ ಗ್ರಾಮ ೩.ಬಳ್ಳಿಕೆರೆಯ ಗ್ರಾಮ ೪. ೫. ೬. ೭. ಅಂತು ಉಪಗ್ರಾಮ ಏಳು ಕೆರೆಬಂದು. ಇದರ ಜೊತೆಗೆ ಮಾಳಗೂರು ಸಹ (ದೇವರಾಜಪುರ) ಸೇರಿಸಿ ಎಂಟು, ಕೆರೆ ಒಂದು ಇವುಗಳನ್ನು ೫೦ ವೃತ್ತಿಗಳಾಗಿ ಏರ್ಪಾಡು ಮಾಡಿ ದೇವರಾಜ ಮಹೀಪಾಲರು ತಮ್ಮ ಪಿತ್ರಾದಿ ಸಮಸ್ತ ಪಿತೃಗಳಿಗೂ ಅಕ್ಷಯ ಪುಣ್ಯಲೋಕ ಪ್ರಾಪ್ತಿಯಾಗಲಿಯೆಂದು ಕೃಷ್ಣರ್ಪಣ ಬುದ್ಧಿಯಿಂದ ಶ್ರೀ ಲಕ್ಷ್ಮೀನಾರಾಯಣ ಪ್ರೀತಿಯಾಗಿ ಲಕ್ಷ ಹೋಮ ಮಾಡಿ ಮೇಲಿನ ಗ್ರಾಮ ಭೂಮಿಗಳನ್ನು ನಾನಾ ಗೋತ್ರ, ನಾನಾ ಸೂತ್ರದ, ನಾನಾ ಶಾಖೆ, ನಾನಾ ವಿದ್ಯಾಪಾರಂಗತರಾದ ಬ್ರಾಹ್ಮಣೋತ್ತಮರಿಗೆ ಸರ್ವಮಾನ್ಯವಾಗಿ ಧಾರೆ ಎರೆದುಕೊಟ್ಟ ಅವರು ವಂಶಪಾರಂಪರ್ಯವಾಗಿ ಸುಖದಿಂದ ಅನುಭವಿಸಿಕೊಂಡು ಬರುವುದೆಂದು ಮಾಡಿದ ಧರ್ಮ. ಕೃ.ಪೇ. ೬೫

ಅಚ್ಯುತೇಂದ್ರ ಮಹಾರಾಯ ಸಮುದ್ರ -

ಶಕ ೧೪೫೬ ವಿಕ್ರಮ ಸಂ. ಪುಷ್ಯ ಶುಕ್ಲ ದ್ವಾದಶೀ ಭಾನುವಾರ ಶ್ರೀಕೃಷ್ಣರಾಯ ಮಹಾರಾಯರು ತಮ್ಮ ಆಸ್ಥಾನದಲ್ಲಿದ್ದ ವಿದ್ವಾಂಸರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಲಂಕಾರಯಜ್ವ ಎಂಬುವರಿಗೆ ಶ್ರೀರಂಗಪಟ್ಟಣದ ಕಾವೇರಿ ತೀರದಲ್ಲಿ ಮಾರಗೌಡನಹಳ್ಳಿ ಪ್ರತಿನಾಮ ಅಚ್ಚುತೇಂದ್ರ ಮಹಾರಾಯ ಸಮುದ್ರ ಎಂಬ ಗ್ರಾಮವನ್ನು ದಾನಮಾಡಿದರು.

೫೫ - ೧೧೩ ತಾಮ್ರಶಾಸನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಲಕ್ಷ್ಮೀನೃಸಿಂಹಸ್ವಾಮಿ ದೇವಸ್ಥಾನ

ಅರಮನೆಯ ಬಲಭಾಗದಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರು ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನವನ್ನು ಕಟ್ಟಲು ಆಲೋಚಿಸಿ ಶ್ರೀರಂಗನಾಥಸ್ವಾಮಿ ಗುಡಿಯಂತೆ, ಗುಡಿ ಗೋಪುರ, ಪ್ರಾಕಾರ, ಮಂಡಪಗಳು, ವಸಂತಕೊಳ ಮುಂತಾದುವುಗಳನ್ನು ಕಟ್ಟಿಸಿದರು. ತಾವು ನರಸಿಂಹ ಜಯಂತಿ ದಿನ ಜನಿಸಿದವರಾದ್ದರಿಂದ ಅಮ್ಮನವರು ಸಹಿತವಾಗಿ ನರಸಿಂಹಸ್ವಾಮಿಯನ್ನು ಉಭಯನಾಚ್ಚಿಮಾರು ಸಹಿತವಾದ ಉತ್ಸವ ವಿಗ್ರಹವನ್ನು ಪಂಚ ಜೀಯರು ಅನಂತ, ಗರುಡ, ವಿಷ್ವಕ್ಸೇನ, ಆಳ್ವಾರುಗಳು, ಮೊದಲಾದ ಪರಿವಾರ ದೇವತೆಗಳನ್ನು ಪ್ರತಿಷ್ಠಿಸಿದರು. ನಿತ್ಯೋತ್ಸವ, ರಥೋತ್ಸವ ನಡೆಯಲು ಏರ್ಪಡಿಸಿ, ಪಡಿತರ, ದೀಪಾರಾಧನೆ, ರಾಮಾನುಜಕೂಟದಲ್ಲಿ ನಿತ್ಯ ಸಂತರ್ಪಣೆ ನಡೆಯಲು ಗ್ರಾಮ ಭೂಮಿಗ್ಗಳನ್ನು ಸಮರ್ಪಿಸಿದರು. ದೇವಾಲಯದಲ್ಲಿ ತಮ್ಮ ರಾಜಭಕ್ತ ವಿಗ್ರಹವನ್ನು ನಿರ್ಮಿಸಿ ನಿಲ್ಲಿಸಿದರು. ದೇವಾಲಯದಲ್ಲಿ ಪ್ರತಿನಿತ್ಯವೂ ನಡೆದ ವರದಿಯನ್ನು ಆ ರಾಜವಿಗ್ರಹದ ಮುಂದೆ ತಿಳಿಸಬೇಕೆಂದು ಏರ್ಪಡಿಸಿದರು.

A.D. 1799ರಲ್ಲಿ ನಡೆದ ಯುದ್ಧವಾಗುವುದಕ್ಕೆ ಪೂರ್ವಭಾವಿಯಾಗಿ ವಿಧರ್ಮಿಗಳಿಂದ ಈ ದೇವಸ್ಥಾನಕ್ಕೆ ಪ್ರಬಲವಾದ ಅಪಾಯವುಂಟಾಗಿ ದೇವಸ್ಥಾನ ಗೋಪುರಾದಿಗಳು ಭಗ್ನವಾದವು. ಆಗ ವೀರಾಂಬುಧಿ ಮನೆತನದವರು ಆ ದೇವತಾ ವಿಗ್ರಹಗಳನ್ನು ಶ್ರೀರಂಗನಾಥಸ್ವಾಮಿ ದೇವಸ್ಥಾನದ ಪ್ರಾಕಾರದ ಮಂಡಪದಲ್ಲಿಟ್ಟು ಕಾಪಾಡಿ ಬಂದರು. ಮುಮ್ಮಡಿ ಕೃಷ್ಣರಾಜ ಒಡೆಯರು ಸಿಂಹಾಸನಾಧಿಷ್ಠಿತರಾದ ಮೇಲೆ ೧೮೧೮ರಲ್ಲಿ ಈ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ ದೇವತಾ ಮೂರ್ತಿಗಳನ್ನು ಪುನಃ ಪ್ರತಿಷ್ಠಿಸಿದರು. ದೇವತಾಮೂರ್ತಿಗಳನ್ನು ಕಾಪಾಡಿ ಬಂದುದಕ್ಕಾಗಿ ವೀರಾಂಬುಧಿ ಮನೆತನದವರಿಗೆ ಈ ದೇವಸ್ಥಾನದಲ್ಲಿ ಅಗ್ರತೀರ್ಥ ಮರ್ಯಾದೆ, ಪಾರುಪತ್ಯ ಅಧಿಕಾರ ಎಲ್ಲವನ್ನೂ ಕೊಟ್ಟರು.

(ನಿರೂಪಗಳು -1814-1826-1831-1838)

ದೇವಸ್ಥಾನವು ಪೂರ್ವಾಭಿಮುಖವಾಗಿರುವುದು.

ಗರ್ಭಗೃಹ - ಚತುರಶ್ರವಾಗಿ ವಿಶಾಲವಾಗಿದೆ. ಮಧ್ಯೇಜಗತಿ ನಾಲ್ಕು ಸ್ತಂಭಗಳ ಮಂಟಪರೀತಿ. ಮಧ್ಯೇ ಶ್ರೀಲಕ್ಷ್ಮೀನೃಸಿಂಹಸ್ವಾಮಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿರಾಜಮಾನರಾಗಿ ಸಾನ್ನಿಧ್ಯಹೊಂದಿರುವರು. ಗರ್ಭಗೃಹದ ಮುಂದೆ ಶುಕನಾಸಿ ಅಥವಾ ಅರ್ಧಮಂಡಪ - ಅದರ ಮುಂದೆ

ನವರಂಗವು - ೨೪ ಕಂಭಗಳಿಂದಾವೃತವಾಗಿರುವುದು. ಈ ನರವರಂಗದ ದಕ್ಷಿಣ ಭಾಗದಲ್ಲಿ ಪ್ರಾಕಾರಕ್ಕೆ ಬರಲು ದ್ವಾರವಿದೆ. ಅರ್ಧಮಂಡಪದಿಂದ ನವರಂಗಕ್ಕೆ ಬರುವ ದ್ವಾರದಲ್ಲಿ ಜಯವಿಜಯ ದ್ವಾರಪಾಲಕರಿರುವರು. ನವರಂಗದ ಉತ್ತರ ಭಾಗದಲ್ಲಿ ಈ ದೇವಸ್ಥಾನವನ್ನು ಕಟ್ಟಿಸಿ ಪ್ರತಿಷ್ಠಿಸಿದ ಧರ್ಮದಾತ ರಣದೀರ ಕಂಠೀರವ ಮಹಾರಾಜರ ಭಕ್ತ ಮೂರ್ತಿ ಇರುವುದು.

ಮುಖಮಂಡಪ - ನವರಂಗದಿಂದ ಹೊರಕ್ಕೆ ಬಂದರೆ ಮುಖ ಮಂಡಪಕ್ಕೆ ಬರುತ್ತೇವೆ. ಮುಖಮಂಡಪವು ೪೨ ಕಂಭಗಳಿಂದ ಕೂಡಿ ವಿಶಾಲವಾಗಿರುವುದು. ಇಲ್ಲಿಂದ ಪ್ರದಕ್ಷಿಣವಾಗಿ ಹೊರಟರೆ ಎದುರಿಗೆ ಆಂಡಾಳ್ ಗೋದಾದೇವಿ ಸನ್ನಿಧಿ. ಅನಂತರ ವಾಯುವ್ಯ ಭಾಗದಲ್ಲಿ

ಶ್ರೀಲಕ್ಷ್ಮೀಅಮ್ಮನವರ ಸನ್ನಿಧಿ- ಗರ್ಭಗೃಹ, ಅರ್ಧಮಂಡಪವಿರುವುದು. ಮುಂದೆಬಂದರೆ ಉತ್ತರಭಾಗದಲ್ಲಿ ತೃತೀಯ ಪ್ರಾಕಾರ - ಶ್ರೀರಾಮಾನುಜರ ಮತ್ತು ಶ್ರೀಕೃಷ್ಣಸ್ವಾಮಿಯ (ಅಂಬೆಗಾಲು ಕೃಷ್ಣ) ವೇದಾಂತದೇಶಿಕರ ಸನ್ನಿಧಿ ಇರುವುದು. ಮುಂದೆ -

ಯಾಗಮಂಡಪ - ಮುಖಮಂಡಪದಿಂದ ಹೊರಕ್ಕೆ ಬಂದರೆ ದ್ವಾರದ ಉಭಯಪಾರ್ಶ್ವದಲ್ಲೂ ಎತ್ತರವಾದ ಜಗತಿಕೈಸಾಲೆ. ಈ ಕೈಸಾಲೆಯ ಮುಂದೆ ವಿಶಾಲವಾದ ಮಂಡಪ 36+9=45 ಕಂಭಗಳಿಂದ ಕೂಡಿರುವುದು. ಈ ವಿಶಾಲ ಮಂಡಪದ ಮುಂದೆ ಬಲಭಾಗದಲ್ಲಿ ೧೬ ಕಂಭಗಳಿಂದ ಕೂಡಿದ ಮಂಡಪ ಅದರ ಮಧ್ಯೆ ಜಗತಿರೂಪ ಮಂಡಪವಿರುವುದು, ಎಡಭಾಗದಲ್ಲಿ

ವಸಂತಕೊಳ - ಈಗ ಈ ವಸಂತಕೊಳ ಇರುವುದಿಲ್ಲ.

ಗೋಪುರ - ೧೭೯೯ರ ಯುದ್ಧಕಾಲದಲ್ಲಿ ಈ ಗೋಪುರವನ್ನೂ ದೇವಸ್ಥಾನವನ್ನೂ ವಿಧರ್ಮಿಗಳು ಕೆಡವಿದರು. ಇದರ ರೂಪ, ಆಕಾರ ಸರಿಯಾಗಿ ತಿಳಿಯದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಗ್ರಹಮೂರ್ತಿಗಳು - ಶ್ರೀಲಕ್ಷ್ಮೀನೃಸಿಂಹಸ್ವಾಮಿ

ಈ ಮೂರ್ತಿಯು ಕೇಶವಾದಿ ಚತುರ್ವಿಂಶತಿ ಮೂರ್ತಿ ವಿಧಾನದಲ್ಲಿ ೧೯ನೆಯ ಮೂರ್ತಿ. ಆಸೀನರೂಪ. ಚತುರ್ಭುಜ ಕೆಳಗಿನ- ಬಲದಕೈಯಲ್ಲಿ ಚಕ್ರ, ಮೇಲಿನ ಕೈಯಲ್ಲಿ ಪದ್ಮ. ಮೇಲಿನ ಎಡದಕೈಯಲ್ಲಿ ಗದಾ, ಕೆಳಗಿನ ಕೈಯಲ್ಲಿ ಶಂಖ, ಈ ರೀತಿ ವಿನ್ಯಾಸದಲ್ಲಿರುವುದು. ಹಿಂಭಾಗದಲ್ಲಿ ಪ್ರಭಾವಳಿ ಇರುವುದು. ಪ್ರಭಾವಳಿಯಲ್ಲಿ ದಶಾವತಾರ ನಿರೂಪಿಸಿರುವುದು. ಸಾಧಾರಣವಾಗಿ ಪ್ರಭಾವಳಿಯ ಮಧ್ಯೆ ಸಿಂಹಲಲಾಟವಿರುವುದು. ಆದರೆ ಇಲ್ಲಿ ಸಿಂಹಲಲಾಟವಿರುವುದಿಲ್ಲ. ವದನದಿಂದ ಕೂಡಿದ ಸಾಲಗ್ರಾಮರೂಪವಿರುವುದು. ಇದು ವಿಶೇಷ ರೀತಿಯಾದ ಪ್ರಭಾವಳಿ. ಇದರಂತೆ ಇನ್ನೆಲ್ಲೂ ಕಾಣಬರುವುದಿಲ್ಲ. ದೇವರ ಪೀಠದಲ್ಲಿ ಗರುಡ ಚಿಹ್ನವಿರುವುದು.

ಉತ್ಸವಮೂರ್ತಿ - ಚತುರ್ಭುಜ ಶಂಖ ಚಕ್ರ ಗಧಾ ಪದ್ಮ ಸ್ಥಿತರೂಪ, ಸಮಭಂಗ, ಉಭಯಪಾರ್ಶ್ವಗಳಲ್ಲಿ ಶ್ರೀದೇವಿ, ಭೂದೇವಿಯರು. ಇಲ್ಲಿ ವಿಶೇಷವೇನೆಂದರೆ ದೇವರ ಪಕ್ಕಕ್ಕೆ ದೇವಿಯರ ಕಮಲದ ಸನ್ನಿವೇಶವಿರಬೇಕು. ಆದರೆ ಆ ರೀತಿ ಇಲ್ಲದೆ ಶ್ರೀದೇವಿಯರೂ, ದೇವಿಯರೂ ಇಬ್ಬರೂ ಬಲದ ಕೈಯಲ್ಲಿಕಮಲದ ಮೊಗ್ಗನ್ನು ಹಿಡಿದಿರುವರು. ಬಲದ ಕೈಯಲ್ಲಿ ಅರಳಿದ ಕಮಲ, ಪುಷ್ಪ ಇರಬಾರದೆಂದು ಆಗಮಶಾಸ್ತ್ರ ತಿಳಿಸುವುದು. ಈ ರೀತಿ ಕಾಂಚೀಪುರ, ಮೇಲುಕೋಟೆಯಲ್ಲಿರುವುದು. ಹೀಗೆ ಯಾವ ಕಾಲದಲ್ಲಿ ವ್ಯತ್ಯಾಸವಾಯಿತು. ವ್ಯತ್ಯಾಸವಾಗಲು ಕಾರಣ ತಿಳಿಯಲಿಲ್ಲ.

ಶ್ರೀಲಕ್ಷ್ಮೀ ಅಮ್ಮನವರು - ಎಲ್ಲಾ ದೇವಸ್ಥಾನಗಳಲ್ಲಿರುವಂತೆಯೇ ಇಲ್ಲಿಯೂ ಸಹ ಅದೇ ರೂಪವು. ಪೀಠದ ಮೇಲೆ ಆಸೀನ ರೂಪ. ಚತುಭುಜ, ಕೈಗಳೆರಡರಲ್ಲೂ ಪದ್ಮ, ಇನ್ನೆರಡು ಕೈಗಳು ಅಭಯುವರದ ಹಸ್ತ, ಕಿರೀಟ ಕುಂಡಲ ಹಾರಾದಿ ಅಲಂಕಾರಗಳಿಂದ ಶೋಭಿತರಾಗಿರುವರು.

ಭಕ್ತ ವಿಗ್ರಹ = ಮೂರ್ತಿಗಳು -

ಶ್ರೀರಾಮಾನುಜಾಚಾರ್ಯರಾದಿಯಾಗಿ ಆಳ್ವಾರಾಚಾರ್ಯರ ಮೂರ್ತಿಗಳೆಲ್ಲಾ ಆಯಾ ಸನ್ನಿಧಿಗಳಲ್ಲಿ ಪ್ರತಿಷ್ಠಿತವಾಗಿವೆ. ಪ್ರಕೃತ ಭದ್ರತೆ ರಕ್ಷಣೆಯನ್ನನುಸರಿಸಿ ಎಲ್ಲಾ ಮೂರ್ತಿಗಳೂ ಗರ್ಭಗೃಹದಲ್ಲೇ ಒಂದುಭಾಗದಲ್ಲಿರುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವೇದಾಂತದೇಶಿಕರು - ಈ ದೇವಸ್ಥಾನದಲ್ಲಿ ವೇದಾಂತದೇಶಿಕರ ಮೂರ್ತಿ ಇರಲಿಲ್ಲ. ಮೈಸೂರು ಬ್ರಹ್ಮತಂತ್ರ ಪರಕಾಲ ಮಠದ ಸ್ವಾಮಿಗಳು ಹೊಸದಾಗಿ ನಿರ್ಮಿಸಿ ಪ್ರತಿಷ್ಠಿಸಿದರು.

ಮೂಲಮೂರ್ತಿ - ಆಸೀನರೂಪ - ಉಪದೇಶ ಮುದ್ರೆ. ವಿಗ್ರಹದ ಕೈಯಲ್ಲಿರುವ ಪುಸ್ತಕದಲ್ಲಿ ವಿಶಿಷ್ಟಾದ್ವೈತ ಸಿದ್ಧಾಂತಸಾರವಾದ ಎರಡು ಮಾತುಗಳು ಬರೆಯಲ್ಪಟ್ಟಿವೆ.

``ಕಾರಣತ್ವಮಬಾಧ್ಯತ್ವಮುಪಾಯತ್ವಮುಪೇಯತಾ ಇತಿ ಶಾರೀರಿಕ ಸ್ವಾಪ್ಯಮಿಹಚಾಪಿ ವ್ಯವಸ್ಥಿತಂ ಶ್ರೀಯಾಸಾರ್ಧಮಿದಂ ಸರ್ವಂ" ಎಂದಿರುವುದು. ಉತ್ಸವಮೂರ್ತಿ ಕಾಣಬರಲಿಲ್ಲ.

ರಾಜ ಪ್ರತಿಮೆ - ರಣಧೀರ ಕಂಠೀರವ ನರಸರಾಜ ಒಡೆಯರ ಮೂರ್ತಿ ರಾಜಉಡುಪಿನಿಂದ ಕೂಡಿ ಸುಂದರವಾಗಿದೆ. ಬಹು ಆಕರ್ಷಕವಾಗಿದೆ. ಈ ವಿಗ್ರಹದ ಮುಂದೆ ದೇವಸ್ಥಾನದ ಪ್ರತಿದಿನದ ಆಯವ್ಯಯ ವರದಿಯನ್ನು ಒಪ್ಪಿಸಬೇಕೆಂಬ ನಿಯಮವುಂಟು. A.D. 1799ರ ಯುದ್ಧ ಸಂಭವಿಸಿದಾಗ ಈ ಮೂರ್ತಿಗಳಿಗೆ ವಿಧರ್ಮಿಗಳಿಂದ ಅಪಾಯವುಂಟಾಗಿ ಅದನ್ನು ಪುನಃ ೧೭೫೦ ಸರ್ವಧಾರಿ ಸಂ. ದಲ್ಲಿ ಪ್ರತಿಷ್ಠಿಸಲಾಯಿತು. ಶ್ರೀ.ಪ.ಇ.

ವಿಶೇಷ ವಿಷಯ - ನವರಂಗದಲ್ಲಿ ಆರುಮುಖಗಳೂ ೧೨ಕೈಗಳೂ ಇರುವ ಸುಬ್ರಹ್ಮಣ್ಯವಿಗ್ರಹ = ಮೂರ್ತಿ ಇರುವುದು. ಮಂಡಪದಲ್ಲಿ ಅಂದವಾಗಿ ಬಿಡಿಸಿರುವ ೧೫ ಮಂದಿ ಶಿವಶರಣರ ಮೂರ್ತಿಗಳಿವೆ. ದಳವಾಯಿ ನಂಜರಾಜ (೧೮ನೇ ಶತಮಾನ) ಕೊಟ್ಟರೆನ್ನುವ ಒಂದು ತಾಮ್ರದ ಸುಂದರ ದಕ್ಷಿಣಾಮೂರ್ತಿ ಚಿತ್ರವಿರುವ ಶಾಸನವಿರುವುದು.

ಇವುಗಳೆಲ್ಲಾ ೧೭೯೯ರ ಯುದ್ಧ ಪೂರ್ವಭಾವಿಯಾಗಿ ವಿಧರ್ಮಿಗಳಿಂದ ಅಪಾಯ ಸಂಭವಿಸಿದಾಗ ಅವುಗಳನ್ನು ರಕ್ಷಣೆ ನಿಮಿತ್ತ ಸ್ಥಳಾಂತರಿಸಿದ್ದರು. ಅನಂತರ ಕಾಲದಲ್ಲಿ ಇಲ್ಲಿ ತಂದಿರಿಸಲಾಗಿದೆ.

ಧರ್ಮಗಳು - ಶಕ ೧೫೬೭ ಸರ್ವಜಿತು ಸಂ. ವೈಶಾಖ ಅಕ್ಷ ತೃತೀಯಾ, ಮೃಗಶಿರಾ ನಕ್ಷತ್ರ (A.D. 1645)ರಲ್ಲಿ ಕಂಠೀರವ ನರಸರಾಜರು ಮೇಲುಕೋಟೆಯ ಕಲ್ಯಾಣಿತೀರದಲ್ಲಿ ಕಂಠೀರವ ನರಸರಾಜ ಅಗ್ರಹಾರವನ್ನು ನಿರ್ಮಿಸಿ ಸುಖತೊರೆ ಮೊದಲಾದ ಎಂಟು ಗ್ರಾಮಗಳನ್ನು ಧರ್ಮಮಾಡಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಭೂಮಿಗಳನ್ನು ೫ ವೃತ್ತಿಗಳನ್ನಾಗಿ ಮಾಡಿ ಶ್ರೀವೈಷ್ಣವ ಬ್ರಾಹ್ಮಣರಿಗೆ ಧರ್ಮಮಾಡಿದಾಗ ಅದರಲ್ಲಿ ೨ ವೃತ್ತಿಗಳನ್ನು ಶ್ರೀರಂಗಪಟ್ಟಣದ ಶ್ರೀಲಕ್ಷ್ಮೀನರಸಿಂಹಸ್ವಾಮಿಗೆ ಧರ್ಮ. ಸಾಂ.ಪು. ೨೧೪

ಶ್ರೀ ಶ್ವೇತವರಾಹಸ್ವಾಮಿ ದೇವಸ್ಥಾನ -

ಚಿಕ್ಕದೇವ ಮಹಾರಾಜರು ಶ್ರೀಮುಷ್ಣದಿಂದ ಶ್ರೀಶ್ವೇತವರಾಹಸ್ವಾಮಿ (ಶಿಲಾಮೂರ್ತಿ) ತಂಜಾವೂರಿನಿಂದ ಉಭಯನಾಚ್ಚಿಮಾರ್ ಸಹಿತ ನೀಲಮೇಘಸ್ವಾಮಿ ಉತ್ಸವಮೂರ್ತಿ (ಲೋಹಮೂರ್ತಿ)ಯನ್ನು ಹೊಸದಾಗಿ ಮಾಡಿಸಿ ಅರಮನೆಯ ಬಲಭಾಗದಲ್ಲಿ ದೇವಸ್ಥಾನವನ್ನು ಕಟ್ಟಿಸಿ ಪ್ರತಿಷ್ಠಿಸಿದರು.

A.D. 1799ರಲ್ಲಿ ನಡೆದ ಯುದ್ಧ ಸಮಯದಲ್ಲಿ ಈ ದೇವಸ್ಥಾನಕ್ಕೆ ವಿಧರ್ಮಿಗಳಿಂದ ಪ್ರಬಲವಾದ ಅಪಾಯವುಂಟಾಗಿ ಕೆಡವಲ್ಪಟ್ಟಿತು. ಆಗ ದೇವರ ವಿಗ್ರಹವನ್ನು ಶ್ರೀರಂಗನಾಥಸ್ವಾಮಿ ಪ್ರಾಕಾರದ ಮಂಟಪದಲ್ಲಿಟ್ಟು ಕಾಪಾಡಿ ಬಂದರು. ಮುಮ್ಮಡಿ ಕೃಷ್ಣರಾಜ ಒಡೆಯರು ಅಧಿಕಾರಕ್ಕೆ ಬಂದ ಮೇಲೆ ಈ ವಿಗ್ರಹಗಳನ್ನು ಮೈಸೂರಿಗೆ ತರಿಸಿ ಅರಮನೆಯ ಪಕ್ಕದಲ್ಲಿ ೧೮೦೯ರಲ್ಲಿ ಪುನಃ ಪ್ರತಿಷ್ಠಿಸಿದರು. ಯುದ್ಧ ಸಮಯದಲ್ಲಿ ದೇವರ ವಿಗ್ರಹವನ್ನು ಕಾಪಾಡಿಬಂದ ವೀರಾಂಬುಧೀ ಮನೆತನದವರಿಗೆ ಮಹಾರಾಜರು ದೇವಸ್ಥಾನದಲ್ಲಿ ತೀರ್ಥ ಪ್ರಸಾದ, ಮಾನ ಮಾರ್ಯಾದೆ ದೇವಸ್ಥಾನದ ಪಾರುಪತ್ಯ ಅಧಿಕಾರ ಎಲ್ಲವನ್ನೂ ಕೊಟ್ಟರು.

(ನಿರೂಪ 1814,1826,1831,1838)

(ಈ ದೇವಸ್ಥಾನದ ಕಟ್ಟಡ ಶಿಲ್ಪದ ವಿಚಾರವನ್ನು ಇದೇ ಗ್ರಂಥಕರ್ತರಿಂದ ಬರೆಯಲ್ಪಟ್ಟು ಮೈಸೂರು ರಾಜಧಾನಿಯ ಕೈಪಿಡಿ ಮತ್ತು ದೇವಸ್ಥಾನಗಳು ಎಂಬ ಗ್ರಂಥದಲ್ಲಿ ವಿವರವಾಗಿ ಕಾಣಬಹುದು.)

ಶ್ರೀ ಗಂಗಾಧರೇಶ್ವರಸ್ವಾಮಿ ದೇವಾಲಯ -

ಪುರಾತನವಾದ ದೇವಾಲಯ -

ಆಂಗ್ಲರಿಗೂ - ಮೈಸೂರು ಸೇನೆಗೂ ೧೭೯೯ರಲ್ಲಿ ನಡೆದ ಯುದ್ಧಕ್ಕೆ ಪೂರ್ವಭಾವಿಯಾಗಿ ವಿಧರ್ಮಿಗಳಿಂದ ಈ ದೇವಸ್ಥಾನವು ಪೂರ್ಣವಾಗಿ ಕೆಡವಲಾಯಿತು. ತದನಂತರ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀರ್ಣೋದ್ಧಾರ ಮಾಡಿಸಿದರು. ಈ ದೇವಸ್ಥಾನವು ಪೂರ್ವಾಭಿಮುಖವಾಗಿರುವುದು. ಆದರೆ ಈಗ ದೇವಸ್ಥಾನದ ಒಳಕ್ಕೆ ಪ್ರವೇಶಮಾರ್ಗ ಗೋಪುರದ್ವಾರವು ದಕ್ಷಿಣಾಭಿಮುಖವಾಗಿರುವುದು.

ದೇವಸ್ಥಾನ ಪೂರ್ವಾಭಿಮುಖವಾಗಿರುವುದು -

ಗರ್ಭಗೃಹ - ಮೂಲದೇವರು (ಶಿವಲಿಂಗ) ಗಂಗಾಧರೇಶ್ವರಸ್ವಾಮಿ ಸಾನ್ನಿಧ್ಯವಿರುವ ಸ್ಥಳ ಚತುರಶ್ರವಾಗಿದೆ. ಅಲ್ಲಿಂದ ಹೊರಕ್ಕೆ ಬಂದರೆ ಶುಕನಾಸಿ (ಅರ್ಧಮಂಡಪ) ಅಲ್ಲಿಂದ ಹೊರಕ್ಕೆ ಬಂದರೆ ಅರ್ಧಮಂಡಪ ದ್ವಾರಕ್ಕೆ ನೇರವಾಗಿ ಎಂದರೆ ಮೂಲಮೂರ್ತಿ ಶಿವಲಿಂಗಕ್ಕೆ ಎದುರಿಗೆ ವೃಷಭರಾಜನ ವಿಗ್ರಹವಿರುವುದು.

ನವರಂಗ - ನವರಂಗವು ೨೫ ಅಂಕಣಗಳಿಂದಲೂ, ಚತುರಶ್ರವಾದ ೧೬ ಕಂಭಗಳಿಂದಲೂ ಕೂಡಿರುವುದು. ಕಂಭಗಳಲ್ಲಿ ವಿಶೇಷಾಲಂಕಾರಗಳೇನೂ ಇರುವುದಿಲ್ಲ. ಕಂಭಗಳೆಲ್ಲವೂ ಚತುರಶ್ರವಾಗಿ ರಮಣೀಯವಾಗಿರುವುದು.

ಈ ನವರಂಗದ ಉತ್ತರಭಾಗದಲ್ಲಿ ಉತ್ಸವಮೂರ್ತಿ, ದಕ್ಷಿಣಾಭಿಮುಖವಾಗಿ ಸನ್ನಿಧಿ ಇರುವುದು. ಉತ್ಸವಮೂರ್ತಿ ಎದುರಿಗೆ ಸರಿಯಾಗಿ ದ್ವಾರ ಒಂದಿರುವುದು. ಇಲ್ಲಿಂದ ಹೊರಕ್ಕೆ ಬಂದರೆ ಪ್ರಥಮ ಪ್ರಾಕಾರಕ್ಕೆ ಬರಬಹುದು. ಆದರೆ ದೇವಸ್ಥಾನವು ಪೂರ್ವಾಭಿಮುಖವಾಗಿರುವುದರಿಂದ ಪೂರ್ವದಿಕ್ಕಿಗೂ ಮಹಾದ್ವಾರವಿರುವುದು. ಇಲ್ಲಿಂದ ಪ್ರಥಮ ಪ್ರಾಕಾರಕ್ಕೆ ಬರಬಹುದು. ಅರ್ಧಮಂಡಪದ ದ್ವಾರದಿಂದ ನವರಂಗಕ್ಕೆ ಬರುವ ದ್ವಾರದ ಉಭಯಪಾರ್ಶ್ವಗಳಲ್ಲಿಯೂ ನಂದಿ,ಮಹಾಕಾಳ, ಅರ್ಧಚಿತ್ರ ದ್ವಾರಪಾಲಕರಿರುವರು.

ನವರಂಗದಲ್ಲಿರುವ ಉತ್ಸವಮೂರ್ತಿ ಪಕ್ಕದಲ್ಲಿ (ತಾಂಡವೇಶ್ವರ) ನಟರಾಜ ಸನ್ನಿಧಿ ಇರುವುದು. ಈ ನವರಂಗದಲ್ಲಿ ಅನೇಕ ವಿಗ್ರಹಮೂರ್ತಿಗಳಿವೆ. ವಿವರಕ್ಕೆ ವಿಗ್ರಹಮೂರ್ತಿಗಳು ಎನ್ನುವ ಅಧ್ಯಾಯದಲ್ಲಿ ಕಾಣಬಹುದು.

ನವರಂಗದ ಮಹಾದ್ವಾರದಿಂದ ಹೊರಕ್ಕೆ ಬಂದರೆ 8x3=24 ಕಂಭಗಳಿಂದ ಕೂಡಿದ ವಿಶಾಲ ಮಂಡಪವಿರುವುದು. ನವರಂಗದಲ್ಲಿರುವ ಉತ್ಸವಮೂರ್ತಿ ಪಕ್ಕದಲ್ಲಿ (ತಾಂಡವೇಶ್ವರ) ನಟರಾಜ ಸನ್ನಿಧಿ ಇರುವುದು. ಈ ನವರಂಗದಲ್ಲಿ ಅನೇಕ ವಿಗ್ರಹ = ಮೂರ್ತಿಗಳು ಇಡಲ್ಪಟ್ಟಿವೆ. ವಿವರಕ್ಕೆ ವಿಗ್ರಹ = ಮೂರ್ತಿಗಳು ಎನ್ನುವ ಅಧ್ಯಾಯದಲ್ಲಿ ಕಾಣಬಹುದು. ನವರಂಗದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಹಾದ್ವಾರದಿಂದ ಹೊರಕ್ಕೆ ಬಂದರೆ 8x3=24 ಕಂಭಗಳಿಂದ ಕೂಡಿದ ಮಂಡಪವಿರುವುದು. ಇಲ್ಲಿ ದ್ವಾರದ ಬಲಭಾಗದಲ್ಲಿ ವೇಲಾಯುಧನ್ ದಣ್ಡಪಾಣಿ, ಸುಬ್ರಹ್ಮಣ್ಯಸ್ವಾಮಿ ಸನ್ನಿಧಿಗಳಿರುವುದು. ವಿಶೇಷವೇನೆಂದರೆ ಈ ಉಭಯದೇವಿಯರನ್ನು ಗಂಗೆ ಪಾರ್ವತಿಯೆಂದು ಕರೆಯುವರು.

ಈ ನವರಂಗದಲ್ಲಿ ಅನೇಕ ವಿಗ್ರಹ ಮೂರ್ತಿಗಳಿವೆ. ಈ ಮೂರ್ತಿಗಳು ಬೇರೆ ಬೇರೆ ಸ್ಥಳದಲ್ಲಿದ್ದು. ೧೭೪೯ರಲ್ಲಿ ದೇವಸ್ಥಾನಕ್ಕೆ ಅಪಾಯ ಬಂದಿದ್ದಾಗ ಈ ಮೂರ್ತಿಗಳನ್ನೆಲ್ಲಾ ರಕ್ಷಣೆಗಾಗಿ ಈ ನವರಂಗದಲ್ಲಿ ತಂದಿಟ್ಟಿರಬೇಕು.

ಅರ್ಧಮಂಡಪ - ಶುಕನಾಸಿ ದ್ವಾರದ ಬಲಭಾಗದಲ್ಲಿ ಅತಿ ಸುಂದರವಾದ ಅಲಂಕಾರಗಳಿಂದ ಕೂಡಿದ ಗಣಪತಿಯನ್ನು ಕಾಣಬಹುದು. ಎಡಭಾಗದಲ್ಲಿ ಸುಬ್ರಹ್ಮಣ್ಯೇಶ್ವರ. ಇವರಲ್ಲಿ ವಿಶೇಷವೇನೆಂದರೆ ಇವರ ತಲೆಯ ಮೇಲೆ ಒಂಭತ್ತು ಹೆಡ್ಡೆಯ ಆದಿಶೇಷ ಅಲಂಕಾರವಿರುವುದು. ಆದರೆ ಪರಿಶೀಲಿಸಿದರೆ ೧೦ ಹೆಡೆಯ ಮುಖವು ಕಾಣಬರುವುದು. ಅನಂತರ ಕುಮಾರಸ್ವಾಮಿ ವಿಗ್ರಹವು. ಅದರ ಪಕ್ಕದಲ್ಲಿ ಸಪ್ತಮಾತೃಕೆಯರು, ಅದರ ಪಕ್ಕದಲ್ಲಿ ಶ್ರೀನಾರಾಯಣಮೂರ್ತಿ. ಚತುರ್ಭುಜ, ಶಂಖ ಚಕ್ರ ಗದಾ ಪದ್ಮ (ಅಭಯಹಸ್ತ) ರೂಪಿ. ಆಗಮ ಶಾಸ್ತ್ರರೀತಿಯಾಗಿ ಶಿವಾಲಯದಲ್ಲಿ ವಿಷ್ಣುಮೂರ್ತಿ ಇದ್ದೇ ಇರಬೇಕು. ಅನಂತರ ಮಹಾಬಲೇಶ್ವರ, ಅನಂತರ ಮಹಿಷಾಸುರ ಮರ್ದಿನಿ, ವೀರಭದ್ರ, ಭದ್ರಕಾಳಿ, ದಕ್ಷಬ್ರಹ್ಮ, ಕಾಲಭೈರವ, ಶಿವಪಾದ ಬಾಲಗಂಗಾಧರ (ಲಿಂಗರೂಪಿ) ಸೂರ್ಯನಾರಾಯಣ, ಚಂದ್ರ ಶಿವಕಾಮಿಸಹಿತ ನಟರಾಜ ಮೂರ್ತಿಯು ಪ್ರತ್ಯೇಕವಾಗಿ ಎಂದರೆ ಉತ್ಸವಮೂರ್ತಿಯ ಎಡಭಾಗದ ಸನ್ನಿಧಿಯಲ್ಲಿ ಪ್ರತಿಷ್ಠಿತವಾಗಿದ್ದಿತು. ತಾಂಡವ ಮೂರ್ತಿಯೆಂದು ಶಾಸನದಲ್ಲಿಯೇ ಹೇಳಿರುವುದು. ಈ ಮೂರ್ತಿಯನ್ನು ಶಕ ೧೭೬೪ಳ ಪ್ಲವ ಸಂ. ಜ್ಯೇಷ್ಠಶುದ್ಧ ೧೫ ಕಶ್ಯಪಗೋತ್ರ ಶಿವಭಟ್ಟಾಧ್ಯಕ್ಷ ನಂಜುಂಡ ಭಟ್ಟರ ಪುತ್ರರಾದ ಶಿವರಾಮ ಪಂಡಿತರು ಮಾಡಿಸಿ ಪ್ರತಿಷ್ಠಿಸಿದರು. ಶ್ರೀ.ಪ ೩೦. ಪ್ರಕೃತ ಈ ವಿಗ್ರಹವು ಉತ್ಸವಮೂರ್ತಿ ಸನ್ನಿಧಿಯಲ್ಲಿ ಬಿಜಯಮಾಡಿಸಿರುತ್ತಾರೆ.

ಮುಂದೆ ನವರಂಗದ ಮಹಾದ್ವಾರದ ಎದುರಿಗೆ ಬಲಿಪೀಠ, ಧ್ವಜಸ್ತಂಭಗಳಿವೆ. ಇಲ್ಲಿಂದ ಪ್ರದಕ್ಷಿಣವಾಗಿ ಹೊರಟರೆ ಆಗ್ನೇಯ ಮೂಲೆಯಲ್ಲಿ ಪಾಕಶಾಲೆ ಅದರ ಪಕ್ಕದಲ್ಲಿ ವಾಹನ ಮಂಡಪವು. ಅಲ್ಲಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂದೆ ಬಂದರೆ ಎದುರಿಗೆ ನೇರವಾಗಿ ಯೋಗದಕ್ಷಿಣಾಮೂರ್ತಿ ಸನ್ನಿಧಿ. ಈ ಸನ್ನಿಧಿಗೆ ಬಲಭಾಗದಲ್ಲಿ ಗೌತಮೇಶ್ವರ ಸನ್ನಿಧಿ ಇರುವುದು.

ದಕ್ಷಿಣಾಮೂರ್ತಿ ಸನ್ನಿಧಿ ಮುಂಭಾಗದಲ್ಲಿ ೧೬ ಕಂಭಗಳಿಂದ ಕೂಡಿ ೪ ಅಂಕಣದ ಮಂಡಪವಿದೆ. ಕಂಭಗಳು ಛತುರಶ್ರವಾಗಿ ಮನೋಹರವಾಗಿದ್ದರೂ ಶಿಲ್ಪಾಲಂಕಾರಗಳಿರುವುದಿಲ್ಲ. ಈ ಮಂಡಪದ ದಕ್ಷಿಣೋತ್ತರ ಉಭಯ ಪಾರ್ಶ್ವಗಳಲ್ಲಿಯೂ ಅಂಗಲಿಂಗವು ಶಿವನ ಅನೇಕ ಹೆಸರುಗಳಿಂದ ಪ್ರತಿಷ್ಠಿತವಾಗಿರುವುದು. ಅಲ್ಲದೆ ದಕ್ಷಿಣಾ ಮೂರ್ತಿಯ ಎಡಭಾಗಕ್ಕೆ ಉದ್ದಕ್ಕೂ ಜಗತಿಯ ಮೇಲೆ ಅಂಗಲಿಂಗಗಳು ಪ್ರತಿಷ್ಠಿತವಾಗಿರುವುದು.

ಈ ಅಂಗಲಿಂಗದ ಹಿಂಭಾಗಕ್ಕೆ ದ್ವಿತೀಯ ಪ್ರಾಕಾರ ಇರುವುದು. ದಕ್ಷಿಣಾಮೂರ್ತಿ ಸನ್ನಿಧಿಯು ದಳವಾಯಿ ದೊಡ್ಡ ರಾಜಯ್ಯನವರ ಪೌತ್ರಕಳಲೆ ವೀರರಾಜಯ್ಯನವರ ಪುತ್ರ ನಂಜರಾಜಯ್ಯನು ಕಟ್ಟಿಸಿ ದಕ್ಷಿಣಾಮೂರ್ತಿಯನ್ನು A.D. 1736-1765ರ ಮಧ್ಯೆ ಪ್ರತಿಷ್ಠಿಸಿರಬೇಕು. ಈ ನಂಜರಾಜಯ್ಯನ ಮಗಳು ಪುಟ್ಟಮ್ಮಣ್ಣಿ (ದೇವರಾಜಮ್ಮಣ್ಣಿ) A.D. 1704ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರು ವಿವಾಹವಾದರು. ಶ್ರೀ.ಪ. ೨೯

ಈ ಸನ್ನಿಧಿಯ ಮುಂದೆ ಇರುವ ಮಂಡಪವು ಅವರೇ ಕಟ್ಟಿಸಿರುವರೆಂದು ತಿಳಿಯಬೇಕು. ಈ ಸನ್ನಿಧಿ ಮಂಡಪ ಆದ ನಂತರವೇ ಈ ಮಂಡಪದ ಉಭಯ ಪಾರ್ಶ್ವಗಳಲ್ಲಿಯೂ ಅಂಗಲಿಂಗಗಳು ಪ್ರತಿಷ್ಠಿತವಾಗಿವೆ. ಒಂದು ವೇಳೆ ಈ ಕಾಲಕ್ಕೂ ಹಿಂದೆಯೇ ಭಕ್ತರಿಂದ ಅಂಗಲಿಂಗಗಳು ಪ್ರತಿಷ್ಠಿಸಿವೆಯೆಂದು ಹೇಳಿದಲ್ಲಿ ಆ ಅಂಗಲಿಂಗಗಳು ಬೇರೆ ಸ್ಥಳದಲ್ಲಿ ಪ್ರತಿಷ್ಠೆಯಾಗಿದ್ದು 1797-1798ರ ಸಮಯದಲ್ಲಿ ವಿಧರ್ಮಿಗಳಿಂದ ದೇವಸ್ಥಾನಕ್ಕೆ ಅಪಾಯ ಬಂದಾಗ ಈ ಶಿವಲಿಂಗಗಳನ್ನು ತಂದು ಇಲ್ಲಿ ಪ್ರತಿಷ್ಠಿಸಿರಬೇಕು. ಎಡಭಾಗದಲ್ಲಿರುವ ಅಂಗಲಿಂಗಗಳ ಸನ್ನಿಧಿಯಲ್ಲೇ ಶಿವಭಕ್ತರ ವಿಗ್ರಹಗಳೂ ಇವೆ. ಇವೂ ಸಹ ಬೇರೆ ಸ್ಥಳದಲ್ಲಿ ಪ್ರತಿಷ್ಠಿತವಾಗಿದ್ದು ಅಲ್ಲಿಂದ ತರಲ್ಪಟ್ಟು, ರಕ್ಷಣೆಯಾಗಿ ಇಲ್ಲಿಡಲ್ಪಟ್ಟಿವೆ. ನಾವು ಇಲ್ಲಿಂದ ಮುಂದೆ ಹೊರಟರೆ ವಾಯವ್ಯ ಭಾಗದಲ್ಲಿ ಲೋಕಮಾತೆ ಪಾರ್ವತಿ ಅಮ್ಮನವರ ಸನ್ನಿಧಿಗೆ ಬರುತ್ತೇವೆ. ಗರ್ಭಗೃಹ, ಚತುರಶ್ರವಾಗಿದೆ. ಅದರ ಮುಂದೆ ಅರ್ಧಮಂಡಪ ಹೊರಕ್ಕೆ ಬಂದರೆ ರಂಗಮಂಡಪವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನವರಂಗಮಂಟಪ - ಈ ಮಂಡಪವು ೯ ಅಂಕಣಗಳಿವೆ. ಇಲ್ಲಿಯ ಸ್ತಂಭಗಳು ಸ್ಥೂಲವಾಗಿದ್ದರೂ ರಮಣೀಯವಾಗಿರುವುದು. ಸ್ತಂಭಗಳಲ್ಲಿ ಯಾವ ಶಿಲ್ಪಾಲಂಕಾರವೂ ಇರುವುದಿಲ್ಲ. ನವರಂಗದಿಂದ ಸೋಪಾನಮಾರ್ಗದಿಂದಿಳಿದು ಮುಂದೆ ಬಂದಲ್ಲಿ

ಗೋಮುಖ - ಗಂಗಾಧರೇಶ್ವರಸ್ವಾಮಿ ಅಭಿಷೇಕ ತೀರ್ಥವು ಹರಿದು ಜಲಧಾರಾ = ಗೋಮುಖ ಮಾರ್ಗದಿಂದ ಬಂದು ಅಲ್ಲಿರುವ ತೊಟ್ಟಿಗೆ ಬೀಳುವುದು. ಈ ಗೋಮುಖ ಜಲಧಾರಾ ಮಾರ್ಗದ ಅಂತ್ಯದಲ್ಲಿ ಯಾವ ಶಿಲ್ಪಾಲಂಕಾರವೂ ಇರುವುದಿಲ್ಲ. ಅದರ ಲಕ್ಷಣವನ್ನು ನೋಡಿದರೆ ಹಿಂದೆ ಬ್ರಾಹ್ಮಣ ಅಧಿಕಾರಿಯ ನೇತೃತ್ವದಲ್ಲಿ ಈ ಶಿವಾಯವು ಕಟ್ಟಲ್ಪಟ್ಟಿರುವುದೆಂದು ತಿಳಿಯಬೇಕು. ಈ ಗೋಮುಖದ ಪಕ್ಕದಲ್ಲಿ ಚಂಡಿಕೇಶ್ವರಸ್ವಾಮಿ ಸನ್ನಿಧಿ ಇರುವುದು.

ವಿಮಾನ=ಶಿಖರ=ಕಲಶ - ಶ್ರೀಗಂಗಾಧರೇಶ್ವರಸ್ವಾಮಿ ಪ್ರತಿಷ್ಠಿತರಾಗಿರುವ ಗರ್ಭಗೃಹದ ಮೇಲೆ ವಿಮಾನ ಶಿಖರವು ಕಲಶದಿಂದೊಡಗೂಡಿ ಪ್ರತಿಷ್ಠಿತವಾಗಿರುವುದು. ತ್ರಿತಲರೂಪ, ಚತುರಶ್ರವಾಗಿದ್ದರೂ ವರ್ತುಳಾಕಾರದಲ್ಲಿ ಕಾಣಬರುವುದು. ಕರ್ಣಕೂಟ, ಹಾರ, ಪಂಜರ, ಶಾಲಾ ಎಂಬ ಅಲಂಕಾರಗಳಿಂದ ಕೂಡಿರುವುದು. ಈ ಶಿಖರದಲ್ಲಿ ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಕಲಶಗಳು. ಮಧ್ಯೆ ಒಂದು ಈ ರೀತಿ ಐದು ಕಲಶಗಳಿದ್ದವು. ವಿಧರ್ಮಿಗಳು ವಿಮಾನವನ್ನು ಹಾಳು ಮಾಡಿದಾಗ ಕಲಶಗಳೂ ನಾಶವಾದವು. ಅನಂತರಕಾಲದಲ್ಲಿ ಒಂದೇ ಕಲಶ ಪ್ರತಿಷ್ಠೆ ಮಾಡಿರುವರು.

ಅಲ್ಲಿಂದ ಮುಂದೆ ಬಂದರೆ ಗಾಯತ್ರೀದೇವಿ ಸನ್ನಿಧಿ ಇರುವುದು. ಇಲ್ಲಿ ವೇದವ್ಯಾಸರು, ಶಂಕರಾಚಾರ್ಯರು ಪ್ರತಿಷ್ಠಿತರಾಗಿರುವರು. ಈ ಸನ್ನಿಧಿ ಪಕ್ಕದಲ್ಲಿ ಸುಬ್ರಹ್ಮಣ್ಯಸ್ವಾಮಿ ಮತ್ತು ನವಗ್ರಹ ಪ್ರತಿಷ್ಠೆ ಇರುವುದು. ಈ ಸನ್ನಿಧಿಗಳೆಲ್ಲವೂ ಈಚೆಗೆ ಭಕ್ತರುಗಳಿಂದ ಪ್ರತಿಷ್ಠಿತವಾದವು. ಅಲ್ಲಿಂದ ಮುಂದೆ ಬಂದರೆ ಪುನಃ ಬಲಿಪೀಠ ಮತ್ತು ಧ್ವಜಸ್ತಂಭಗಳ ಬಳಿ ಬರುತ್ತೇವೆ.

ಪಂಚಲಿಂಗಗಳು - ಈ ಪಂಚಲಿಂಗಗಳನ್ನು ರಣಧೀರ ಕಂಠೀರವ ನರಸರಾಜ ಒಡೆಯರು ಪ್ರತಿಷ್ಠಿಸಿದರು. ಪ್ರಕೃತ ಈ ಸನ್ನಿಧಿ ಕಾಣಬರುವುದಿಲ್ಲ. ಏನಾಯಿತು ? ಯಾವ ಕಾಲದಲ್ಲಿ ಹೇಗೆ ನಾಶವಾಯಿತು ? ತಿಳಿಯಬರುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಹುಶಃ ೧೭೯೯ರಲ್ಲಿ ಆಂಗ್ಲೇಯರ ಸೈನ್ಯಕ್ಕೂ ಮೈಸೂರು ಸೈನ್ಯಕ್ಕೂ ಯುದ್ಧವಾದಾಗ ಅದಕ್ಕೆ ಪೂರ್ವ ೧೭೯೮ರಲ್ಲಿ ನಾಶವಾಗಿರಬೇಕು.

ಬಲಿಪೀಠ - ಈ ದೇವಸ್ಥಾನದ ಬಲಿಪೀಠವು ನಾಲ್ಕು ದಿಕ್ಕಿನಲ್ಲಿ ಭದ್ರ ರೂಪವಾಗಿಯೂ, ನಾಲ್ಕು ವಿದಿಕ್ಕುಗಳಲ್ಲಿ ಚಿಕ್ಕದಾಗಿ ಮೂರು ಭದ್ರಗಳೂ ನಿರ್ಮಿತವಾಗಿ ಮೊತ್ತ ೧೬ ಭದ್ರರೂಪದಲ್ಲಿರುವುದು. ಅಂತಸ್ತುಗಳು ಕಾಣಿಸದಿದ್ದರೂ ಆರು ಕಂಠವೆಂಬ ಅಲಂಕಾರಗಳನ್ನು ಹೊಂದಿ ಎತ್ತರವಾಗಿರುವುದು. ಭದ್ರ ಅಲಂಕಾರಗಳೆಲ್ಲವೂ ಕೋಣ ರೂಪದಲ್ಲಿ, ಕಾಣಿಸುವುದು. ಈ ರೀತಿಯಾದ ಬಲಿಪೀಠಕ್ಕೆ ರುದ್ರ (ಬಲಿ) ಪೀಠವೆಂದು ಹೆಸರು.

ಧ್ವಜಸ್ತಂಭವು - ಧ್ವಜಸ್ತಂಭದ ಪೀಠವು ಬಲಿಪೀಠದ ಆಕಾರದಲ್ಲೇ ನಿರ್ಮಿತವಾಗಿರುವುದು. ಆದರೆ ಭದ್ರವೆಂಬ ಅಲಂಕಾರ ವಿಶೇಷದಲ್ಲಿ ಬಲಿಪೀಠದ ಅಲಂಕಾರವು ಕೋಣರೂಪದಲ್ಲಿರುವುದು. ಧ್ವಜಸ್ತಂಭ ಪೀಠದ ಅಲಂಕಾರವು ದಿಕ್ಕನ್ನನುಸರಿಸಿ ಅಶ್ರರೂಪದಲ್ಲಿರುವುದು. ಈ ಪೀಠದ ನಾಲ್ಕು ದಿಕ್ಕಿನಲ್ಲಿಯೂ ನಾಲ್ಕು ಭದ್ರಾಲಂಕಾರವು ,ವಿದಿಕ್ಕುಗಳು ನಾಲ್ಕರಲ್ಲಿಯೂ ನಾಲ್ಕು ನಾಲ್ಕು ಭದ್ರಾಲಂಕಾರಗಳು ಎಂದರೆ ೧೬ ಉಪಭದ್ರಾಲಂಕಾರಗಳಿಂದ ಅಲಂಕೃತವಾಗಿರುವುದು. ನೋಡುವುದಕ್ಕೆ ಕೋಣರೂಪವಾಗಿ ಕಂಡರೂ ಭದ್ರಾಲಂಕಾರಗಳು ಆಶ್ರರೂಪವಾಗಿಯೇ ಇರುವುದು. ಬಲಿಪೀಠದಲ್ಲಿ ಈ ರೀತಿ ಇಲ್ಲದೆ ದಿಕ್ಕು ವಿದಿಕ್ಕುಗಳಲ್ಲಿಯೂ ಭದ್ರಾಲಂಕಾರಗಳಿದ್ದರೂ ಕೋಣ ರೂಪವಾಗಿಯೇ ಕಾಣಬರುವುದು. ಈ ಪೀಠದ ಮಧ್ಯಭಾಗದಲ್ಲಿ ಧ್ವಜಸ್ತಂಭವು ಪ್ರತಿಷ್ಠಿತವಾಗಿ, ಹಿತ್ತಾಳೆ ತಗಡಿನ ಅಲಂಕಾರದಿಂದ ಕೂಡಿರುವುದು. ಈ ಧ್ವಜಸ್ತಂಭ ಬಲಿಪೀಠವಿರುವ ಸ್ಥಳಕ್ಕೆ ನೇರವಾಗಿ ಪೂರ್ವಭಾಗಕ್ಕೆ ಗೋಪುರ ಮಹಾದ್ವಾರವಿರುವುದು. ರಕ್ಷಣೆಗಾಗಿ ಈ ಭಾಗವನ್ನು ತೆರೆಯುವುದಿಲ್ಲ. ಅಲ್ಲದೆ ಉಭಯ ಪಾರ್ಶ್ವದಲ್ಲೂ ಜಗತಿಯಿಂದ ಕೂಡಿದ ಕೈಸಾಲೆ ಇರುವುದು. ದಕ್ಷಿಣಭಾಗ ಎಂದರೆ ಉತ್ಸವಮೂರ್ತಿಗೆ ನೇರವಾಗಿ ಎದುರಿನಲ್ಲಿರುವ ಗೋಪುರ ಮಹಾದ್ವಾರದಿಂದ ದೇವಸ್ಥಾನದ ತಳಕ್ಕೆ ಬರುತ್ತೇವೆ.

ದಕ್ಷಿಣ ಗೋಪುರ - ಮಹಾದ್ವಾರ -

ಮಂದಿರಕ್ಕೆ ಅಲಂಕಾರಪ್ರಾಯವಾಗಿಯೂ, ನೋಡುವವರಿಗೆ ಆಕರ್ಷಕವಾಗಿಯೂ ಪ್ರಾಕಾರ ಮಧ್ಯೆ ಮಹಾದ್ವಾರದ ಮೇಲೆ ಗೋಪುರವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೃಹದಾಕಾರದಲ್ಲಿ ರಚಿಸಲ್ಪಡುವುದು. ಈ ದ್ವಾರದ ಚಾವಡಿ ಜಗತಿಯ ಮೇಲೆ ಬಲಿಪೀಠದಂತೆ ಅಲಂಕಾರವಿಲ್ಲದಿದ್ದರೂ ಭದ್ರರೂಪ ೨೦ ಕೋಣರೂಪ ಆಕಾರದಲ್ಲಿ ರಚಿಸಲ್ಪಟ್ಟಿರುವುದು: ಈಗೋಪುರದ್ವಾರದಲ್ಲಿ ಒಳಹೊಕ್ಕರೆ ಎದುರಿಗೆ ನೇರವಾಗಿ ಉತ್ಸವಮೂರ್ತಿ ಕಾಣಬರುವರು. ಈ ಗೋಪುರವನ್ನು ರಣಧೀರ ಕಂಠೀರವ ನರಸರಾಜರು ಕಟ್ಟಿಸಿದರು. ದ್ವಾರದ ಜೊತೆಯಲ್ಲಿ ಪ್ರಾಕಾರವನ್ನೂ ಕಟ್ಟಿಸಿದರು. A.D. 1798 ರಲ್ಲಿ ವಿಧರ್ಮಿಗಳು ಈ ಗೋಪುರವನ್ನು ಒಡೆದು ಹಾಳುಮಾಡಿದರು. ಈಗ ಪ್ರಸ್ತರದವರೆಗೆ ಮಾತ್ರ ಮಹಾದ್ವಾರವು ನಿಂತಿರುವುದು.

ಗಂಗಾಧರೇಶ್ವರಸ್ವಾಮಿ - ಪ್ರಧಾನವಾದ ದೇವರು- ಮೂಲವಿಗ್ರಹ, ಶಿವಲಿಂಗರೂಪಿ, ಸಾಧಾರಣವಾಗಿ ಶಿವಲಿಂಗವು ಮೂರು ಭಾಗವಾಗಿದ್ದು ಕೆಳಗಿನ ಬ್ರಹ್ಮಭಾಗವು ಚತುರಶ್ರವಾಗಿ ಭೂಮಿಯಲ್ಲಿ ಪ್ರತಿಸ್ಥಿತವಾಗಿರುವುದು. ಮಧ್ಯದ ವಿಷ್ಣುಭಾಗವು ಅಷ್ಟಾಶ್ರವಾಗಿದ್ದು (ಎಂಟು ಪಟ್ಟಿ) ಪೀಠದಲ್ಲಿ ಸೇರಿಹೋಗುವುದು. ಮೇಲಿನ ರುದ್ರ ಭಾಗವು ವರ್ತುಳಾಕಾರವಾಗಿದ್ದು ಪೂಜಾ ಭಾಗವೆನಿಸುವುದು. ಪ್ರಕೃತ ನಮ್ಮ ದೇವಸ್ಥಾನದಲ್ಲಿ ಚಿಕ್ಕದಾದ ಮೂರ್ತಿ ಶಿವಲಿಂಗವು ಪ್ರತಿಷ್ಠಿತವಾಗಿರುವುದು. ಲಿಂಗವೆಂಬುದು ತ್ರಿಮೂರ್ತಿಸ್ವರೂಪವು. ಅದರಲ್ಲಿ ಬ್ರಹ್ಮಭಾಗ, ವಿಷ್ಣುಭಾಗ, ರುದ್ರಭಾಗ ಸಮವಾಗಿದ್ದರೆ ಸಮಲಿಂಗವೆಂದು ಕರೆಯಲ್ಪಡುತ್ತೆ. ಬ್ರಹ್ಮಭಾಗಕ್ಕಿಂತ ವಿಷ್ಣುಭಾಗ ಎತ್ತರ, ಅದಕ್ಕಿಂತ ರುದ್ರಭಾಗವು ಎತ್ತರವಾದಲ್ಲಿ ವರ್ಧಮಾನವೆಂದೂ, ಬ್ರಹ್ಮಭಾಗ, ವಿಷ್ಣುಭಾಗ ಸಮವಾಗಿದ್ದು ರುದ್ರಭಾಗ ಅಧಿಕವಾಗಿದ್ದಲ್ಲಿ ಶಿರಾಧಿಕ್ಯವೆಂದೂ, ಬ್ರಹ್ಮಭಾಗಕ್ಕಿಂತ ಅಧಿಕವಾಗಿ ವಿಷ್ಣು ರುದ್ರಭಾಗಗಳು ಸಮವಾಗಿದ್ದಲ್ಲಿ ಸ್ವಸ್ತಿಕವೆಂದೂ ಕರೆಯಲ್ಪಡುವುದು.-ಅಲ್ಲದೆ ಶಿವಲಿಂಗದ ಮೇಲುಭಾಗದ ಶಿರೋವರ್ತನವು ನಿರ್ದಿಷ್ಟ ಮಾನ ವ್ಯತ್ಯಾಸವಾದ ಆಕಾರವಾದರೆ ಆಗ ಅವುಗಳಿಗೆ ವಿವಿಧ ಹೆಸರುಗಳು ಉಂಟಾಗುವುದು. ನಮ್ಮ ದೇವಸ್ಥಾನದಲ್ಲಿ ವಿಧರ್ಮಿಗಳು ಅಧಿಕಾರದಲ್ಲಿದ್ದಾಗ ಶಿವಲಿಂಗ ವ್ಯತ್ಯಾಸವಾಗಿರುವುದರಿಂದ ಲಿಂಗದ ವಿಚಾರವಾಗಿ ಅಧಿಕ ಬರೆಯುವುದು ಸರಿಯಾಗಿರುವುದಿಲ್ಲ. ಮೊತ್ತದಲ್ಲಿ ಈಗ ಪ್ರತಿಷ್ಠಿತ ಲಿಂಗವು ವರಪ್ರಸಾದಿಯಾಗಿರುವುದು.

ಉತ್ಸವಮೂರ್ತಿ - ಗಂಗಾಧರೇಶ್ವರ ಸ್ವಾಮಿ ನವರಂಗದ ಉತ್ತರ ಭಾಗದಲ್ಲಿ ಸನ್ನಿಧಿಯಿರುವುದು. ಚತುರ್ಭುಜ ಅಭಯವರದ ಹಸ್ತ, ಮೇಲಿನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎರಡು ಕೈಗಳಲ್ಲಿ ಹರಿಣ, ಡಮರುಗ ಹಿಡಿದಿರುವರು. ಕಿರೀಟಹಾರ ಕುಂಡಲಾದಿಗಳಿಂದ ಶೋಭಿತರು. ಮೂಲಮೂರ್ತಿಯ ಹೆಸರಿನಲ್ಲಿಯೇ ಉತ್ಸವಮೂರ್ತಿಯು ಕರೆಯಲ್ಪಟ್ಟಿರುವುದು. ಪಕ್ಕದಲ್ಲಿ ಉಭಯ ದೇವಿಯರಿರುವರು.

ದಕ್ಷಿಣಾಮೂರ್ತಿ - ಪ್ರಾಕಾರದಲ್ಲಿ ಅಂಗಲಿಂಗಗಳು ಇರುವ ಸ್ಥಳದಲ್ಲಿ ಯೋಗ ದಕ್ಷಿಣಾಮೂರ್ತಿ ಪ್ರತಿಷ್ಠಿತರಾಗಿರುವರು. ಈ ವಿಗ್ರಹ ಮೂರ್ತಿಯನ್ನು ದಳವಾಯಿ ದೊಡ್ಡರಾಜಯ್ಯನವರ ಪೌತ್ರರಾದ ಕಳಲೆ ವೀರರಾಜಯ್ಯನವರ ಪುತ್ರ ನಂಜರಾಜಯ್ಯನ ಸೇವಾರ್ಥವಾಗಿ ಪ್ರತಿಷ್ಠಿಸಲ್ಪಟ್ಟಿತು. ಕಾಲ ನಂಜರಾಜಯ್ಯನ ಮಗಳು ಪುಟ್ಟಮ್ಮಣ್ಣಿಯನ್ನು (ದೇವಾಜಮ್ಮಣ್ಣಿ)A.D. 1704ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರು ವಿವಾಹವಾದರು. ಈ ವಿಗ್ರಹಮೂರ್ತಿಯು A.D. 1736-1765 ಈ ಮಧ್ಯೆ ಪ್ರತಿಷ್ಠೆ ನಡೆದಿರಬೇಕು. ಶ್ರೀ.ಪ. ೨೯.

ದಕ್ಷಿಣಾಮೂರ್ತಿಯು ಲೋಹ ಮತ್ತು ಶಿಲಾಮೂರ್ತಿ ಎರಡೂ ಇರುವುದು. ಉತ್ಸವಮೂರ್ತಿ ಆಸೀನರೂಪ, ಕುಕ್ಕುಟಾಸನ, ಕತ್ತರಿಪಾದರೂಪ, ಯೋಗಪಟ್ಟಿಯಿಂದ ಮಂಡಿಗಳು ಬಿಗಿಯಲ್ಪಟ್ಟಿವೆ. ಚತುರ್ಭುಜ ಕೆಳಗಿನ ಎಡದ ಕೈಯಲ್ಲಿ ಪುಸ್ತಕ ಬಲದ ಕೈ ಉಪದೇಶಮುದ್ರೆ, ಮೇಲಿನ ಎಡದ ಕೈಯಲ್ಲಿ ವೀಣೆ, ಬಲದ ಕೈಯಲ್ಲಿ ಜಪಸರ, ಪ್ರಭಾವಳಿಯಿದೆ.

ಮೂಲ ಮೂರ್ತಿ ಉಪದೇಶಮುದ್ರೆಯೊಂದಿಗೆ ಜಪಸರವೂ ಇದೆ. ಮೇಲಿನ ಬಲದ ಕೈಯಲ್ಲಿ ಸರ್ಪವಿದೆ. ಎಡದ ಕೈ ವೀಣಾಪಾಣಿ. ಈ ಮೂರ್ತಿಯು ಬಿಲ್ವಮರದ ಕೆಳಗೆ ಯೋಗರೂಪವು.

ಅಂಗಲಿಂಗಗಳು - ಭಕ್ತರ ಇಷ್ಟಬಂದಂತೆ ಈ ಲಿಂಗಗಳು ಪ್ರತಿಷ್ಠೆಯಾಗಿವೆ. ಅವುಗಳಿಗೆ ನಾಮಕರಣವು ಲಿಂಗದಲ್ಲಿ ರೂಪವ್ಯತ್ಯಾಸವಿಲ್ಲದ್ದರಿಂದ ಅವರವರಿಗೆ ಇಷ್ಟಬಂದ ಹೆಸರಿನಿಂದ ಕರೆಯಬಹುದು. ಆ ರೀತಿಯಲ್ಲಿ - ಓಂಕಾರೇಶ್ವರ, ಸದ್ಯೋಜಾತ, ವಾಮದೇವ, ಈಶಾನ ಚೂಡಾನಾಥ, ಗೌತಮೇಶ್ವರ, ಪಾತಾಳೇಶ್ವರ, ಮಣಿಕರ್ಣಿಕೇಶ್ವರ, ಸಂವರ್ತೇಶ್ವರ, ಪಾತಾಲೇಶ್ವರ, ಅರುಣಾಚಲೇಶ್ವರ, ಆದಿಮುಕ್ತೇಶ್ವರ, ಅರ್ಕೇಶ್ವರ, ಆನಂದೇಶ್ವರ, ಕಪಿಲೇಶ್ವರ, ಕೌಂಡಿನ್ಯೇಶ್ವರ ಮುಂತಾಗಿ ಪ್ರತಿಷ್ಠಿಸಿರುವರು. (ಸುಮಾರು ೨೦ ಲಿಂಗಗಳು) ಈ ಅಂಗಲಿಂಗಗಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೃಹಗಳಲ್ಲೇ ಭಕ್ತವಿಗ್ರಹಗಳನ್ನು ತಂದಿಟ್ಟಿರುವರು.

ಪ್ರಾಕಾರದಲ್ಲಿನ ಭಕ್ತವಿಗ್ರ = ಮೂರ್ತಿಗಳು.

೧. ಮಾರರು ವಳಂಳ	ಶೂದ್ರರು
೨. ಸನಾತನ ಕರುಣಮಾನರು	
೩. ಕಲಿನಿತಿ	ಗಾಣಿಗರು
೪. ನಿರುದಾಶಾರ್ದೂಲರು	ಚೋಳಿ ಬ್ರಾಹ್ಮಣರು
೫. ಕಳಾನಾಥ	ಬ್ರಾಹ್ಮಣರು
೬. ಪ್ರತಾಪಸೂರ್ಯರು	ಸಾಮಾನ್ಯ ಅರಸ
೭. ಅಪ್ಪರು	?
೮. ಮನಕೋಜ	ಕುಳಾಳರು
೯. ಧರ್ಮಕೇತನರು	ಕ್ಷತ್ರಿಯರು
೧೦. ಮಾರ ರೋಮಯಾದಿ	ಬ್ರಾಹ್ಮಣರು
೧೧. ಮೂರ್ತಿನಾಥ	ವೈಶ್ಯರು
೧೨. ಗ....	?
೧೩. ಬಾಲರ್ಹರು	ಬ್ರಾಹ್ಮಣರು
೧೪. ನೀಲಕಂಠ	ಕುಂಬಾರರು
೧೫. ಹುತವಳಿ	ವೈಶ್ಯಸ್ತ್ರೀ

ಶೈವರಲ್ಲಿ ೬೪ ಜನ ಭಕ್ತರಿರುವರು. ಶ್ರೀ.ಪ. ೨೮

ಹೆಸರಿನಲ್ಲಿ ಅಕ್ಷರಗಳು ತಪ್ಪಿರಬಹುದು. ಸರಿಪಡಿಸಿಕೊಳ್ಳಬೇಕು.

ಅಮ್ಮನವರ ಸನ್ನಿಧಿ (ಪಾರ್ವತಿ ಅಮ್ಮನವರು) -

ಪಾರ್ವತಿ ಅಮ್ಮನವರು ಗೋಮುಖ ಪೀಠದ ಮೇಲೆ ಪದ್ಮಪೀಠವಿರುವುದು. ಆ ಪದ್ಮಪೀಠದ ಮೇಲೆ ಅಮ್ಮನವರು ಸ್ಥಿತರೂಪವು. ನಿಂತಿರುವಿಕೆ. ಸಮಭಂಗ, ಚತುರ್ಭುಜ, ಮೇಲಿನ ಎರಡು ಕೈಗಳಲ್ಲಿ ಪದ್ಮವು ಕೆಳಗಿನ ಕೈ ಅಭಯ ವರದಹಸ್ತ. ಕಿರೀಟಕುಂಡಲಾದಿಗಳಿಂದ ಅಲಂಕೃತವಾಗಿರುವುದು.

ಉತ್ಸವಮೂರ್ತಿಗೆ ಮನೋನ್ಮಣಿಯೆಂದು ಹೆಸರು. ತದ್ವತ್ ಮೂಲಮೂರ್ತಿ ರಕ್ಷಣೆಗಾಗಿ ಉತ್ಸವಮೂರ್ತಿ ಗಂಗಾಧರೇಶ್ವರ ಸನ್ನಿಧಿಯಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಿಜಯಮಾಡಿಸಿರುವರು.

(ವಲ್ಲಿ ದೇವಸೇನೆ ಸಮೇತ ಸುಬ್ರಹ್ಮಣ್ಯಸ್ವಾಮಿ ವಿಗ್ರಹ=ಮೂರ್ತಿ ಇರುವುದು)

ತಾಂಡವೇಶ್ವರ ಮೂರ್ತಿ - ಈ ಮೂರ್ತಿಯನ್ನು ಪ್ರತಿಷ್ಠಿಸಲು ಶಕ ೧೭೭೪ ಪ್ಲವ ಸಂ. ಜ್ಯೇಷ್ಠಶುದ್ಧ ೧೫ ರಲ್ಲಿ ಕಾಶ್ಯಪಗೋತ್ರ ಯಜು ಶಾಖಾ ಶಿವಭಟ್ಟಾಧ್ಯಕ್ಷರಾದ ನಂಜುಂಡಭಟ್ಟರ ಪುತ್ರರು ಶಿವರಾಮ ಪಂಡಿತರ ಸೇವೆ.

ಶ್ರೀ.ಪ. ೩೦

ಧರ್ಮಗಳು -

.ಶಕ ೧೪೩೯ ಧಾತು ಸಂ. ಮಾಘ ಬ. ೧೪ (A.D. 19-2--1517) ಶಿವರಾತ್ರಿಯ ದಿನ ಶ್ರೀಮನ್ ಮಹಾಸೇನಾಸಮುದ್ರ ಶಾಳುವಗಜಸಿಂಹ ವೀರಪೊಡೆಯರ ಮೊಮ್ಮಗ ರಾಮುಪೊಡೆಯರ ಕುಮಾರರೂ ಆದ ವೀರಪ್ಪೊಡೆಯರು ಶ್ರೀಗಂಗಾಧರೇಶ್ವರ ದೇವರಿಗೆ ದಿನಂಪ್ರತಿ ಪ್ರಾತಃಕಾಲದಲ್ಲಿ ನಾಲ್ಕುಪಡಿ ಅಕ್ಕಿ ಅನ್ನ (ದಧ್ಯೋದನ) ಒಂದು ಪಡಿ ಮೊಸರು, ಉಪ್ಪಿನಕಾಯಿ, ಎಲಕ್ಕಿ ಸಹ ದೇವರಿಗೆ ನಿವೇದನ ಮಾಡುವುದು.

ನಿವೇದನವಾದ ಆ ನಾಲ್ಕು ಪಡಿ ೪ ದಧ್ಯೋದನದಲ್ಲಿ (ಮೊಸರನ್ನ) ಮೂರುಪಡಿ ಅಕ್ಕಿ ಪ್ರಸಾದವನ್ನು ದೇಶಾಂತರಿ ಬ್ರಾಹ್ಮಣರಿಗೆ ಕೊಡುವುದು. ಉಳಿದ ಒಂದು ಪಡಿ ಅಕ್ಕಿ ಪ್ರಸಾದವನ್ನು ಅಡಿಗೆ ಮಾಡಿದ ಪರಿಚಾರಕರಿಗೆ ಕೊಡುವುದು.

ಇದಕ್ಕಾಗಿ ಹರಹಿನ ಹಳಿಯ ಬಯಲಲ್ಲಿ ಕೋಟೆವಾಳ್ ಸ್ಥಳದಲ್ಲಿ ಪೂರ್ವದಿಂದ ಸರ್ವಮಾನ್ಯವಾಗಿ ನಡೆದುಬಂದ ಹರಹಿನ ಕಾಲುವೆಯ ಕೆಳಗಣ ಶ್ರೀರಂಗಪುರದ ಮಹಾಜನಂಗಳು ಸೀತಾಪುರದ ಮಾಹಾ ಜನಂಗಳು, ಹರಹಿನ ಯೆಡೆಮಾನ್ಯದ ಮಹಾಜನಂಗಳು ಈ ಮೂರು ಸ್ಥಳದ ಮಹಾಜನಂಗಳಿಂದ ನಮಗೆ ಕ್ರಯವಾಗಿ ಬಂದ ಹತ್ತು ಖಂಡುಗ ಧಾನ್ಯ ವರಮಾನ ಬರುವ ಗದ್ದೆಯನ್ನು ಸಮರ್ಪಿಸಿದ ಧರ್ಮ. ಶ್ರೀ.ಪ. ೩೧

ಶಕ ೧೬೬೧ (1661) ಶಾರ್ವರಿ ಸಂ. ವೈಶಾಖ ಶು. ೧೫ರಲ್ಲಿ ಕಾರಗನ ಹಳ್ಳಿಯ ವೀರಪ್ಪೊಡೇರ ...ಜಯರಾಜನು ತನಗೆ ಧರ್ಮವಾಗಬೇಕೆಂದು ಮೃಗತೀರ್ಥದಲ್ಲಿ ತಾವು ಕಟ್ಟಿಸಿದ ಮಂಟಪಕ್ಕೆ ಶ್ರೀಗಂಗಾಧರೇಶ್ವರಸ್ವಾಮಿ ಉತ್ಸವ ಬಿಜಯ ಮಾಡಿಸಿದಾಗ ಚೆರಪು ನಿವೇದನ ಮಾಡಲು ಗದ್ಯಾಣ ೨೦೦ ಸಮರ್ಪಿಸಿ ಕ್ರಯಕ್ಕೆ ತೆಗೆದ ಗದ್ದೆಯಲ್ಲಿ ವರ್ಷಂಪ್ರತಿ ಬರುವ ವರಮಾನದಿಂದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ೇವರ ಸೇವೆಗೆ ಧರ್ಮ

ಶ್ರೀ.ಪ ೨೭

ಸ್ನಾನಘಟ್ಟ - ರಾಜಸೋಪಾನ - ಟೀಪುವಿನ ಅರಮನೆ ಇದ್ದ ಳ ಎಂದರೆ ಈಗ ಚಾಮರಾಜೇಂದ್ರ ಸತ್ರ, ಧರ್ಮಶಾಲೆ ಇರುವುದಕ್ಕೆ ತ್ತರಭಾಗ ಒಂದು ನೂರು ಗಜದೂರದಲ್ಲಿ ಕಾವೇರಿ ನದಿಗೆ ಹೋಗಲು ಂದು ಚಿಕ್ಕ ಕೋಟೆ ಬಾಗಿಲಿದ್ದಿತು. ೧೭೯೯ರ ಅನಂತರ ಕಾಲದಲ್ಲಿ ಮುಮ್ಮಡಿ ಷ್ಣರಾಜ ಒಡೆಯರು ಜನಗಳ ಸ್ನಾನ ಪಾನಕ್ಕೆ ಸೌಕರ್ಯವಾಗಿರಲೆಂದು ವೇರಿಗೆ ಕಾಶಿ ಕೆಲಸದ ಸೋಪಾನ ಘಟ್ಟವನ್ನು ಕಟ್ಟಿಸಿದರು. ಬಹು ಂದವಾಗಿದೆ.

ಈ ಸ್ನಾನ ಘಟ್ಟದ ಪಕ್ಕದಲ್ಲಿಯೇ ಒಂದು ಚಿಕ್ಕ ಗುಡಿಯನ್ನು ಕಟ್ಟಿಸಿ ದರಲ್ಲಿ ಅಮೃತಶಿಲಾರೂಪ ಶ್ರೀರಾಮದೇವರನ್ನೂ, ಸಾಧಾರಣ ಶಿಲೆಯಿಂದ ಂಜನೇಯ ಗಣಪತಿ ವಿಗ್ರಹಗಳನ್ನೂ ನಿರ್ಮಿಸಿ ಪ್ರತಿಷ್ಠಿಸಿದರು.

ಜಗ್ಗುವ ಸೇತುವೆ - ಶ್ರೀರಂಗನಾಥಸ್ವಾಮಿ ಗೋಪುರದ ಮುಂದೆ ಕ್ಷಣಕ್ಕೆ ೧೦೦ ಗಜ ದೂರದಲ್ಲಿ ಜಗ್ಗುವ ಸೇತುವೆ ಬಳಿಗೆ ಹೋಗುತ್ತೇವೆ. ಸೇತುವೆ ಒಂದು ಕಡೆಯಿಂದ ಇನ್ನೊಂದು ಕಡೆಯವರೆಗೆ ೧೧೨ ಅಡಿ ದ್ದ ಇರುವುದು. ಗೋಡೆಯ ದಪ್ಪ ೩ ಅಡಿ ಅಗಲವಿರುವುದು. ಇದರ ೀಲೆ ಮಧ್ಯಭಾಗದಲ್ಲಿ ನಿಂತು ಜಗ್ಗಿಸಿದರೆ ೨,೩ ಅಂಗುಲ ಜಗ್ಗುವುದಾಗಿದ್ದಿತು. ು ಕಾಲವನ್ನನುಸರಿಸಿ ೨.೭.೧೯೩೭ರಲ್ಲಿ ಒಡೆದು ಬಿದ್ದುಹೋಯಿತು.

ಈ ಆರ್ಚ್ ಸೇತುವೆಯನ್ನು ಫ್ರಾನ್ಸ್ ದೇಶದ ಇಂಜಿನೀಯರು ಹಾವಿಲಾಂಡ್ಸ್ ಎಂಬುವರು ಕಾವೇರಿ ನದಿಗೆ ಸೇತುವೆ ಕಟ್ಟಲು ದಾಹರಣೆಯಾಗಿ ಕಟ್ಟಿದನೆಂದು ಹೇಳುವರು. ಇದು ಕೇವಲ ದಂತಕಥೆ. ಸ್ತವವಾಗಿ ಈ ಇಂಜಿನೀಯರು ಬ್ರಿಟಿಷ್ ಸರಕಾರಕ್ಕೆ ಸೇರಿದವರು. ಮಾತಹತ ರ್ಯದಲ್ಲಿದ್ದವರು (1807-1808) ರಲ್ಲಿ ಈತನು ಮೈಸೂರಿನಲ್ಲಿ ರ್ನಮೆಂಟ್‌ಹೌಸ್ ಕಟ್ಟಿಸಿದನು. ಆ ಸಮಯದಲ್ಲಿ ಆರ್ಚ್ ಸೇತುವೆಯೂ ಲ್ಪಟ್ಟಿತು.

ಜಯಸ್ತಂಭ - ಊರಿಗೆ ಉತ್ತರಭಾಗದಲ್ಲಿ ಕಾವೇರೀ ನದಿಯು ರಾಗಿ ಒಡೆಯುವ ಸ್ಥಳದಲ್ಲಿರುವುದು. ಆಂಗ್ಲರಿಗೂ, ಮೈಸೂರಿನವರಿಗೂ ದ್ಧವಾದಾಗ ಆಂಗ್ಲೇಯರು ಕೋಟೆ ಒಡೆದು ಲಗ್ಗೆಹತ್ತಿ ಯುದ್ಧದಲ್ಲಿ ಮಸಿದ ಸ್ಥಳ. ಯುದ್ಧದಲ್ಲಿ ೧೭೯೯ರ ಯುದ್ಧದಲ್ಲಿ ಆಂಗ್ಲೇಯರು,

CC-0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾರತೀಯ ಯೋಧರು, ಸೈನ್ಯಾಧಿಕಾರಿಗಳು ಮಡಿದ ಜ್ಞಾಪಕಾರ್ಥವಾಗಿಯೂ, ಗೌರ್ನರ್‌ಜನರಲ್ ಆಗಿದ್ದ ಮಾರ್ಕ್ವಿಸ್ ವಿಲ್ಲಸ್ಲಿ. ಕೆ.ಪಿ. ಅವರ ಜ್ಞಾಪಕಾರ್ಥವಾಗಿಯೂ, ದಿವಾನ್. ಪೂರ್ಣಯ್ಯನವರು ಜಯಸ್ತಂಭವನ್ನು ನಿಲ್ಲಿಸಿದರು. ೧೮೦೨ರಲ್ಲಿ ಆರಂಭಿಸಿ ೧೮೦೪ರಲ್ಲಿ ಪೂರ್ಣಗೊಂಡಿತು. ಕೋಟೆಗೋಡೆಯ ಕೆಳಭಾಗದಲ್ಲಿ ಕಲ್ಲು ಕಟ್ಟಡ ೧೦ ಅಡಿ ಎತ್ತರವೂ ಅದರ ಮೇಲೆ ಇಟ್ಟಿಗೆ ಕಟ್ಟಡ ೮ ಅಡಿ ಎತ್ತರವಾಗಿಯೂ ಇರುವುದು.

ಶ್ರೀ.ಪ. ೫೩, ೫೪

ರಣಗಂಭ - ಉತ್ತರಭಾಗದಲ್ಲಿ ರಣಗಂಭವಿರುವುದು. ಆ ರಣಗಂಭವನ್ನು ಜೆ.ಸಿ.ವೆಬ್ ಜ್ಞಾಪಕಾರ್ಥವಾಗಿ ದಿವಾನ್ ಪೂರ್ಣಯ್ಯನವರು ನಿಲ್ಲಿಸಿದರು.

ಜೆ.ಸಿ.ವೆಬ್ ಮತ್ತು ಜನರಲ್ ಮೆಡೊ ಇವರು ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ಪ್ರಧಾನಿ ತಿರುಮಲರಾವ್ ಮತ್ತು ನಾಯಾಯಣರಾವ್ ಅವರ ರಾಯಭಾರದಂತೆ ಬ್ರಿಟಿಷ್ ಅಧಿಕಾರಿಗಳೊಡನೆ ಆದ ಒಪ್ಪಂದದಂತೆ ಹಿಂದಿನ ರಾಜಮನೆತನಕ್ಕೆ ರಾಜ್ಯ ಒಪ್ಪಿಸಬೇಕಾಗಿದ್ದಿತು. ಈ ವಿಷಯದಲ್ಲಿ ಜನರಲ್ ಮೆಡೋ ಮತ್ತು ಅಧಿಕಾರಿ ವೆಬ್‌ರವರು ಬಹುವಾಗಿ ಶ್ರಮಿಸಿದರು. ಜನರಲ್ ಮೆಡೋರವರು ಆಂಗ್ಲರು, ಪ್ರಧಾನಿ ತಿರುಮಲರಾವು, ನಾರಾಯಣರಾವು ಅವರೊಡನೆ ಆದ ಒಪ್ಪಂದದಂತೆ ನಡೆಯಲಿಲ್ಲವಾದ್ದರಿಂದ ರಾಜಕಾರಣ ಮತ್ತು ಯುದ್ಧ ನೀತಿಯನ್ನನುಸರಿಸಿ ತಮ್ಮ ಕೈಯಲ್ಲಿದ್ದ ಪಿಸ್ತೂಲಿನಿಂದ ಹೊಡೆದುಕೊಂಡು ಮರಣವನ್ನೈದಿದರು. ಅಧಿಕಾರಿ ವೆಬ್‌ರವರು ಯುದ್ಧದಲ್ಲಿ ಮರಣಿಸಿದುದರಿಂದ ಅವರ ಜ್ಞಾಪಕಾರ್ಥವಾಗಿ ಈ ರಣಗಂಭವು ಸ್ಥಾಪಿಸಲ್ಪಟ್ಟಿತು.

ಶ್ರೀ.ಪ.೫೨

ಸುಲ್ತಾನ್ ಬತೇರಿ (ಡನ್‌ಜನ್) ಕತ್ತಲೆ ಕೋಣೆಮನೆ -

ಶ್ರೀರಂಗನಾಥಸ್ವಾಮಿ ದೇವಸ್ಥಾನಕ್ಕೆ ಉತ್ತರ ಭಾಗದಲ್ಲಿ ಕೃಷ್ಣಗೇಟ್ ಎಡಭಾಗದಲ್ಲಿ ಸ್ವಲ್ಪದೂರದಲ್ಲಿದೆ. ಸುಮಾರು ೧೦೦ x ೪೦ ಚದರಡಿ ಸ್ಥಳ ಯುದ್ಧವಾಗಲಿ, ರಾಜಕೀಯವಾಗಲಿ ಅಧಿಕಾರಿ ಟೀಪುವಿಗೆ ವಿರೋಧವಾಗಿ ನಡೆದವರನ್ನೂ, ಯುದ್ಧ ಸೆರೆಯಾಳುಗಳನ್ನೂ ಕೂಡಿಹಾಕಿ ಅವರ ಕೈಕಾಲುಗಳನ್ನು ಸಂಕೋಲೆಗಳಿಂದ ಕಟ್ಟುವ ಸ್ಥಳ. ಕೋಟೆದಿಬ್ಬದಿಂದ ೨೦ ಮೆಟ್ಟಿಲು ಕೆಳಕ್ಕಿಳಿದು ಬಂದಲ್ಲಿ ಇದನ್ನು ನೋಡಬಹುದು. ಇಲ್ಲಿ ಆಂಗ್ಲ ಅಧಿಕಾರಿ ಕರ್ನಲ್ ಬೇಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವರು ಬಂದಿಯಾಗಿದ್ದರು. ಇದರ ಪಕ್ಕದಲ್ಲಿಯೇ ಫಿರಂಗಿ ಗುಂಡುಗಳನ್ನು ತಯಾರಿಸುತ್ತಿದ್ದರು. ಯುದ್ಧಕಾಲದ ಫಿರಂಗಿ ಸುಮಾರು ಹತ್ತು ಅಡಿ ಉದ್ದ ಬಾಯಿ ಮೂರಡಿ ಅಗಲದ ಫಿರಂಗಿ ಬಿದ್ದಿರುವುದನ್ನು ಕಾಣಬಹುದು.

ಕಳಲೆ ದಿಡ್ಡಿ ಬಾಗಿಲು - ಗಂಗಾಧರೇಶ್ವರ ಗುಡಿಗೆ ಉತ್ತರಪೂರ್ವದಲ್ಲಿ ಸ್ವಲ್ಪ ಅಷ್ಟು ಎತ್ತರವಿಲ್ಲದ ಕೋಟೆ ಬಾಗಿಲು ಇರುವುದು. ಇಲ್ಲಿ ಅರಮನೆ ಊಳಿಗದವರು ಮತ್ತು ರಾಜಧಾನಿ ಉತ್ತರಭಾಗದ ಜನರು ಈ ಮಾರ್ಗವಾಗಿ ಬಂದು ನದಿ ಸೇರುವರು. ಈ ಸ್ಥಳದಲ್ಲಿ ಎಂದರೆ ಒಳಗಿನ ಕೋಟೆ ಮತ್ತು ಹೊರಕೋಟೆ ಈ ಮಧ್ಯದಲ್ಲಿ ಟೀಪುವು ಸಿಕ್ಕಿಕೊಂಡು ತನ್ನ ಕೊನೆಯುಸಿರನ್ನೆಳೆದನು. ಈ ಸ್ಥಳದಲ್ಲಿ ೧೭೯೯ನೇ ದಿನ ಶತ್ರು ಸೈನ್ಯಗಳಿಂದ ಟೀಪುವಿನ ಸೈನ್ಯವು ಹಿಂದಕ್ಕೆ ತಳ್ಳಲ್ಪಡಲು ಟೀಪುವಿನ ಸೈನ್ಯವು ಎರಡನೇ ಕೋಟೆಯ ಮೇಲಿನಿಂದ ಕೆಳಗಿಳಿದು ಈ ಕೋಟೆಯ ದ್ವಾರದಿಂದ (ದಿಡ್ಡಿಬಾಗಿಲು) ಪಟ್ಟಣದೊಳಗೆ ಪ್ರವೇಶಿಸಿತು. ಟೀಪುವು ಈ ದ್ವಾರದ ಸಮೀಪಕ್ಕೆ ಬಂದಾಗ ಶತ್ರು ಸೈನ್ಯದ ಒತ್ತಡವು ಪ್ರಬಲವಾದ್ದರಿಂದ ಖಿಲ್ಲೇದಾರನು ಈ ಬಾಗಿಲನ್ನು ತೆರೆಯಲಾರದೆ ಸುಮ್ಮನಿದ್ದನು. ಈ ಮಧ್ಯೆ ಆಂಗ್ಲ ಸೈನಿಕರು ಮೂರನೆ ಕೋಟೆಗೋಡೆಯ ಮೇಲಿನಿಂದ ಬಂದು ಈ ಸ್ಥಳದಲ್ಲಿ ಕೆಳಕ್ಕಿಳಿದು ಪಟ್ಟಣದೊಳಗೆ ಪ್ರವೇಶಿಸಿ ಒಳಗಿನಿಂದ ಈ ದಿಡ್ಡಿ ಬಾಗಿಲಿನ ಬಳಿ ಬಂದರು. ಟೀಪುವು ಈ ಸ್ಥಳದಲ್ಲಿ ಎರಡು ಕಡೆಗಳಿಂದಲೂ ಶತ್ರುಸೈನ್ಯದ ಮಧ್ಯದಲ್ಲಿ ಸಿಕ್ಕಿಕೊಂಡು ಮುಂದಕ್ಕೂ ಹಿಂದಕ್ಕೂ ಹೋಗಲಾರದೆ ಇರುವ ಸಮಯದಲ್ಲಿ ಗುಂಡಿನ ಪೆಟ್ಟಿನಿಂದ ಗಾಯಗೊಂಡನು. ಆದರೆ ಮುಂದುವರಿದ ಸೈನಿಕರು ಟೀಪುವಿನ ವಿಷಯ ತಿಳಿಯದೆ ಈ ದಿಡ್ಡಿಯ ಬಾಗಿಲಿನಿಂದ ಒಳಹೊಕ್ಕು ಅರಮನೆಯ ಕಡೆಗೆ ಧಾವಿಸಿದರು. ಒಬ್ಬ ಆಂಗ್ಲ ಸೈನಿಕನು, ಟೀಪುವು ಯಾವ ರೀತಿಯಲ್ಲಿ ನಿಶ್ಚೇಷ್ಟಿತನಾಗಿ ಬಿದ್ದಿರುವ ಸ್ಥಳವನ್ನು ತಿಳಿಸಿದಮೇಲೆ ಎಲ್ಲರಿಗೂ ತಿಳಿಯಿತು. ಹೇಗೆಂದರೆ ಮೈಸೂರು ಸರದಾರರು ಬಂಗಾರದ ಪಟ್ಟಿಯನ್ನು ಸೊಂಟದಲ್ಲಿ ಉಪಯೋಗಿಸುವರೆಂದು ತಿಳಿದು ಇವನೂ (ಟೀಪು) ಒಬ್ಬ ಸರದಾರನೆಂದು ಭಾವಿಸಿ ಅವನ್ನ ಸೊಂಟದಲ್ಲಿದ್ದ ಬಂಗಾರದ ಪಟ್ಟಿಯನ್ನು ತೆಗೆಯುವಾಗ ತನ್ನ ಕೈಯಲ್ಲಿದ್ದ ಕತ್ತಿಯಿಂದ ಆಂಗ್ಲ ಸೈನಿಕನ ಮೇಲೆ ಆಕ್ರಮಣ ಮಾಡಿದಾಗ ಆಂಗ್ಲ ಯೋಧನು ತನ್ನ ಕೈಯಲ್ಲಿದ್ದ ಪಿಸ್ತೂಲಿನಿಂದ ಹೊಡೆದಾಗ ಇಲ್ಲಿ ಟೀಪುವು ಮರಣಿಸಿದನು. ಬ್ರಿಟಿಷ್

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸರದಾರರು ಟೀಪುವನ್ನು ಹುಡುಕುತ್ತಿರುವಾಗ ಪ್ರಾಣೋತ್ಕ್ರಮಣದಲ್ಲಿ ಟೀಪುವಿನ ಕಾರ್ಯದರ್ಶಿಯು ಟೀಪುವು ಬಿದ್ದಿರುವ ಸ್ಥಳವನ್ನು ತೋರಿಸಿದ್ದ ಟೀಪುವು ಸುಲಭವಾಗಿ ಕಂಡುಹಿಡಿಯಲ್ಪಟ್ಟನು. ಅವನ ಕತ್ತಿನಲ್ಲಿ ಜಯ ಗುರುತಾದ ತಾಯಿತವು ಇದ್ದಿತು. ಅನಂತರ ಟೀಪುವಿನ ಶರೀರವನ್ ಪಾಲ್ಕಿಯಲ್ಲಿಟ್ಟು ಅರಮನೆಗೆ ಕಳುಹಿಸಿದರು.

ಇಲ್ಲಿ ಒಳಗಿನ ಕೋಟೆ ಪ್ರಾಕಾರದ ಗೋಡೆಯು ಸುಮಾರು ೧೮೦೭ರ ಸರದಾರ ವಿಲ್ಲೆಸ್ಲಿಯ ಆಜ್ಞೆಯಿಂದ ಕೆಡವಲ್ಪಟ್ಟಿತು. ಈ ಸ್ಥಳದಲ್ಲಿ ಉದ್ದಕ್ಕೂ ಹುಣಿಸೇಮರವನ್ನು ನೆಡಿಸಿದನು. M.A.R. 1937. page 60

ಎಮಾನ್ಸ್‌ಡಂಜನ್ (ನೆಲಮಾಳಿಗೆ) -

ಕೋಟೆಯ ಈಶಾನ್ಯ ಭಾಗದಲ್ಲಿ ಬಹುಎತ್ತರವಿಲ್ಲದ ನೆಲಮಾಳಿ ಇರುವುದು. ಸುಮಾರು ೪೫ x ೩೨ ಚದರಡಿ ಇದೆ. ಸುಲ್ತಾನ ಬತೇರಿಯಂತೆಯೇ ಇರುವುದು. ೧೮೯೫ರಲ್ಲಿ ಥಾಮಸ್ ಇನ್‌ಮಾನ ಇಂಜನೀಯರು ಇದನ್ನು ಕಂಡುಹಿಡಿದರು. ಇಲ್ಲಿಯೂ ಸಹ ಯುದ್ಧ ಕೈದಿಗಳನ್ ಸೆರೆ ಇಡುತ್ತಿದ್ದರು. ಈ ಸ್ಥಳದಲ್ಲಿ ಪ್ರಸಿದ್ಧ ಮಹಾರಾಷ್ಟ್ರ ಧೋಂಡಿಯನಾಗ ಅವರನ್ನು ಟೀಪುವು ಸೆರೆಯಲ್ಲಿಟ್ಟಿದ್ದನು. ೧೭೯೯ರ ಯುದ್ಧಕಾಲದಲ್ಲಿ ಹೇಗೋ ತಪ್ಪಿಸಿಕೊಂಡು ಓಡಿಹೋದನು. ಅನಂತರ ಕಾಲದಲ್ಲಿ ಮೈಸೂರು ದೇಶ ಉತ್ತರಭಾಗದಲ್ಲಿ ಪೂರ್ಣಯ್ಯನವರ ಕಾಲದಲ್ಲಿ ಕಿರುಕೊಳ ಕೊಟ್ಟನು. ಇದರಿಂ ಸಮಯನೋಡಿ ಇವನನ್ನು ಪೂರ್ಣಯ್ಯನವರು ಮತ್ತು ಆಂಗ್ಲ ಸರದಾರ ವೆಲ್ಲೆಸ್ಲಿ ಅವರು ಸೇರಿ ಹಿಡಿದರು. ಟೀಪುವು ಈ ಧೋಂಡಿಯನನ್ನು ಬಲಾತ್ಕಾರವಾಗಿ ತನ್ನ ಮತಕ್ಕೆ ಸೇರಿಸಿಕೊಂಡಿದ್ದನು. ತದನಂತರ ಕಾಲದಲ್ಲಿ ಧೋಂಡಿಯನು ತನ್ನ ಹಿಂದೂ ಮತವನ್ನು ಸೇರಿಕೊಂಡನು. M.A.R. p.61

ಪೇಟೆ ಆಂಜನೇಯಸ್ವಾಮಿ - (ನಾಮದಕಟ್ಟೆ)

ಶಕ ೧೭೨೪ ದುರ್ಮತಿ ಸಂ. ಚೈತ್ರ ಶುದ್ಧ ೧. ೧೫.೩.೧೮೦೧ ರಲ್ಲಿ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಶ್ರೀರಂಗಪಟ್ಟಣ, ನಗರ, ಚನ್ನಪಟ್ಟಣ ಮತ್ತು ಇತರ ಸ್ಥಳಗಳು, ಉಭಯ ಅಷ್ಟಗ್ರಾಮ ಮುಂತಾದ ಗ್ರಾಮಗಳಲ್ಲಿರುವ ನಾಯಿಂದರುಗಳು, ಓಲಗದವರು, ಅಕ್ಕಸಾಲಿಗಳು, ಕೋಮಟಿಗಳು, ಮುಂತಾದ ೧೮ ಜಾತಿಯವರ ಮನೆಗಳಲ್ಲಿ ನಡೆಯುವ ಶುಭಶೋಭನಗಳಲ್ಲಿ ಓಲಗ ಮಂಗಳವಾದ್ಯ ಮಾಡಿದಾಗ ಬರುವ ದ್ರವ್ಯದಲ್ಲಿ ಒಂದು ಭಾಗ ನರಮಕಟ್ಟೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆಂಜನೇಯಸ್ವಾಮಿಗೆ ಸಮರ್ಪಿಸಿ ಬರುವುದಾಗಿ ಒಪ್ಪಿ ಬರೆದ ಧರ್ಮಶಾಸನ.

ಶ್ರೀ.ಪ.ಶಾ. ೩೬,೩೭.

ಚಿಕ್ಕದೇವರಾಜರ ಕಾಲದಲ್ಲಿ ಮಾದೇಶ್ವರ, ಬಸವೇಶ್ವರ, ವೀರಭದ್ರ, ಭೈರವ ದೇವರು ಮುಂತಾದ ದೇವತೆಗಳ ದೇವಸ್ಥಾನ ಗುಡಿಗಳು ಪ್ರತಿಷ್ಠಿತವಾಗಿದ್ದವು. ವಿಧರ್ಮಿಗಳು ಅಧಿಕಾರದಲ್ಲಿದ್ದಾಗ ೧೭೯೯ ಯುದ್ಧಪೂರ್ವಭಾವಿಯಾಗಿ ಈ ದೇವಾಲಯಗಳು ನಾಶಮಾಡಲ್ಪಟ್ಟವು. ಈಗ ಯಾವ ಗುಡಿಗಳೂ ಕಾಣಬರುವುದಿಲ್ಲ.

ಕಾಳಮ್ಮ ಮತ್ತು ಕಮಠೇಶ್ವರ ದೇವಸ್ಥಾನ - ಕಾಳಮ್ಮನ ಗುಡಿಯಲ್ಲಿರುವ ತಾಂಡವೇಶ್ವರ ಮೂರ್ತಿಯನ್ನು ಶಕ ೧೭೭೪ ಪರೀಧಾವಿ ಸಂ. ಮಾರ್ಗಶಿರ ಶುದ್ಧ ೧೦ (21-12-1852) ಮುಮ್ಮಡಿ ಕೃಷ್ಣರಾಜ ಒಡೆಯರ ಪಾದಚಾರಕ ಶಿಷ್ಟಬ್ರಹ್ಮ ವಂಶಸ್ಥ ಖಾಸ ಬೊಕ್ಕಸದ ಲಿಂಗಾಚಾರಿಯ ಮಗ ರಂಗಾಚಾರಿ ಮತ್ತು ಮಯ ವಂಶಸ್ಥನಾದ ಕೃಷ್ಣಮಾಚಾರಿಯ ಮಗ ವೆಂಕಟರಮಣಾಚಾರಿಯು ತಾಂಡವೇಶ್ವರ ಮೂರ್ತಿಯನ್ನು ನಿರ್ಮಿಸಿ ಸಮರ್ಪಿಸಿದ ಧರ್ಮ. ಈ ವೇಂಕಟರಮಣಾಚಾರಿಯು ತಾಂಡವಮೂರ್ತಿ ಮತ್ತು ಶಿವಕಾಮಿನೀ ಎಂಬ ವಿಗ್ರಹವನ್ನೂ ನಿರ್ಮಿಸಿ ಸಮರ್ಪಿಸಿರುವುದಾಗಿಯೂ ತಿಳಿದು ಬರುತ್ತದೆ.

ಶ್ರೀ.ಪ.೪೨,೪೩

ಶಕ ೧೭೮೭ ರಕ್ತಾಕ್ಷಿ ಸಂ. ಭಾದ್ರಪದ ಶುದ್ಧ ೧೩ ರಲ್ಲಿ ಶ್ರೀಮತ್ಕಾಳಿಕಾಂಬಾ 'ಕಮಠೇಶ್ವರ' ಸನ್ನಿಧಿ ಭಾಗಿಲವಾಡಕ್ಕೆ ಹಿತ್ತಳೆ ತಗಡಿನ ಅಲಂಕಾರವನ್ನು ಸುಪರ್ಣಸ ಗೋತ್ರ ಕಾತ್ಯಾಯನಸೂತ್ರ ಪ್ರಣಮಶಾಖೆಗೆ ಸೇರಿ ಈಶಾನ್ಯ ಪ್ರವರೋತ್ಪನ್ನರಾದ ಯಜಮಾನ ಗೋಪಾಲಯ್ಯನ ಕುಮಾರ ಲಕ್ಕನಾಚಾರ್ಯರ ಸೇವಾರ್ಥ ಧರ್ಮ.

ಶ್ರೀ.ಪ.೩೯

ಮೇಲಿನ ದೇವಸ್ಥಾನದಲ್ಲಿ ದೇವರಿಗಾಗಿ ಉಪಯೋಗಿಸುವ ತಟ್ಟೆ ಚೊಂಬು ಪಾತ್ರೆಗಳನ್ನು ಕರಪ್ಪುಚೆಟ್ಟಿ ಎಂಬುವರ ಸೇವಾರ್ಥ ಧರ್ಮ.

ಶ್ರೀ. ಪ. ೪೦,೪೧

ಮಾರಮ್ಮನ ಗುಡಿ - ಈ ಗುಡಿಯ ಜೀರ್ಣೋದ್ಧಾರವನ್ನು ಶಕ ೧೭೮೪ ದುಂದುಭಿ ಸಂ. ಜ್ಯೇಷ್ಠ ಶುದ್ಧ ಸ್ಥಿರವಾರ (೩.೧.೫.೧೮೬೨) ರಲ್ಲಿ ಶ್ರೀರಂಗಪಟ್ಟಣ, ಸಣ್ಣನರಕೋಟೆ, ಗಂಜಾಂ, ...ಗ್ರಾಮ, ಸಕಲ ಕೋಮಿನವರೂ ಸೇರಿ ಸಹಕರಿಸಿದ ದ್ರವ್ಯದಿಂದ ಹನುಮಂತಯ್ಯನ ಮಗ ಬಿಲ್ಲೆ ತಿಮ್ಮಯ್ಯನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಖಾಂತರ, ನೂತನವಾಗಿಯೂ, ಜೀರ್ಣೋದ್ಧಾರವಾಗಿಯೂ ಮಾಡಿ, ಅಲ್ಲದೆ ನಿತ್ಯಪೂಜೆ ತಪ್ಪದೆ ನಡೆಯಲು ಧರ್ಮ. ಈ ದೇವಸ್ಥಾನದ ರಕ್ಷಣಾಕಾರ್ಯ ದುಬಾಷಿ ಖಗನ ವಂಶಸ್ಥರು ನಡೆಸಿಕೊಂಡು ಬರುವುದು. ಶ್ರೀ.ಪ. ೪೪೪

ಪೇಟೆ ಶ್ರೀರಾಮದೇವರ ಗುಡಿ - ಈ ದೇವಸ್ಥಾನದಲ್ಲಿ ಶಾಸನವೊಂ ದಿರುತ್ತೆ. ಶಕ ೧೪೩೫ ಧಾತು ಸಂ. ಶ್ರಾವಣ ಶುದ್ಧ ೯.ಎಂದಿರುವುದು. ಇಲ್ಲಿ ಕಾಲ ಸ್ವಲ್ಪ ತಪ್ಪಾಗಿದೆ. ಶಕ ೧೪೩೭ ಎಂದಿರಬೇಕು. ಆಗ ಕಾಲ A.D. 1515 ಆಗುವುದು. ಆದ್ದರಿಂದ ಈ ದೇವಸ್ಥಾನ ಆ ಕಾಲಕ್ಕೂ ಹಿಂದಿನದೆಂದು ತಿಳಿದುಬರುವುದು. ಶ್ರೀ.ಪ. ೩೬

ಹನುಮಂತದೇವರ ಮಂಡಪ - ಶಕ ೧೫೮೬ ಶೋಭಕೃತು ಸಂ. ಫಾಲ್ಗುನ ಬಹುಳ ೧೦ ರಲ್ಲಿ, ಮೈಸೂರು ಸಿಂಹಾಸನಾಧೀಶ್ವರ ಶ್ರೀಮದ್ದೇವರಾಜ ಒಡೆಯರು ಪೃಥ್ವಿರಾಜ್ಯಂಗೈಯುತ್ತಿರಲು ಎಂದಿದ್ದೆ.

ಈ ಶಾಸನದ ಕಾಲ ೧೨.೩.೧೬೬೪. ಆದ್ದರಿಂದ ಅದಕ್ಕೆ ಹಿಂದೆಯೇ ಈ ದೇವಸ್ಥಾನವು ಪ್ರತಿಷ್ಠೆಯು.

ಹರಹಿನ ರಾಮಸ್ವಾಮಿಯ ಮಂಡಪ - ಶ್ರೀರಂಗಪಟ್ಟಣದ ಮಧ್ಯೆ (ಊರಮುಂದೆ) ಹೊಸದಾಗಿ ಮಂಡಪವನ್ನು ಕಟ್ಟಿಸಿ ಅಲ್ಲಿ ಹನುಮಂತ ದೇವರ ವಿಗ್ರಹವನ್ನು ಪ್ರತಿಷ್ಠಿಸಿ ಆ ಹನುಮಂತ ದೇವರ ಪೂಜಾನಿವೇದನಗಳಿಗೆ ನಾಲ್ಕು ವರಹ ವರಮಾನವುಳ್ಳ ಬಿದ್ದಲು ಭೂಮಿ ಕೆರೆ ಕೆಳಗೆ ಎರಡುವರಹ ವರಮಾನವುಳ್ಳ ಗದ್ದೆ ಸಮರ್ಪಿಸಿದ ಧರ್ಮ. ಅಲ್ಲದೆ ಈ ಮಂಡಪಕ್ಕೆ ಶ್ರೀರಂಗನಾಥಸ್ವಾಮಿಯು ಶ್ರೀರಾಮನವಮಿ ಉತ್ಸವ ನಡೆಯುವಂತೆ ಧರ್ಮ.

ಶ್ರೀ.ಪ.ಶಾ.೨೩ ತಾಂಮ್ರದ ಶಾಸನ.

ಪಾರ್ಶ್ವನಾಥ ಬಸ್ತಿ - ಊರಿನ ಮಧ್ಯದಲ್ಲಿರುವುದು ಗರ್ಭಗೃಹ, ಶುಕನಾಸಿ ನವರಂಗವಿದೆ. ನವರಂಗದ ಕಂಭಗಳು ಕೆಳಭಾಗ ಚತುರಶ್ರವಾಗಿದ್ದು ಮೇಲಿನ ಭಾಗ ಅಷ್ಟಾಶ್ರವಾಗಿರುವುದು. ಅದರ ಮೇಲೆ ವೃತ್ತಾಕಾರವು. ಮುಖಮಂಡಪ. ಅನಂತರ ಕಟ್ಟಲ್ಪಟ್ಟಿದ್ದೆಂದು ಕಾಣಬರುವುದು. ಅರ್ಥಾತ್ ಎಲ್ಲಿಂದಲೋ ಆ ಕಲ್ಲುಗಳನ್ನು ತಂದು ಇಲ್ಲಿ ಸೇರಿಸಿ ಕಟ್ಟಿರುವಂತಿದೆ. ದೇವಸ್ಥಾನವು ಸುಮಾರು ೫೦ x ೩೦ ಚದರಡಿ ಇರಬಹುದು. ಸುಮಾರು ಎ.ಡಿ. ೧೪೦೦ ಹಿಂದಿನದಿರಬಹುದು. ಮಳೆಯ ನೀರು ಸಾರಾಗವಾಗಿ ಹರಿದುಹೋಗಲು ಉಘಾದೇವಾಲಯಗಳಂತೆ ಇಳಿಜಾರಾಗಿ ಕಲ್ಲಿನಿಂದಲೇ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಚ್ಚಿರುತ್ತಾರೆ. ದೇವಸ್ಥಾನದ ಒಳಗೆ ಪ್ರತಿಷ್ಠಿತವಾಗಿರುವ ಮೂರ್ತಿಯು ಕೃಷ್ಣವರ್ಣದಿಂದ ಕೂಡಿರುವುದು. ಸುಮಾರು ಒಂದಡಿ ಎತ್ತರವಿರುವುದು. ನವರಂಗದಲ್ಲಿ ಮೂರು ಪಾರ್ಶ್ವನಾಥ ಮೂರ್ತಿಗಳಿವೆ. ಎರಡು ಶಿಲಾ ಶಾಸನಗಳಿವೆ. ಅದರಲ್ಲಿ ಚಿತ್ರರೂಪಗಳಿವೆ. ಅದರಲ್ಲಿ ದೊಡ್ಡದು ೧೧ನೆಯ ಶತಮಾನದ್ದು. ಆ ಶಾಸನ ಬರವಣಿಗೆಯ ಮೇಲೆ ಜಿನಪುರುಷ ಯೋಗಾಸನರೂಪದಲ್ಲಿರುವುದು. ಅದೇ ಇನ್ನೊಂದು ಚಿಕ್ಕ ಶಾಸನ ಹಲಗೆಯಲ್ಲಿ ಬರೆದಿರುವುದು. ಈ ಮೂರ್ತಿ ಮಾಸಿ ಹೋಗಿರುವುದರಿಂದ ಓದುವುದಕ್ಕಾಗುವುದಿಲ್ಲ.

ಆದೀಶ್ವರ ಬಸದಿ - ಶಕ ೧೫೮೮ ಪರಾಭವ ಸಂ. ಆಷಾಢ ಶುದ್ಧ ೭, (28-6-1666) ಶ್ರೀರಂಗಪಟ್ಟಣದ ಆದೀಶ್ವರ ಭಂಡಾರಕ್ಕೆ ಚಾರುಕೀರ್ತಿ ಪಂಡಿತಾಚಾರ್ಯ ಶಿಷ್ಯರಾದ ನಾಯಣ್ಣಗಳು, ವಾಜಯ್ಯನವರು ಗದ್ಯಾಣ ೨೮೮ ಇತರ ಎಲ್ಲವನ್ನೂ ಸೇರಿಸಿ ಮೊತ್ತ ೩೮೩ ಸಮರ್ಪಿಸಿ ಅದರಿಂದ ಬರುವ ವೃದ್ಧ್ಯಂಶದಿಂದ ಅಷ್ಟಾಹ್ನಿಕದ ಧರ್ಮವನ್ನು ನಡೆಸುವುದು. ಈ ಧರ್ಮವನ್ನು ಶ್ರೀ ಸಿತಾಳಮಳಿಗೆಯವರು ನಡೆಸಿಕೊಂಡು ಬರುವಂತೆ ಧರ್ಮ

ಇಲ್ಲಿಯ ಶಾಸನದ ಕಾಲ ಎ.ಡಿ. ೧೬೬೬ ಆದರೆ ಆಗ ಈ ಆದೀಶ್ವರ ಬಸದಿ ಆ ಕಾಲಕ್ಕೂ ಹಿಂದಿನದು. ವಿಶಾಲವಾದ ಈ ಬಸದಿಯಲ್ಲಿ ೨೪ ತೀರ್ಥಂಕರರ ಮೂರ್ತಿಗಳು ಪ್ರತಿಷ್ಠಿತವಾಗಿವೆ. ಶ್ರೀ.ಪ. ೩೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಮನೆ -

• ಶ್ರೀರಂಗನಾಥಸ್ವಾಮಿಯ ದೇವಸ್ಥಾನದಿಂದ ಪೂರ್ವಕ್ಕೆ ಸುಮಾರು ೫೦೦ ಗಜ ದೂರದಲ್ಲಿ ಟೀಪುವಿನ ಅರಮನೆ ಇದ್ದಿತು. ಒಂದು ಕಾಲದಲ್ಲಿ ಅತಿ ವೈಭವದಿಂದ್ದಿದ್ದ ಕಟ್ಟಡ ಭವನವು ಈಗ ಪಾಳಾಗಿ ಗೋಡೆಗಳು ಬಿದ್ದು. ಮಣ್ಣು ಗುಡ್ಡೆಯಾಗಿದೆ. ಇಲ್ಲಿ ಟೀಪುವು ವಾಸವಾಗಿದ್ದನು. ಈ ಕಟ್ಟಡವನ್ನು ೧೮೦೭ ಅಥವಾ ೧೮೦೯ರಲ್ಲಿ ಆಂಗ್ಲ ಅಧಿಕಾರಿ ಕರ್ನಲ್ ವೆಲ್ಲೆಸ್ಲಿ ಅವರ ಆಜ್ಞೆಯಂತೆ ನೆಲಸಮ ಮಾಡಲಾಯಿತು. ಆ ಕಟ್ಟಡದ ಮರದ ಕಂಭಗಳನ್ನು ಮೈಸೂರು ರಾಜಧಾನಿ ಅರಮನೆಗೆ ಉಪಯೋಗಿಸಿರುವುದು. ಮೈಸೂರು ಅರಮನೆಯು ಪಶ್ಚಿಮಾಭಿಮುಖವಾಗಿದ್ದಿತು. ಅರಮನೆಯ ಮುಂಭಾಗ ತೆರೆದ ವಿಶಾಲ ವರಾಂಡ ರೂಪವಾಗಿದ್ದಿತು. (M.A.R. 1935- page 59, para 14)

ಹೈದರ ನಾಯಕನ ಅರಮನೆ - ಹೈದರ ನಾಯಕನು ಅಧಿಕಾರಕ್ಕೆ ಬಂದಾಗ ಸುಮಾರು ೧೭೬೧ ಕಾಲದಲ್ಲಿ ತನಗಾಗಿ ಒಂದು ಭವನವನ್ನು ಕಟ್ಟಿಸಿದನು. ಅದಕ್ಕೆ ಡಿ.ಲ.ಕೋಕ್ ಅರಮನೆ ಎಂದು ಹೆಸರಿಟ್ಟನು. ಇದು ಕೋಟೆಯ ಒಳಗಿದ್ದಿತು. ಅರಮನೆ ಸುತ್ತಲೂ ಆವರಣವಿದ್ದಿತು. ಈ ಅರಮನೆಯ ಅನೇಕ ಭಾಗಗಳು ರಾಜಕೀಯ ಕಾರಣದಿಂದ ನಾಶಮಾಡಲ್ಪಟ್ಟವು. ಅರಮನೆ ಇದ್ದ ಸ್ಥಳದಲ್ಲಿ ಈಗ ಗಂಧದ ಮರಗಳನ್ನು ಶೇಖರಿಸಿರುವ ಸ್ಥಳವನ್ನಾಗಿಯೂ, ಚಾಮರಾಜ ಒಡೆಯರ ಸ್ಮಾರಕಭವನವೆಂದೂ ಕರೆಯುವ ಕಟ್ಟಡವಿರುವುದು.

ಅರಮನೆಯಲ್ಲಿದ್ದ ಐಶ್ವರ್ಯವನ್ನೆಲ್ಲಾ ಕೊಳ್ಳೆಹೊಡೆದು ಅಲ್ಲಿದ್ದ ಅಪೂರ್ವ ಅಮೂಲ್ಯ ಗ್ರಂಥಗಳನ್ನು ನಾಶಮಾಡಿದರು. ಕಟ್ಟಡವು ನಾಶವಾದಮೇಲೆ ಆ ಸ್ಥಳದಲ್ಲಿ ಫಿರಂಗಿ ತಯಾರಿಸುವ ಕಾರ್ಖಾನೆ ಮಾಡಿದರು.

ಟೀಪುವಿನ ಅರಮನೆ - ಕೋಟೆಯ ಹೊರಗೆ ಈಗ ಲಾಲ್‌ಬಾಗ್ ಎಂದು ಕರೆಯುವ ಸ್ಥಳದಲ್ಲಿ ಟೀಪುವಿನ ಅರಮನೆ ಇದ್ದಿತು. ಈಗ ಯಾವುದೂ ಇರುವುದಿಲ್ಲ. ರಾಜಕೀಯ ಕಾರಣಗಳಿಂದ ಎಲ್ಲವೂ ನಾಶಮಾಡಲ್ಪಟ್ಟಿತು. ಅರಮನೆಯು ಕೇವಲ ಮಣ್ಣಿನ ಗೋಡೆಯಿಂದ ಕಟ್ಟಲ್ಪಟ್ಟಿತ್ತು. ಆದಗೆ ಮಣ್ಣಿನ ಗೋಡೆ, ಕಟ್ಟಡದ ಬಿಗಿ, ಅಂದ, ಶಿಲ್ಪಕಲಾ ಅಲಂಕಾರ ಆಕರ್ಷಕವಾಗಿದ್ದಿತು

ವಿಶಾಲವಾದ ಕಟ್ಟಡ ಸ್ಥೂಲವಾದ ಕಲ್ಲಿನ ಮತ್ತು ಮಣ್ಣಿನಿಂದ ಕಟ್ಟಿದ ಕಟ್ಟಡ. ಹೊರಗಿನಿಂದ ನೋಡಲು ಅಷ್ಟು ಆಕರ್ಷಕವಿಲ್ಲದಿದ್ದರೂ, ಕೆಲವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೊಠಡಿಗಳು ಅಲಂಕಾರದಿಂದ ಕೂಡಿದ್ದರೂ ಬೆಳಕು ಬರಲು ಕಿಟಕಿಗಳು ಸರಿಯಾಗಿರಲಿಲ್ಲ. ಟೀಪುವಿನ ಸ್ವಂತ ಕೊಠಡಿಯೂ ಮೂರು ಕಡೆಯಿಂದಲೂ ಮುಚ್ಚಲ್ಪಟ್ಟು ಒಂದು ಕಡೆ ಮಾತ್ರ ದ್ವಾರವಿದ್ದಿತು. ಇತರ ಮೂರು ಕಡೆಯಲ್ಲೂ ಟೀಪುವು ಆಸೆಪಟ್ಟ ಸಾಮಾನುಗಳು ಶೇಖರಿಸಲ್ಪಟ್ಟಿದ್ದವು. ಆದರೆ ಈ ಸಾಮಾನುಗಳು ವ್ಯಾಪಾರ ದೃಷ್ಟಿಯಲ್ಲಿ ಶೇಖರಿಸಲ್ಪಟ್ಟಿದ್ದವು.

ಟೀಪುವಿನ ಸ್ವಂತ ವಾಸಸ್ಥಳ - ಎರಡಂತಸ್ತಿನ ಕಟ್ಟಡ. ಕಟ್ಟಡದ ಮುಂದೆ ವರಾಂಡ, ಕಟ್ಟಡಕ್ಕೆ ಉಪಯೋಗಿಸಿದ ಮರ ಯಾವುದಕ್ಕೂ ಬಣ್ಣವಿರಲಿಲ್ಲ. ಹಿಂಭಾಗದಲ್ಲಿ ಅನೇಕ ಚಿಕ್ಕ ಚಿಕ್ಕ ಕೊಠಡಿಗಳು. ಆ ಕೊಠಡಿಗಳಲ್ಲಿ ಅವನು ಆಸೆಯಾಗಿ ಸಂಗ್ರಹಿಸಿದ್ದ ಪದಾರ್ಥಗಳು. ನಾಲ್ಕನೇ ಭಾಗದಲ್ಲಿ ಒಂದು ಕೊಠಡಿಯುಂಟು. ಆ ಕೊಠಡಿಯಲ್ಲಿ ಕುಳಿತು ರಾಜಕೀಯ ವಿಷಯವನ್ನು ಬರೆಯುವುದು ಮತ್ತು ಅದೇ ಸ್ಥಳದಲ್ಲಿ ತನ್ನ ಮಂತ್ರಿಗಳೊಂದಿಗೆ ಸಮಾಲೋಚನೆ ಮಾಡುವುದಾಗಿದ್ದಿತು. ಆ ಪಡಸಾಲೆಯು ೭೦ ಅಡಿ ಉದ್ದ ೪೦ ಅಡಿ ಅಗಲವಾಗಿದ್ದಿತು. ಗೋಡೆಗಳು ವರ್ಣರಂಜಿತ ಚಿತ್ರಗಳಿಂದ ತುಂಬಿರುವುದು. ಅದರ ಮೇಲೆ ಕಬ್ಬಿಣದ ಕಂಬಿಗಳಿಂದ ಬಿಗಿಯಲ್ಪಟ್ಟಿದ್ದಿತು. ಕಬ್ಬಿಣ ಕಂಬಿ ಮೇಲೆ ಟೀಪುವಿಗೆ ಪ್ರೀತಿ ಸಂತೋಷಕರವಾದ ವ್ಯಾಘ್ರ, ಹುಲಿಯ ಚಿಹ್ನವನ್ನು ಅಲಂಕಾರವಾಗಿ ಮಾಡಿರುವುದು. ಅಲ್ಲಿ ಕೆಂಪುರಂಗಿನ ಭೂಮಿಯ ಮೇಲೆ ಕುರಾನಿನ ವಾಕ್ಯಗಳನ್ನು ಚಿನ್ನದ ಅಕ್ಷರದಿಂದ ಬರೆಯಲ್ಪಟ್ಟು, ಒಂದೊಂದು ಅಕ್ಷರವೂ ಒಂದಡಿ ದಪ್ಪ. ಈ ರೀತಿ ಕೊಠಡಿಯ ಸುತ್ತಲೂ ಗೋಡೆಯ ಅಂಚಿನಲ್ಲಿ ಬರೆದಿರುವುದು. ಈ ಪಡಸಾಲೆ ಕೊಠಡಿ ಮೂರು ಪಂಕ್ತಿ ಕಂಭಗಳಿಂದ ಕೂಡಿರುವುದು. ಈ ಕಂಭಗಳು ಆಕರ್ಷಕವಾಗಿ ವರ್ಣರಂಜಿತವಾಗಿದ್ದಿತು. ಪ್ರತಿಯೊಂದು ಕಂಭಗಳೂ ಉತ್ಕೃಷ್ಟವಾದ ಹಲವು ಬಣ್ಣದಿಂದ ಕೂಡಿ ವ್ಯಾನಿಷಿಂಗ್‌ನಿಂದ ಅಲಂಕರಿಸಲ್ಪಟ್ಟು ಪ್ರಕಾಶಮಾನವಾಗಿದ್ದಿತು.

ಕಂಭದ ಆಕಾರಗಳು ವಿವಿಧ ರೂಪದಿಂದ ಕೂಡಿ ನಯನ ಮನೋಹರವಾಗಿದ್ದಿತು. ಕಂಭಗಳು ಕೆಳಗೆ ದಪ್ಪನಾಗಿಯೂ, ಮೇಲೆಮೇಲಕ್ಕೆ ಹೋಗುತ್ತಾ ಸಣ್ಣದಾಗಿರುವುದು.

ದರ್ಬಾರ್‌ಹಾಲಿಗೆ ಹಿಂಭಾಗದಲ್ಲಿ ಒಂದು ಚಿಕ್ಕ ಕೊಠಡಿ. ಅಲ್ಲಿ ವ್ಯಾಘ್ರವು ಇರುವುದಕ್ಕೆ ಸ್ಥಳ. ಅದಕ್ಕೆ ಎರಡು ಕಿಟಕಿಗಳು. ಒಂದು ಬಾಗಿಲು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲ್ಲವೂ ಕಬ್ಬಿಣದ ಸರಳುಗಳಿಂದ ಭದ್ರಗೊಳಿಸಲ್ಪಟ್ಟಿದ್ದಿತು.

ಈ ಸ್ಥಳಕ್ಕೆ ಜನಾನಾವಿನಿಂದ ಬರಲು (ಅಂಥಃಪುರ) ಒಂದು ಮಾರ್ಗವು. ಈ ಮಾರ್ಗವು ಅಗಲವಿಲ್ಲದೆ ಉದ್ದವಾಗಿರುವುದು. ಇಲ್ಲಿ ನಾಲ್ಕು ವ್ಯಾಘ್ರಗಳನ್ನು ಸರಪಣಿಗಳಿಂದ ಬಿಗಿದಿರುವರು. ಸಾಧಾರಣವಾಗಿ ಟೀಪುವು ಹೊರಗೆ ಎಲ್ಲೂ ಮಲಗುವುದಿಲ್ಲ. ಎಷ್ಟೇ ಹೊತ್ತಾದರೂ ಲಾಲ್‌ಮಹಲ್‌ಗೆ ಬಂದೇ ಮಲಗುವ ಅಭ್ಯಾಸ , ಪದ್ಧತಿಯು.

ಟೀಪುವು ತಾನು ಅನೇಕ ತಪ್ಪುಗಳನ್ನು ಮಾಡಿರುವೆನೆಂದೂ, ತಾನು ಮಾಡಿದ ತಪ್ಪಿಗೆ ಶಿಕ್ಷೆಯುಂಟೆಂದೂ ತಿಳಿದಿದ್ದನು. ತಾನು ದೇವಸ್ಥಾನಗಳನ್ನು ಒಡೆದು ಹಿಂದುಗಳನ್ನು ಹಿಂಸೆ ಮಾಡಿದ್ದು, ಬ್ರಾಹ್ಮಣ ಸ್ವತ್ತನ್ನು ಅಪಹರಿಸಿದ್ದು, ಅವರ ಹೆಣ್ಣುಮಕ್ಕಳನ್ನು ಬಲಾತ್ಕಾರವಾಗಿ ತನ್ನ ಮತಕ್ಕೆ ತಂದದ್ದು ಇತ್ಯಾದಿಗಳೆಲ್ಲಾ ತಪ್ಪೆಂದು ತಿಳಿದಿದ್ದರೂ ಇದನ್ನೆಲ್ಲಾ ತಾನು ಮಾಡಲೇಬೇಕು ಎಂದು ತನ್ನ ಮನಸ್ಸು ಹೇಳುವುದು. ಅದೂ ತಪ್ಪೆಂದು ತಿಳಿದಿದ್ದೇನೆ ಎಂದು ಅವನ ಮನಸ್ಸಿನಲ್ಲಿ ತಿಳಿದಿದ್ದಿತು. ಇದನ್ನೆಲ್ಲಾ ತನ್ನನ್ನು ಕಾಪಾಡಿಕೊಳ್ಳುವುದಕ್ಕೆ ಮಾಡಿರುವುವೆನೆಂದು ಹೇಳುವುದರಲ್ಲಿ ಆಶ್ಚರ್ಯವೇನೂ ಇರುವುದಿಲ್ಲ.

ಜುಮ್ಮಾ ಮಸೀದಿ - ಈ ಕಟ್ಟಡವು ಬೆಂಗಳೂರು ಕೋಟೆ ಬಾಗಿಲಿನ ಸಮೀಪದಲ್ಲಿರುವುದು. ಮೊದಲು ಈ ಕಟ್ಟಡವು ಶ್ರೀ ಆಂಜನೇಯಸ್ವಾಮಿ ಗುಡಿಯಾಗಿ ಪ್ರಾಕಾರ ಗೋಪುರಗಳಿಂದ ಕೂಡಿದ್ದಿತು. ಇದರ ಸುತ್ತ ಮುತ್ತಲಿನ ಪ್ರದೇಶದಲ್ಲಿ ಹೈದರ ನಾಯಕನ ಮಗ ಟೀಪುವು ಜೊತೆಗಾರರೊಡನೆ ಆಡಿಕೊಂಡಿದ್ದನು. ಆ ಸಮಯದಲ್ಲಿ ಹೈದರನಾಯಕನು ಮೈಸೂರು ಸೈನ್ಯದಲ್ಲಿ ಸೇರಿ ಅಭಿವೃದ್ಧಿಗೆ ಬರುತ್ತಿದ್ದನು. ಟೀಪುವು ಆಡಿಕೊಂಡಿದ್ದ ಕಾಲದಲ್ಲಿ ಒಬ್ಬ ಫಕೀರನು ಬಂದು ಹುಡುಗನನ್ನು ನೋಡಿ ನೀನು ದೊಡ್ಡವನಾಗಿ ಅಧಿಕಾರಕ್ಕೆ ಬರುತ್ತೀಯೆ. ಆಗ ಈ ದೇವಸ್ಥಾನವನ್ನು ಮಸೀದಿಯಾಗಿ ತಿರುಗಿಸು ಎಂದು ಹೇಳಿದನಂತೆ.

ಅನಂತರ ಕಾಲದಲ್ಲಿ ಟೀಪುವು ಅಧಿಕಾರಕ್ಕೆ ಬಂದಾಗ-ಈ ದೇವಸ್ಥಾನವು ಆಕ್ರಮಿಸಲ್ಪಟ್ಟು ಶ್ರೀಆಂಜನೇಯಸ್ವಾಮಿ ವಿಗ್ರಹವನ್ನು ಬಲಾತ್ಕಾರವಾಗಿ ತೆಗೆಸಿ ಕೆಳಗಿನ ಭಾಗವು ಮಣ್ಣಿನಿಂದ ಮುಚ್ಚಲ್ಪಟ್ಟಿತು. ಮೇಲು ಭಾಗದಲ್ಲಿ ೧೭೮೭ರ ಕಾಲದಲ್ಲಿ ಮಸೀದಿಯನ್ನಾಗಿ ಮಾರ್ಪಡಿಸಿ ಅದಕ್ಕೆ ಜುಮ್ಮಾಮಸೀದಿ ಎಂದು ಹೆಸರಿಟ್ಟನು. ಮಸೀದಿಯ ಪಡಸಾಲೆ ಸುತ್ತಲೂ ಖುರಾನಿನ ವಾಕ್ಯಗಳು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆತ್ತಲ್ಪಟ್ಟಿವೆ. ಮಿನೆರತ್ ಎಂದು ಕರೆಯುವ ಎರಡು ಕೊಳವೆ ಕಂಬಗಳಿವೆ. ಈ ಕೊಳವೆ ಕಂಭಗಳನ್ನು ಹತ್ತಲು ಸುಮಾರು ೨೦೦ ಮೆಟ್ಟಲುಗಳಿವೆ. ಈ ಕೊಳವೆ ಕಂಬದ ಮೇಲೆ ಹತ್ತಿ ನೋಡಿದರೆ ಬಹುದೂರದವರೆಗೆ ಪರಿಸರವನ್ನೆಲ್ಲಾ ಕಾಣಬಹುದು. ಈ ಕಂಬದ ಮೇಲುಭಾಗದಲ್ಲಿ ಹಿಂದೂ ಸಂಸ್ಕೃತಿ ಲಕ್ಷಣವುಳ್ಳ ಬಂಗಾರದ ಕಲಶಗಳಿವೆ.

ಫಕೀರನು ಹೇಳಿದಂತೆ, ಈ ಕೆಳಗೆ ಶಾಸನ ಒಂದು ಕಂಡುಬರುವುದು. ಅರೆಬಿ ಲಿಪಿಯಲ್ಲಿ ಬರೆದಿರುವುದು.

೧. ಗರ್ ಹದರತ್ ಇ ಸಲೈಮಾನ್ ಅಂದರ್ ಜಮಾನ್ ಇ ಮಾಜಿ ತಾಮೀರ್ ಮಸ್‌ಜಿದೇ ಕರ್ದ ನಾಮಷ್ ನಿಹಾದ್ ಅಖ್ಸಾ.

೨. ದರ್ ಈನ್ ಅವಾನ್ ಇ ಫರೂಖ ಸುಲ್ತಾನ್ ಇ ದೀನ್ ಬಿನಾಕರ್ದ ಆನ್ ಮಸ್‌ಜಿದೇ ಕಿ ಇಸ್‌ಮಷ್ ಮುಲ್‌ಹಿಮ್ ಗುಜಾಪ್ತ ಆ ಲಂ

೩. ತಾಖಸ್ತ ಚೂನ್ ಮಹ್ ಇ ನೌ ತಾಖಿಷ್ ಬಹುಸ್ನ ಒ ಖೂಬೀರವ್ನಷ್ ಚೊ ರೂಹ್ ಬಾಷದ್ ದಿಲ್‌ಚಸ್ಪ ಒ ಫೈಜ್ ಪೀರಾ

೪. ದಾರದ್ ನಿಷಾನ್ ಇ ಮರ್ವ ಆನ್ ಸುಫಾ ಇ ಸುಫಾಖೀಜ್ ಮಿಹ್‌ರಾಬ್ ಇ ದಿಲ್‌ಕಷ್ ಇ ಊ ಆ ಈನದಾರ್ ಇ ಬಥಾ

೫. ಮಾನಿನ್ದ ಇ ಜರ್ ಚೊ ಜೊಯ ಗಪ್ತಮ್ ಬರಾ ಇ ತಾರೀಖ ತಾ ಆಶ್ ಸರಾ ಇಥಾಬಿತ್ ಹಾತಿಫ್ ನಮೂದ್ ಇಲ್ಪಾ ೧೨೧೫

ಅರ್ಥ. ಬಂಗಾರವನ್ನು ಹುಡುಕುವಂತೆ ಮಶೀದಿ ಕಟ್ಟಿ ಪ್ರಾರ್ಥನೆ ಮಾಡಲು ಸ್ಥಳವನ್ನು ಹುಡುಕುತ್ತಿದ್ದೆ. ಆ ಸಮಯದಲ್ಲಿ ಆಕಾಶವಾಣಿ ಹೇಳಿದ ಪ್ರಕಾರ ಇಲ್ಲಿ ಮಶೀದಿ ಕಟ್ಟಿಸಿರುತ್ತೇನೆ..

ಸಾಲೋಮನ್ ಎಂಬುವರು ಮಶೀದಿಯನ್ನು ಕಟ್ಟಿಸಿ ಅದನ್ನು ಅಕ್ಷ (ಜೆರೂಸಲೆಂನಲ್ಲಿ ಕಟ್ಟಿರುವ ಶ್ರೇಷ್ಠ ದೇವಾಲಯ) ಎಂದು ಕರೆದದ್ದೇ ಆದರೆ ದೇವತೆಗಳಿಂದ ಪ್ರೇರೇಪಿಸಲ್ಪಟ್ಟ ರಾಜ = ಮತಾಧ್ಯಕ್ಷನಾದ ನಾನು ಈಗ ಆಲಾ - ಶ್ರೇಷ್ಠವಾದ ಮಶೀದಿಯನ್ನು ಕಟ್ಟಿಸಿರುತ್ತೇನೆ. ಇದು ಪೂರ್ಣಿಮಾ ಚಂದ್ರನಂತೆ ಬಹು ಸುಂದರವಾದುದು. ಈ ಸ್ಥಳವು ಬಾತದಂತಿರುವುದು. (ಬಾತ = ಮಕ್ಕಾವಿಗೆ ಇನ್ನೊಂದು ಹೆಸರು) ಶ್ರೀ.ಪ. ೪೮

ಮಶೀದಿಯ ಪಶ್ಚಿಮ ಗೋಡೆಯ ಮೇಲೆ ಅರಾಬೀ ಭಾಷೆಯಿಂದ ಮುಹಮ್ಮದೀಯರ ಇಸ್ಲಾಂ ಮತದ ಅಲ್ಲಾವಿನ ೯೯ ಬಿರುದುಗಳನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹೇಳಿರುವುದು ೧೦೦ನೆಯ ಹೆಸರು, ಬಿರುದು ಒಂಟೆಗೆ ತಿಳಿದಿರುವುದೆಂದು ಹೇಳುತ್ತಾರೆ.

ಒಂದನೆಯ ಭಾಗ -

೧. ಮಹಮ್ಮದ್, ೧.ಅಹಮ್ಮದ್, ೩.ಹಾಮಿದ್, ೪.ಮಹಮೂದ್, ೫.ಖಾಸಿಮ್, ೬.ಅಖಿಬ್, ೭.ಮುಅಯಿದ್, ೮.ಫಾತಿಹ, ೯.ಖಾತಿಮ್, ೧೦.ಹಾಷೀರ್, ೧೧.ನೂರ್, ೧೨.ಸಿರಾಜ್, ೧೩.ಮುನೀರ್, ೧೪.ಬಷೀರ್, ೧೫.ನಾದಿರ್, ೧೬.ರಸೂಲ್, ೧೭.ನಬೀ, ೧೮.ಜನಾದ್, ೧೯.ಕರೀಮ್, ೨೦.ಹಾದ್, ೨೧ ಮಹ್ವ, ೨೨ ಮಹ್ದೀ, ೨೩ ವಲೀ, ೨೪ ಅಬ್ದುಲ್ಲಾ, ೨೫ ತಾಹಾ, ೨೬ ಯಾಸೀನ್, ೨೭ ಹಾಮೀಮ್, ೨೮ ಮುಜ್ಜಮ್ಮಿಲ್, ೨೯ ಮುದ್ದಫಿರ್, ೩೦ ಕಲೀಮ್, ೩೧ ತಾಹಿರ್, ೩೨ ಮುತಾಹಃಇರ್, ೩೩ ಉಮ್ಮೀ, ೩೪ ಮುಖ್ತಾರ್, ೩೫ ಖಾ, ೩೬ ಇಮ್, ೩೭ ಹಜ್ಜತ್, ೩೮ ಬಯಾನ್, ೩೯ ಹಾಫೀಜ್, ೪೦ ಷಹೀದ, ೪೧ ಆದಿಲ್, ೪೨ ಅಮೀರ್, ೪೩ ನಾಹೀ, ೪೪ ಮುಬೀನ್, ೪೫ ಬುರ್ಹಾನ್, ೪೬ ನಾಡಿಖ್, ೪೭ ಮದ್ಧಕ್ಕಿರ್, ೪೮ ಅಮೀನ್, ೪೯ ಮುಸದ್ದಿಖ್, ೫೦ ಸಾದಿಖ್

ಎರಡನೆಯ ಭಾಗ -

೫೧ ಮುಸ್ತಫಾ, ೫೨ ಮುಜತಬಾ, ೫೩ ಮುರ್ತಜಾ, ೫೪ ಮೆಕ್ಕಿ, ೫೫ ಮದನಿ, ೫೬ ಅಬತಾಹೀ, ೫೭ ಅರಬೀ, ೫೮ ಖುರಷೀ, ೫೯ ಹಾಷಿಮಿ, ೬೦ ಅಜೀಜ್, ೬೧ರ ಊಫ, ೬೨ ರಹೀಮ್, ೬೩ ಹಲಿಮ್, ೬೪ ಹಕೀಮ್, ೬೫ ಅಲೀಮ್, ೬೬ ಆಲಿಮ್‌ಮು, ೬೭ ಅಲ್ಲಂ, ೬೮ ತಯ್ಯಿಬ್, ೬೯ ಮುತಯ್ಯಿಬ್, ೭೦ ಹಬೀಬ್, ೭೧ ರಖೀಬ್, ೭೨ ಖರೀಬ್, ೭೩ ಮುನೀಬ್, ೭೪ ಖತೀಬ್, ೭೫ ಇಮಾಮ್, ೭೬ ಮುನ್ತಬೀ, ೭೭ ಘನಿ, ೭೮ ಫತ್ತಾಹ್, ೭೯ ಷಕೂರ್, ೮೦ ಮುತೀ, ೮೧ ಮುಬಲ್ಲಿಘ, ೮೨ ಖಲೀಲ್, ೮೩ ಮಾಹ್‌ದು, ೮೪ ಬರ್, ೮೫ ಷಫೀ, ೮೬ ಮುಷಪ್ಪಿ, ೮೭ ಷಿರಾ, ೮೮ ರಹಮತ್, ೮೯ ಸುಬಿಖ್, ೯೦ ಹಖ್ಖ್, ೯೧ ಮತಿನ್, ೯೨ ಅದ್ವಲ್, ೯೩ ಆಖಿರ್, ೯೪ ಜಾಹಿರ್, ೯೫ ಬಾತಿನ್, ೯೬ ಲತೀಫ್, ೯೭ ಫಸೀಹ್, ೯೮ ರಷೀದ್, ೯೯ ಸಬೂರ್, ೧೦೦ ಶ್ರೀ.ಪ. ೪೯

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಟೀಪುವಿನ ರಾಜಚಿಹ್ನೆ -

ಟೀಪುವು ವ್ಯಾಘ್ರ ಹುಲಿಯಂತೆ ಪರಾಕ್ರಮ, ವೀರಾವೇಶವನ್ನು ಹೊಂದಿದ್ದುದರಿಂದ ವ್ಯಾಘ್ರ ಹುಲಿಯನ್ನೇ ತನ್ನ ರಾಜಚಿಹ್ನವಾಗಿ ಉಪಯೋಗಿಸಿದ್ದನು. ಇದರ ವಿಚಾರವಾಗಿ ಟೀಪುವು ಕಿವಿಗೆ ಇಂಪಾಗಿರುವಂತೆ ಆಶ್ಚರ್ಯಕರವಾಗಿ ಇರುವಂತೆ ಸಂಗೀತ ವ್ಯಾಘ್ರ = ಹುಲಿ ಎಂಬ ಯಂತ್ರ ವಿಶೇಷವನ್ನು ಮಾಡಿಸಿದ್ದನು. ೧೭೯೯ರ ಯುದ್ಧಾನಂತರ ಅರಮನೆಯ ಐಶ್ವರ್ಯವನ್ನೆಲ್ಲಾ ಆಂಗ್ಲೇಯರ ವಶವಾದಾಗ ಈ ವ್ಯಾಘ್ರ ಯಂತ್ರವನ್ನೂ ತೆಗೆದುಕೊಂಡು ಹೋದರು. ಅದನ್ನು ಇಂಡಿಯಾ ಆಪೀಸು ಲೈಬ್ರೆರಿಗೆ ಕಳುಹಿಸಿದರು. ಇಂಡಿಯಾ ಆಫೀಸು ಲೈಬ್ರರಿಯವರು ಸಂಗೀತ ವ್ಯಾಘ್ರ ಯಂತ್ರವನ್ನು ತಾವು ತೆಗೆದುಕೊಂಡಿರುವುದಾಗಿ ೨೯.೭.೧೮೦೮ರ ದಾಖಲೆಯಲ್ಲಿ ಬರೆದಿರುವರು.

ಆ ಯಂತ್ರವನ್ನು ಪಬ್ಲಿಕ್ ರೀಡಿಂಗ್ ರೂಮಿನಲ್ಲಿಟ್ಟಿದ್ದರು. ಆ ವ್ಯಾಘ್ರಯಂತ್ರವು ಬೊಂಬೆ ಆಟದ ಸಾಮಾನಾಗಿದ್ದಿತು. ಬೊಂಬೆಗೆ ಕೀಲಿಕೊಟ್ಟಾಗ ವ್ಯಾಘ್ರವು ಒಬ್ಬ ಆಂಗ್ಲೇಯ ಆಫೀಸರ್ ಮೇಲೆ ನೆಗೆದಾಗ, ಮನುಷ್ಯನ ಭಯ ಸನ್ನಿಹಿತವಾದ ಕೂಗು, ಹುಲಿಯ ಘರ್ಜನೆ ಕೇಳಿಬರುವುದು. ಈ ರೀತಿಯಲ್ಲಿ ಆಟದ ಬೊಂಬೆಯು ನಿರ್ಮಿಸಲ್ಪಟ್ಟಿದ್ದಿತು.

ಲೈಬ್ರರಿಯಲ್ಲಿದ್ದಾಗ ವಿದ್ಯಾರ್ಥಿಗಳು ಆ ಶಬ್ದವನ್ನು ಕೇಳಿ ವಿಯುಚಕಿತರಾಗಿ ತಮ್ಮ ಕಾರ್ಯವನ್ನು ಬಿಟ್ಟು, ತಟಸ್ಥರಾಗುತ್ತಿದ್ದರು. ಇದರಿಂದ ಆ ಯಂತ್ರವನ್ನು ಲೈಬ್ರರಿಯವರು ತೆಗೆದುಬಿಟ್ಟರು. ಆ ಯಂತ್ರವು ...ಕರವಾದುದು ನಿಜವೇ ? ಆದರೆ ಆ ಯಂತ್ರವೇನಾಯಿತು, ಈಗ ಎಲ್ಲಿದೆ, ಇದುವರೆಗೂ ತಿಳಿಯಬರಲಿಲ್ಲ.

ರಾಷ್ಟ್ರಧ್ವಜ (ರಾಜಪತಾಕಾ) -

ಕೋಟೆಗೆ ಆಗ್ನೇಯ ಭಾಗದಲ್ಲಿರುವುದು. ರಾಷ್ಟ್ರ ರಕ್ಷಣೆಗೆ ರಾಷ್ಟ್ರಧ್ವಜವು ಬಹುಮುಖ್ಯವಾದುದು. ಸೈನ್ಯ, ಕೋಟೆ ರಾಜಗೃಹ ಈ ಸ್ಥಳಗಳಲ್ಲಿ ಅವಶ್ಯ ರಾಷ್ಟ್ರಧ್ವಜವಿದ್ದೇ ಇರಬೇಕು. ಆ ರೀತಿಯಲ್ಲಿ ಶ್ರೀರಂಗಪಟ್ಟಣ ರಾಜ್ಯದ ರಾಷ್ಟ್ರಧ್ವಜವು ಕೋಟೆಯ ಆಗ್ನೆ ಮೂಲೆಯಲ್ಲಿ ಸ್ಥಾಪಿತವಾಗಿರುತ್ತದೆ. ಪ್ರಕೃತ ರಾಜಧಾನಿ, ರಾಜ್ಯವಿಲ್ಲದ್ದರಿಂದ ಅಲ್ಲಿ ರಾಷ್ಟ್ರಧ್ವಜವು ಕಾಣಿಸುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಳೇಗೌಡನ ಬತೇರಿ -

ಈ ಕೋಟೆಯ ಬಾಗಿಲು ಆಗ್ನೇಯ ದಿಕ್ಕಿನಲ್ಲಿರುವುದು. ಈ ಸ್ಥಳದಲ್ಲಿ ೧೭೯೧ರಲ್ಲಿ ಆಂಗ್ಲ ಸರದಾರ ಕಾರ್ನವಾಲೀಸ್ ಎಂಬುವನು ಲಗ್ಗೆ ಹತ್ತಿದನು. ಟೀಪುವು ಈ ಸ್ಥಳವನ್ನು ಬಲಪಡಿಸಬೇಕೆಂದು ಆಲೋಚಿಸಿ ಯುದ್ಧಾನಂತರ ಈ ಸ್ಥಳವನ್ನು ಬಲಪಡಿಸಿದನು. ಕಂದಕವು ಆಳವಾಗಿ ತೋಡಲ್ಪಟ್ಟಿತು. ಕೋಟೆಯ ಹೊರಗೆ ಇನ್ನೊಂದು ಆವರಣ ಕೋಟೆ ಕಟ್ಟಲ್ಪಟ್ಟಿತು. ಆ ದಿಕ್ಕಿನಲ್ಲಿ ಒಂದು ಫಿರಂಗಿಯನ್ನು ಇಟ್ಟನು. ಅದನ್ನು ಕಾಳೇಗೌಡನ ಬತೇರಿ ಎಂದು ಕರೆಯುವರು. (M.A.R. 1935 page 62)

ಬೆಂಗಳೂರು ಗೇಟ್, ಮಹಾದ್ವಾರ -(ಡ್ರಾಬ್ರಿಡ್ಜ್, ಸ್ವಚ್ಛಂದ ಸೇತುವೆ)

ಕೋಟೆಯ ಪೂರ್ವದಿಕ್ಕಿನ ಮಹಾದ್ವಾರ - ಶತ್ರುಗಳು ಬಾರದಿರಲು ಕೋಟೆ ಪ್ರಾಕಾರದ ಗೋಡೆ, ಆಳವಾದ ಕಂದಕ, ಅನಂತರ ಪುನಃ ಕೋಟೆಗೋಡೆ, ಈ ರೀತಿ ಇರುವುದು. ಈ ಕಂದಕವನ್ನು ದಾಟಿಬರಲು ಕಂದಕದ ಅಗಲಕ್ಕೆ ಸರಿಯಾಗಿ ಮರದ ಹಲಗೆಯಿಂದ ಸೇತುವೆಯನ್ನು ಮಾಡಿರುವರು. ಆ ಮರದ ಸೇತುವೆಗೆ ಸರಪಣಿಯನ್ನು ಕಟ್ಟಿ ಚಕ್ರದ ಸಹಾಯದಿಂದ ಎಳೆಯುವರು. ಈ ರೀತಿ ಬೇಕಾದಾಗ ಸೇತುವೆಯನ್ನು ಮಾಡಿಕೊಳ್ಳಬಹುದು. ಸೇತುವೆ ಬೇಡವೆಂದು ತಿಳಿದಾಗ ಸೇತುವೆಯನ್ನು ತೆಗೆದುಹಾಕಿ ಬಿಡಬಹುದು. ಇದಕ್ಕೆ ಡ್ರಾ ಬ್ರಿಡ್ಜ್ = ಸ್ವಚ್ಛಂದ ಸೇತುವೆ ಎನ್ನುವರು.

ಗಾಡಿ ಸೇತುವೆ - A.D. ೧೮೪೭ರಿಂದ ೧೮೫೦ರ ವರೆಗೆ ಮೈಸೂರು ಬೆಂಗಳೂರು ಭಾಟಾ ಮಾರ್ಗದಲ್ಲಿ ಶಿಂಶಾ ನದಿಗೆ ಕಟ್ಟಿರುವ ಸೇತುವೆಯು ಇಂಡಿಯಾ ಸರಕಾರದ ಗವರ್ನರ್ ಜನರಲ್ ಜೇಂಸ್ ಆಂಡ್ರಿ ಮಾರ್ಕ್ವಿಸ್ ಕೆ.ಟಿ. ಡಾತಾಜೀ ಎಂಬುವರೂ ಮತ್ತು ಮಹಿಸೂರು ಸಂಸ್ಥಾನದ ಕಮೀಷನರು ಮೇಜರ್ ಜನರಲ್ ಮಾರ್ಕ್‌ಕಬ್ಬನ್ ಅವರ ಅಧಿಕಾರದಲ್ಲಿ ಇಂಜನೀಯರುಗಳಾದ ಮೇಜರ್ ಸಿ.ಜೆ.ಗ್ರೀನ್, ಮೇಜರ್ ಟಿ.ಟಿ.(ಪೀರಸ್) ಸಿ.ಬಿ. ಇವರುಗಳಿಂದ ಕಟ್ಟಲ್ಪಟ್ಟಿತು. ಮದ್ದೂರು ೧೮

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಾಡಿ ಸೇತುವೆ (ವೆಲ್ಲಸ್ಲಿ ಸೇತುವೆ) - ಕಾವೇರಿಯಿಂದ ಅಕ್ಕರೆಗೆ ದಾಟಿಹೋಗಲು ಮೂರು ನಾಲ್ಕು ಸೇತುವೆಗಳಿದ್ದವು. ೧೭೯೯ರ ಯುದ್ಧಕಾಲದಲ್ಲಿ ಟೀಪುವು ಅವುಗಳನ್ನೆಲ್ಲಾ ನಾಶಪಡಿಸಿದನು. ಯುದ್ಧಮುಗಿದ ಮೇಲೆ ಮೈಸೂರು ಬೆಂಗಳೂರು ಭಾಟಾ ಮಾರ್ಗದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸೇತುವೆಯನ್ನು ಇಂಡಿಯಾ ಸರಕಾರದ ಗವರ್ನರ್ ಜನರಲ್ ಆದ ಜೇಂಸ್ ಆಂಡ್ರಿ ಮಾರ್ಕ್ವಿಸ್ ಕೆ.ಟಿ ಡಾತಾಜೀ ಎಂಬುವರೂ ಮತ್ತು ಮಹಿಸೂರು ಸಂಸ್ಥಾನದ ಕಮೀಷನರು ಮೇಜರ್ ಜನರಲ್ ಮಾರ್ಕಕಬ್ಬನ್ ಅವರ ಅಧಿಕಾರದಲ್ಲಿ ಗೌರ್ನರ್ ಜನರಲ್ ಮಾರ್ಕ್ವಿಸ್ ವೆಲ್ಲಸ್ಲಿ ಜ್ಞಾಪಕಾರ್ಥವಾಗಿ ಪೂರ್ಣಯ್ಯನವರು ಬರೀ ಕಲ್ಲಿನ ಕಂಭಗಳಿಂದಲೇ ಈ ಸೇತುವೆಯನ್ನು ಕಟ್ಟಿಸಿದರು. ೧೮೦೨ ಆಗಸ್ಟ್ ತಿಂಗಳಿನಲ್ಲಿ ಆರಂಭವಾಗಿ ೧೮೦೪ ಅಕ್ಟೋಬರ್ ತಿಂಗಳಿನಲ್ಲಿ ಪೂರ್ಣಗೊಂಡಿತು. ಇದನ್ನು ಕಟ್ಟುವಾಗ ಮಂಗಳಕರವಾಗಿರಬೇಕೆಂದು ಅಹೋಬಿಲ ಮಠಾಧಿಪತಿಗಳನ್ನು ಬರಮಾಡಿ ಅವರಿಂದ ಪೂಜಾದಿಗಳನ್ನು ನಡೆಸಲಾಯಿತು. ಈ ಸೇತುವೆಗೆ ಐದು ಲಕ್ಷ ಐವತ್ತು ಸಾವಿರ ರೂಪಾಯಿಗಳು ಖರ್ಚಾದವು. ಸೇತುವೆಯನ್ನು ಕಟ್ಟಲು ಇಂಜಿನೀಯರುಗಳಾದ ಮೇಜರ್ ಸಿ.ಜೆ.ಗ್ರೀನ್, ಮೇಜರ್ ಟಿ.ಟಿ.ಪೀರಸ್, ಸಿ.ಬಿ.ಇವರುಗಳು ಭಾಗವಹಿಸಿದ್ದರು. ಈ ಸೇತುವೆಯು ಬರೀ ಕಲ್ಲುಕಂಭಗಳಿಂದಲೇ ನಿರ್ಮಿತವಾಗಿರುವುದು: ಕಾವೇರಿಯಲ್ಲಿ ಎಂಥಹ ಪ್ರವಾಹ ಬಂದರೂ ತಡೆದು ನಿಲ್ಲಿಸುವಷ್ಟು ಶಕ್ತಿಯುತವಾದುದು. ೧೯೨೪ರಲ್ಲಿ ಕಾವೇರಿ ಪ್ರವಾಹದಲ್ಲಿ ಮುಳುಗಿ ಹೋಗಿದ್ದಿತು. ೧೮೯೯ರಲ್ಲಿ ನಡೆದ ಗಂಜಾಂ ಸ್ಥಳದವರು ದಂಗೆಯ ಕಾಲದಲ್ಲಿ ದಂಗೆಕಾರರು ಈ ಸೇತುವೆಯ ಮೇಲೆ ಬಂದಿದ್ದ ಸಮಯದಲ್ಲಿ ಮೈಸೂರು ಸೈನ್ಯದವರು ಅಷ್ಟೂ ಜನರನ್ನು ಗುಂಡಿನಿಂದ ಹೊಡೆದರು.

M.A.R. 1935 page 61 ಶ್ರೀ.ಪ. 53.54

ಶೃಂಗಾರತೋಟ - ದರಿಯಾ - ಎ - ದೌಲತ್

ಈ ತೋಟವು ಕೋಟೆಯ ಹೊರಗೆ ಕಾವೇರೀ ನದಿಯ ಬಲಭಾಗದ ದಡದಲ್ಲಿರುವುದು. ಚಿಕ್ಕದೇವರಾಜರು ಪರಮಪದಿಸಿದಾಗ ಅವರ ದೇಹವನ್ನು ಈ ಶೃಂಗಾರ ತೋಟದಲ್ಲಿ ದಹನಮಾಡಿ ಆ ದಹನ ಸ್ಥಳದಲ್ಲಿ ಗುಡಿಯನ್ನು ಕಟ್ಟಿಸಿ ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠಿಸಿದ್ದರು. ಪ್ರಕೃತ ಆ ಗುಡಿಯಾಗಲಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಗ್ರಹ, ಮೂರ್ತಿಯಾಗಲಿ ಯಾವುದೂ ಕಾಣಬರುವುದಿಲ್ಲ. ಹೈದರನಾಯಕನು ತಾನು ಅಧಿಕಾರದಲ್ಲಿದ್ದಾಗ ಈ ತೋಟಕ್ಕೆ ದರಿಯಾ ಏ ದೌಲತ್ = ಸಮುದ್ರದಲ್ಲಿ ರತ್ನಗಳಿವೆ. ಇನ್ನೂ ಅನೇಕ ವಸ್ತುಗಳಿವೆ. ಅದರಂತೆ ತುಂಬಿ ತುಳುಕುವ ಗಂಭೀರವಾದ ತೋಟ. ಎಂದು ಹೆಸರಿಟ್ಟು ಈ ತೋಟದಲ್ಲಿ ಕಾಶ್ಮೀರ, ದೆಹಲಿ, ಲಾಹೋರು ಮುಂತಾಗಿ ನಾನಾ ದೇಶಗಳಿಂದ ವಿವಿಧ ಫಲಪುಷ್ಪ ಗಿಡಗಳನ್ನು ತರಿಸಿ ನಡಿಸಿ ತೋಟವನ್ನು ವೃದ್ಧಪಡಿಸಿದನು. ಟೀಪುವು ಅಧಿಕಾರಿಯಾಗಿದ್ದಾಗ ೧೭೮೪ ಇಲ್ಲಿ ಕಟ್ಟಡ ಒಂದನ್ನು ತನ್ನ ತಂದೆಯ ಸ್ಮಾರಕವಾಗಿ ನಿರ್ಮಿಸಿದನು. ಈ ಕಟ್ಟಡವು ಅಲಹಾಬಾದಿನಲ್ಲಿರುವ ಅಕ್ಬರನ ಅರಮನೆ ದರ್ಬಾರುಹಾಲಿನಂತಿರುವುದು. ಇಲ್ಲಿರುವ ತೋಟವು ಫಲಪುಷ್ಪ ಜಲಾಶಯಗಳಿಂದ ತುಂಬಿ ತಂಪಾಗಿರುವುದರಿಂದ ಬೇಸಿಗೆಕಾಲದಲ್ಲಿ ಈ ಕಟ್ಟಡವನ್ನು ಉಪಯೋಗಿಸುವುದುಂಟು. ಈ ಸಟ್ಟಡವು ಬೆಂಗಳೂರು, ಶ್ರೀರಂಗಪಟ್ಟಣ, ಸೀರಾ ಎಂಬ ಊರಿನಲ್ಲಿ ಕಟ್ಟಿರುವ ಕಟ್ಟಡಗಳೆಲ್ಲಾ ಒಂದೇ ವಿಧವಾಗಿರುವುದು. ಈ ಕಟ್ಟಡದ ಪಶ್ಚಿಮ ಗೋಡೆಯಮೇಲೆ ಚರಿತ್ರಾರ್ಹವಾದ ವರ್ಣಚಿತ್ರಗಳನ್ನು ಕಾಣಬಹುದು. ಈ ಚಿತ್ರವು ಶಿಲ್ಪಚಾತುರ್ಯದಿಂದ ಕೂಡಿ ಸಮಯೋಚಿತ ವರ್ಣಗಳಿಂದ ಚಿತ್ರಿಸಿರುವುದು. ಮನಸ್ಸನ್ನು ಆಕರ್ಷಿಸುವುದು.

೧. ಟೀಪುವು ಕುದುರೆಯ ಮೇಲೆ ಕುಳಿತು ಯುದ್ಧ ಸನ್ನದ್ಧನಾಗಿ ಹೋಗುತ್ತಿರುವುದು.

೨. ಯುದ್ಧದಲ್ಲಿ ಮೈಸೂರಿನವರ ಜಯ, ಹೈದರನಾಯಕ ಮತ್ತು ಟೀಪುವು ಆನೆಯ ಮೇಲೆ ಕುಳಿತು ತಮ್ಮ ಸೈನ್ಯವನ್ನು ನಡೆಸುವುದು.

೩. ಮೈಸೂರು ಅಶ್ವಸೈನ್ಯವು ಬ್ರಿಟಿಷರನ್ನು ಹಿಂದು ಮುಂದು ಎರಡು ಪಕ್ಕಗಳಿಂದಲೂ ಬಂಧನದಲ್ಲಿ ಸಿಕ್ಕಿಸಿಕೊಂಡಿರುವುದು.

೪. ಕೆಂಪುವಸ್ತ್ರವನ್ನು ಧರಿಸಿರುವ ಕುಂಪಣಿ ಸೈನ್ಯದವರು ತಮ್ಮ ಸಾಮಗ್ರಿಗಳನ್ನು ಮತ್ತು ತಮ್ಮ ತಳದ ಕರ್ನಲ್ ಬೇಲಿಯನ್ನು ಕಾಪಾಡಿಕೊಳ್ಳಲು ವ್ಯೂಹರಚನೆ ಮಾಡುವುದು.

೫. ಫ್ರೆಂಚ್‌ದಳದವರು ಮತ್ತು ಮೈಸೂರು ಸೈನ್ಯದ ದಳಪತಿ ಅವರವರ ಕಾರ್ಯದಲ್ಲಿ ಉದ್ಯುಕ್ತರಾಗಿರುವುದು.

೬. ಕರ್ನಲ್ ಬೇಲಿಯು ಪಲ್ಲಕ್ಕಿ ಮೇನಾದಲ್ಲಿ ಕುಳಿತು ತುಟಿಯಮೇಲೆ ಕೈಯಿಟ್ಟು ಆಲೋಚನಾಮಗ್ನನಾಗಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

೭. ಫ್ರೆಂಚ್ ಫಿರಂಗಿದಳದವರು ಹೊಡೆದ ಗುಂಡು ಇಂಗ್ಲೀಷರ ಯುದ್ಧಸಾಮಗ್ರಿಗಳನ್ನು ನಾಶಮಾಡುವುದು.
೮. ರಾಜರು ಪಾಳೆಯಗಾರರು ಘುಂತಾಗಿ ಚಿತ್ರಿಸಿ ಬರೆದಿರುವುದನ್ನು ಕಾಣಬಹುದು.

೧೭೮೪ರಲ್ಲಿ ನಡೆದ ಯುದ್ಧಕಾಲಕ್ಕೆ ಪೂರ್ವಭಾವಿಯಾಗಿ ಈ ಚಿತ್ರವು ಅಳಿಸಲ್ಪಟ್ಟಿತು. ಶ್ರೀರಂಗಪಟ್ಟಣವು ಆಂಗ್ಲೇಯರ ವಶವಾದ ಮೇಲೆ ಕರ್ನಲ್ ವೆಲ್ಲಸ್ಲಿ ಅಧಿಕಾರಿಯು ಈ ಕಟ್ಟಡದಲ್ಲಿ ಕೆಲವು ಕಾಲವಿದ್ದಾಗ ಕೆಡಿಸಿದ ಈ ವರ್ಣಚಿತ್ರಗಳನ್ನು ಪುನಃ ಬರೆಸಿದನು. ತದನಂತರ ಕಾಲಗತಿಯಿಂದ ಚಿತ್ರದ ಕೆಲವು ಭಾಗ ಮಂಕಾಗಿ ಕಾಣಿಸದೆ ಹೋಯಿತು. ಲಾರ್ಡ ಡಾಲ್‌ಹೌಸಿ ಎಂಬಾತನು ಮೈಸೂರಿಗೆ ಬಂದಿದ್ದಾಗ ಅದನ್ನು ನೋಡಿ ಚತುರನಾದ ಭಾರತೀಯ ಶಿಲ್ಪಿಯನ್ನು ಕರೆದು ಪುನಃ ಮೊದಲಿನಂತೆ ಚಿತ್ರೀಕರಿಸುವಂತೆ ಮಾಡಿದನು.(M.A.R. 1935 page 63-64 for the detailed of paintings and also Gaz. Vol. V Cha. VI under Srirangapatnam)

ಬಂಗಾರದೊಡ್ಡಿ ಕಾಲುವೆ ಮತ್ತು ಸೇತುವೆ - ಶಂಖ ತೀರ್ಥ ಸರೋವರ- ಕಂಠೀರವ ನರಸರಾಜ ಒಡೆಯರು ಕಾವೇರೀ ನದಿಯ ಪ್ರವಾಹಕಾಲದಲ್ಲಿ ಜನರ ಸಂಚಾರಕ್ಕೆ ಅನುಕೂಲವಾಗಿ ನದಿಗೆ ಉಭಯ ಪಾರ್ಶ್ವಗಳಲ್ಲಿಯೂ, ಎಂದರೆ ಕೋಟೆಗೆ ನೈಋತ್ಯ, ವಾಯುವ್ಯ ಪಾರ್ಶ್ವಗಳೆರಡರಲ್ಲಿಯೂ, ನದಿಗೆ ಸೇತುವೆಗಳನ್ನು ಕಟ್ಟಿಸಿ ಗೌತಮಕ್ಷೇತ್ರಕ್ಕೆ ದಕ್ಷಿಣದಿಕ್ಕಿನ ಚಂದ್ರವನ ಸಮೀಪದಲ್ಲಿ ಕವಲೊಡೆದ ಸ್ಥಳದಲ್ಲಿ ಕಾವೇರಿಗೆ ಕಟ್ಟೆಯನ್ನು ಕಟ್ಟಿಸಿ ಕಾಲುವೆಯನ್ನು ತಂದರು. ಅದಕ್ಕೆ ಬಂಗಾರದೊಡ್ಡಿಕಾಲುವೆ ಎಂದು ಹೆಸರು. ಅಲ್ಲದೆ ಆ ಕಾಲುವೆಯು ಕೋಟೆಯೊಳಗೆ ಬರುವಂತೆ ಏರ್ಪಡಿಸಿದರು. ಅಲ್ಲದೆ ಪ್ರಮಾಧಿ ಸಂ. (A.D. 1638)ರಲ್ಲಿ ಶ್ರೀರಂಗನಾಥಸ್ವಾಮಿ ದೇವರಿಗೆ ಉಪಯೋಗವಾಗುವಂತೆ ಶಂಖತೀರ್ಥದಲ್ಲಿ ಒಂದು ದೊಡ್ಡ ಸರೋವರವನ್ನು ಕಟ್ಟಿಸಿದರು.

ಮಣಿಕರ್ಣಿಕಾ ಕ್ಷೇತ್ರ - ದೇವರಾಜಸಮುದ್ರ ಅಗ್ರಹಾರ

ಇದು ಕಾವೇರಿಯ ಅಕ್ಕರೆಯಲ್ಲಿರುವುದು. ಇಲ್ಲಿ ಶ್ರೀಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನವಿದೆ. ಗರ್ಭಗೃಹ ಶುಕನಾಸಿ, ರಂಗಮಂಡಪ, ಪ್ರಾಕಾರಗಳಿಂದ ಕೂಡಿರುವುದು. ಇಲ್ಲಿ ದೊಡ್ಡದೇವರಾಜ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಡೆಯರು ಪ್ರತಿದಿನದಲ್ಲಿಯೂ ಸಹಸ್ರಬ್ರಾಹ್ಮಣಸಂತರ್ಪಣೆಯಾಗಬೇಕೆಂದು ಆಲೋಚಿಸಿ ಈ ಮಣಿಕರ್ಣಿಕಾ ತೀರದಲ್ಲಿ ಮನೆಗಳನ್ನು ಕಟ್ಟಿಸಿ ದೇವರಾಜ ಸಮುದ್ರವೆಂಬ ಅಗ್ರಹಾರವನ್ನು ನಿರ್ಮಿಸಿ ಈ ಅಗ್ರಹಾರದಲ್ಲಿರುವ ತ್ರಿಮತಸ್ಥ ಬ್ರಾಹ್ಮಣರಿಗೂ ವೃತ್ತಿಗಳನ್ನು ಕಲ್ಪಿಸಿ ಧರ್ಮ ಮಾಡಿದರು. ಇಲ್ಲಿ ಕಾವೇರಿ ನದಿಗೆ ಸ್ನಾನ ಪಾನಾದಿಗಳಿಗೆ ಅನುಕೂಲವಾಗುವಂತೆ ಕಾಶಿ ಕೆಲಸದ ಸೋಪಾನವನ್ನು ಮುಮ್ಮಡಿ ಕೃಷ್ಣರಾಜೊಡೆಯರು ನಿರ್ಮಿಸಿದರು.

ಆನಂದಾಳ್ವಾರ್ರ ವಂಶೀಕರು ಕಾಲಕ್ರಮದಲ್ಲಿ ಮೈಸೂರು ರಾಜರ ಆಶ್ರಯ ಪಡೆದು ರಾಜಾಸ್ಥಾನ ಪಂಡಿತರಾಗಿದ್ದುದಲ್ಲದೆ ಮೇಲೆ ತಿಳಿಸಿದ ಶ್ರೀಲಕ್ಷ್ಮೀನೃಸಿಂಹಸ್ವಾಮಿಯವರ ಪೂಜಾ ದೇವಸ್ಥಾನದಲ್ಲಿ ಪ್ರಥಮ ತೀರ್ಥ ಶಠಕೋಪ ಮರ್ಯಾದೆಗಳನ್ನು ಹೊಂದಿಬರಲು ಮುಮ್ಮಡಿ ಕೃಷ್ಣರಾಜ ಒಡೆಯರು ನಿರೂಪವನ್ನು ಕೊಟ್ಟಿರುವರು. ಈ ವಂಶೀಕರು ಮಣಿಕರ್ಣಿಕಾ ಕ್ಷೇತ್ರದಲ್ಲೇ ನಿತ್ಯವಾಸಿಗಳಾದ್ದರಿಂದ ಮಣಿಕರ್ಣಿಕಾ ವಾಸಸ್ಥರು - ಮಣಿಕರ್ಣಿಕಾ ಮನೆತನದವರೆಂದೇ ಪ್ರಸಿದ್ಧರಾಗಿರುವರು.

ಶೀರಿಪುತ್ತೂರು ಅಗ್ರಹಾರ (ಕಿರಂಗೂರು) - ಈ ಸ್ಥಳವು ಶ್ರೀರಂಗಪಟ್ಟಣದ ಕೋಟೆ ಹೊರಗೆ ಉತ್ತರಕ್ಕೆ ಕಾವೇರಿ ನದಿಯನ್ನು ದಾಟಿ ಮೇಲುಕೋಟೆಗೆ ಹೋಗುವ ಮಾರ್ಗದಲ್ಲಿ ಸುಮಾರು ೧೫೦೦ ಗಜ ದೂರದಲ್ಲಿದೆ.

ಇಲ್ಲಿಯೇ ಹಿಂದೆ ತಿಳಿಸಿದ ಮಹಾ ವಿದ್ವಾನ್ ಅನಂದಾಳ್ವಾರರ ಜನನ ಸ್ಥಳವು. ಹಿಂದೆ ಅಗ್ರಹಾರವಾಗಿದ್ದು, ಈಗ ಗ್ರಾಮದ ಪರಿಸ್ಥಿತಿಗೆ ಬಂದಿರುವುದು. ಇಲ್ಲಿ ಶ್ರೀ ಸೀತಾರಾಮ ಲಕ್ಷ್ಮಣರ ದೇವಸ್ಥಾನವಿದೆ. ಈ ದೇವಸ್ಥಾನವು ೧೧, ೧೩ ಅಂಕಣ ವಿಸ್ತಾರವುಳ್ಳ ಪ್ರದೇಶದಲ್ಲಿ ನಿಂತಿರುವುದು. ಈ ದೇವಸ್ಥಾನದ ತಳಪಾದಿ ಕಲ್ಲಿನ ಮೇಲೆ ತನಂಗಾಡಿಯಾದ ಪಂಚವಮಾರಾಯ ರಾಜೇಂದ್ರ ಚೋಳನು ಕಟ್ಟಿಸಿದ ಎಂಬ ಶಬ್ದವಿದೆ. ಅದು ಏನು , ಎಲ್ಲಿ ಎಂದು ತಿಳಿಯುವುದಿಲ್ಲ. ಏಕೆಂದರೆ ಇದೇ ರೀತಿ ಕಾಲದ ಶಾಸನ. ಎ.ಡಿ. ೧೧೧೨. ಇನ್ನೊಂದು ಸ್ಥಳದಲ್ಲಿ ಇರುವುದು.

ಗರ್ಭಗುಡಿ - ಚತುರಶ್ರವಾಗಿದೆ . ಶ್ರೀರಾಮ ಸೀತಾ ಲಕ್ಷ್ಮಣರ ಮೂರ್ತಿ ರೂಪದಲ್ಲಿ ಸಾನ್ನಿಧ್ಯಹೊಂದಿರುವರು. ಗರ್ಭಗುಡಿಯಿಂದ ಹೊರಕ್ಕೆ ಬಂದರೆ ಶುಕನಾಸಿ ಮೂರಂಕಣ ಅಗಲ, ಪೂರ್ವ ಪಶ್ಚಿಮ ಎರಡಂಕಣ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಸ್ತಾರವಿದೆ. ಮುಂದಿನ ಭಾಗ ಅಕ್ಕಪಕ್ಕದಲ್ಲಿ ದಕ್ಷಿಣಕ್ಕೆ ನಮ್ಮಾಳ್ವಾರು ಉತ್ತರಕ್ಕೆ ರಾಮಾನುಜರು ಬಿಜಯ ಮಾಡಿಸಿರುತ್ತಾರೆ. ಅಲ್ಲಿಂದೆ ಹೊರಕ್ಕೆ ಮುಂದಿನ ಭಾಗ ಮಂಡಪ . ಮೂರಂಕಣ ಅಗಲ, ಒಂದಂಕಣ ಉದ್ದದಿಂದ ಕೂಡಿರುವುದು. ಅಲ್ಲಿಂದ ಹೊರಕ್ಕೆ ಪ್ರದಕ್ಷಿಣ ಮಾರ್ಗ. ಈ ದೇವಸ್ಥಾನದಲ್ಲಿ ಶಿಲ್ಪಾಲಂಕಾರವಾಗಲೀ, ಗೋಪುರ ವಿಮಾನ ಕಲಶಗಳಾವುದೂ ಇರುವುದಿಲ್ಲ.

ಹಿಂದಿನ ಅಗ್ರಹಾರ ದೇವಸ್ಥಾನಗಳು ಎಲ್ಲವೂ ನಷ್ಟವಾಗಿ ಯಾವುದೂ ಕಾಣಬರುವುದಿಲ್ಲ. ಗ್ರಾಮಕ್ಕೆ ದೇವಸ್ಥಾನವು ಬೇಕಾದ್ದರಿಂದ ಈ ಸೀತಾರಾಮ ದೇವಸ್ಥಾನವನ್ನು ನಿರ್ಮಿಸಿಕೊಂಡಿರುವರು.

ಶ್ರೀ ಅನಂತಾಚಾರ್ಯರ ಜನ್ಮಸ್ಥಳ - ಮೇಲೆ ತಿಳಿಸಿದ ದೇವಸ್ಥಾನದ ಎದುರಿಗೆ ಅನಂದಾಳ್ವಾರ ಜನ್ಮಸ್ಥಳ ಜ್ಞಾಪಕಾರ್ಥವಾಗಿ ಮಂಡಪವಿದೆ. ಈ ಮಂಡಪದಿಂದ ಉತ್ತರಕ್ಕೆ ಸ್ವಲ್ಪದೂರದಲ್ಲಿ ಒಂದು ಕೊಳವಿದೆ. ಒಂದು ಕಾಲದಲ್ಲಿ ಆ ಕೊಳದಲ್ಲಿ ಸ್ನಾನ ಸಂಧ್ಯಾ ಅನುಷ್ಠಾನಾದಿಗಳು ನಡೆಯುತ್ತಿದ್ದವು. ಈಗ ಕೊಳವು ಶಿಥಿಲಾವಸ್ಥೆಯಲ್ಲಿರುವುದು. ಪ್ರಕೃತ ಆ ಸ್ಥಳಗಳೆಲ್ಲವೂ ಪನ್ಯಾಕ್ರಾಂತವಾಗಿರುವುದು. ಪ್ರಕೃತ ಭಕ್ತ ಮಹನೀಯರು ಅನಂದಾಳ್ವಾರ ವಂಶೀಕರು ಎಲ್ಲರೂ ಸೇರಿ ಆ ಸ್ಥಳವನ್ನು ಜೀರ್ಣೋದ್ಧಾರ ಮಾಡುವ ವ್ಯವಸ್ಥೆಯಲ್ಲಿರುವರು.

ಅಷ್ಟತೀರ್ಥ - ಕಾವೇರಿ ನದಿಯು ಕೊಡಗಿನಲ್ಲಿ ಆವಿರ್ಭಾವವಾಗಿ ಸಮುದ್ರವನ್ನು ಸೇರುವ ವೇಳೆಗೆ ಲೋಕದ ಜನರಿಗೆ ಅನ್ನಪಾನ ಸ್ನಾನಾದಿಗಳಿಗೆ ಉಪಕಾರವಾಗಿರುವುದರಿಂದ ಎಲ್ಲಿ ಪಾನ, ಸ್ನಾನ ಮಾಡಿದರೂ ಪಾಪನಾಶನವಾಗಿ ಪುಣ್ಯವುಂಟಾಗುವುದು. ಗಂಗೆ,ಯಮುನೆಗಳಲ್ಲಿ ಸ್ನಾನ ಮಾಡಿದರೆ ಪಾಪವು ಪರಿಹಾರವಾಗುವುದು. ಕಾವೇರಿ ನದಿಯ ದರ್ಶನ ಸ್ಪರ್ಶನಾದಿಗಳಿಂದಲೇ ಪಾಪ ಪರಿಹಾರವಾಗುವುದು.

ಗೌತಮ ತೀರ್ಥ - ಇಲ್ಲಿ ಗೌತಮ ಮುನಿಗಳ ಮಂಡಪವಿದೆ. ಕಾವೇರಿಯು ಕವಲೊಡೆದು ಬರುವ ಸ್ಥಳದಲ್ಲಿ ಗೌತಮರು ಸ್ನಾನ ಸಂಧ್ಯಾವಂದನೆಗಳನ್ನು ನಡೆಸುತ್ತಿದ್ದುದರಿಂದ ಆ ಸ್ಥಳಕ್ಕೆ ಗೌತಮ ತೀರ್ಥವೆಂದು ಹೆಸರು. ಅಲ್ಲಿ ಸ್ನಾನ ಮಾಡುವುದರಿಂದ ಸಕಲ ಪಾಪಪರಿಹಾರವಾಗಿ ಜ್ಞಾನವುಂಟಾಗಿ ಪಶ್ಚಿಮರಂಗನಾಥನ ಸಾಯುಜ್ಯ ಪದವಿಯನ್ನು ಹೊಂದುವರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಹ್ಮತೀರ್ಥ - ವಿಷ್ಣುತೀರ್ಥ - ಕಾವೇರಿ ತೀರದ ಮಂಡ್ಯದ ಕೊಪ್ಪಲು ದಡದಲ್ಲಿ ಸ್ನಾನಘಟ್ಟವಿದೆ. ಈ ತೀರ್ಥಕ್ಕೆ ಬ್ರಹ್ಮತೀರ್ಥವೆಂದು ಹೆಸರು. ಇದಕ್ಕೆ ಪಶ್ಚಿಮದಲ್ಲಿ ವಿಷ್ಣುತೀರ್ಥವು. ಶ್ರೀ.ಪ.೧೧೭,೧೧೮

ಗಂಗಾತೀರ್ಥ - ಪ್ರಸನ್ನ ಭ್ರಮರೇಶ್ವರ ತೀರ್ಥ- ಮಂಡ್ಯದ ಕೊಪ್ಪಲಿಗೆ ಪಶ್ಚಿಮದಲ್ಲಿ ಸ್ನಾನಘಟ್ಟವಿದೆ. ಅದಕ್ಕೆ ಗಂಗಾತೀರ್ಥವೆಂದು ಹೆಸರು. ಅದಕ್ಕೆ ಶಂಭುತೀರ್ಥ ಅಥವಾ ಪ್ರಸನ್ನ ಭ್ರಮರೇಶ್ವರ ತೀರ್ಥ ಎಂದು ಹೆಸರು. ಇಲ್ಲಿ ಸ್ನಾನ ಮಾಡಿದರೆ ಬ್ರಹ್ಮಹತ್ಯಾದೋಷಗಳಿಂದ ನಿವೃತ್ತರಾಗುವರು.

ಶ್ರೀ.ಪ. ೧೧೯, ೧೨೦

ಮೋಕ್ಷತೀರ್ಥ - ಇದು ತ್ರಿವಥಗಾ ಸಂಗಮಸ್ಥಳ. ಉಭಯ ಕಾವೇರಿ ಪ್ರವಾಹ ಸೇರುವ ಸ್ಥಳದಲ್ಲಿ ಗುಪ್ತಗಾಮಿನಿಯಾಗಿ ಗಂಗೆಯೂ ಸೇರುತ್ತಾಳೆ. ಈ ಸ್ಥಳದಲ್ಲಿ ಬೋಧಾಯನ ಋಷಿಯೂ ತಪಸ್ಸು ಮಾಡಿ ಮೊಕ್ಷ ಸಂಪಾದಿಸಿದನು. ಇದೇ ಸ್ಥಳದಲ್ಲಿ ಗೌತಮಋಷಿಯು ಪರಂಧಾಮ ಹೊಂದಿದನು. ಆದ್ದರಿಂದ ಈ ಸ್ಥಳಕ್ಕೆ ಮೋಕ್ಷತೀರ್ಥವೆಂದು ಹೆಸರು. ಇಲ್ಲಿ ಸ್ನಾನ ಮಾಡಿದವರಿಗೆ ಭುಕ್ತಿಮುಕ್ತಿ ಅನಂತಾನಂತಫಲಗಳು ಲಭಿಸುತ್ತವೆ.

ಶುಕತೀರ್ಥ - ಕಂಠೀರವ ನರಸರಾಜರು ಪ್ರಮಾಥಿ ಸಂ. ದಲ್ಲಿ ಶ್ರೀರಂಗನಾಥರಿಗೆ ಉಪಯೋಗವಾಗುವಂತೆ ಶ್ರೀರಂಗಪಟ್ಟಣದ ಶುಕತೀರ್ಥದಲ್ಲಿ ದೊಡ್ಡದಾದ ಸರೋವರವನ್ನು ಕಟ್ಟಿಸಿದರು.

ಚಂದ್ರವನ - ಚಾಮರಾಜೇಶ್ವರ (ಈಶ್ವರ ಗುಡಿ)

ಮುಮ್ಮಡಿ ಕೃಷ್ಣರಾಜೊಡೆಯರು ಕಾವೇರಿಗೆ ಸೋಪಾನವನ್ನು ಕಟ್ಟಿಸಿ ತಮ್ಮ ತಂದೆಗಳಾದ ಚಾಮರಾಜ ಒಡೆಯರ ದಹನಸ್ಥಳದಲ್ಲಿ ಅವರ ಜ್ಞಾಪಕಾರ್ಥವಾಗಿ ದೇವಸ್ಥಾನವನ್ನು ಕಟ್ಟಿಸಿ ಚಾಮರಾಜೇಶ್ವರನೆಂಬ ಶಿವಲಿಂಗ ಪ್ರತಿಷ್ಠೆ ಮಾಡಿಸಿದರು.

ಚಾಮರಾಜ ಒಡೆಯರ ಕಾಲ

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲ ೧೭೭೯ - ೧೮೬೮

ಶ್ರೀ.ಪ. ೫೭ - ೫೮

ಬೃಂದಾವನ - ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಮಾತೃಶ್ರೀಯವರಾದ ಕೆಂಪನಂಜಮ್ಮಣ್ಣಿಯವರ ದಹನಸ್ಥಳದಲ್ಲಿ ಬೃಂದಾವನವನ್ನು ಕಟ್ಟಿಸಿ ಎರಡು ವೇಳೆ ಪೂಜೆ ಮತ್ತು ನಾಲ್ಕು ವೇಳೆ ನೌಪತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಾದ್ಯ ನಡೆಯುವಂತೆ ಕಟ್ಟಳೆ ಮಾಡಿದರು. ಶ್ರೀ.ಪ. ೫೭,೫೮

ಹೈದರನಾಯಕ ಮತ್ತು ಟೀಪೂ ಇವರ ಸ್ಮಾರಕಗಳು -

ಗಂಜಾಂ ಎಂಬ ಊರಿಗೆ ಹೋಗುವ ಮಾರ್ಗದಲ್ಲಿ ಹೈದರನಾಯಕ, ಟೀಪು ಮತ್ತು ಸೈನ್ಯಾಧಿಕಾರಿ ಸಯ್ಯದ್ ಹಮೀರ್, ರಾಜಕುಮಾರ ನಿಜಾಮುದ್ದಿನ್, ಟೀಪುವಿನ ತಾಯಿ, ಪ್ರಕ್ಕುನೀಸ್ ಬೇಗಂ ಇವರ ಸ್ಮಾರಕ ಕಟ್ಟಡಗಳಿವೆ.

ಈ ಸ್ಥಳಕ್ಕೆ ಈಶಾನ್ಯಭಾಗದಲ್ಲಿ ದಣ್ಣನಾಯಕ ಕರ್ನಲ್ ಬೇಲಿ ಸಮಾಧಿ ಸ್ಥಳದಲ್ಲಿ ಒಂದು ಮಂಟಪವನ್ನು ೧೮೧೬ರಲ್ಲಿ ಬೇಲಿಯ ಸೋದರಳಿಯ ಲೆಫ್ಟಿನೆಂಟ್ ಕರ್ನಲ್ ಜಾನ್ ಬೇಲಿ ಎಂಬುವನು ಸ್ಥಾಪಿಸಿದನು.

ಕೌಲ್ ಬಜಾರ್ - ಈ ಸ್ಥಳವು ಗಂಜಾಂ ಸ್ಥಳದಲ್ಲಿ ದೊಡ್ಡ ವ್ಯಾಪಾರ ಸ್ಥಳವಾಗಿದ್ದಿತು. ೧೭೯೧ರಲ್ಲಿ ಇಲ್ಲಿ ಭವ್ಯವಾದ ಒಂದು ಚಪ್ಪರದ ಮಂಡಪವನ್ನು ಕಟ್ಟಿ ಆ ಸ್ಥಳದಲ್ಲಿ ಸರದಾರ ಕಾರನ್‌ವಾಲೀಸ್ ಅವರನ್ನು ಟೀಪುವು ಬೇಟಿಮಾಡಿದನು. ಇಲ್ಲಿ ಕೌಲಿನ ಖರಾರು ಬರೆಯಲ್ಪಟ್ಟಿತು. ಈ ಸ್ಥಳದಲ್ಲೇ ಟೀಪುವು ತನ್ನ ಮಕ್ಕಳನ್ನು ಒತ್ತೆಯಾಗಿಟ್ಟನು. ಇದನ್ನನುಸರಿಸಿ ಕೌಲುಬಜಾರೆಂದು ಕರೆದರು.

ಚಂದ್ರವನ - ಶ್ರೀಚಲುವರಾಯಸ್ವಾಮಿ ದೇವಸ್ಥಾನ - ಹೊಯ್‌ಸಳ ನರಸಿಂಹದೇವನ ಕಾಲದಲ್ಲಿ ನಿರ್ಮಿಸಲ್ಪಟ್ಟಿರುವಂತೆ ತಿಳಿಯಬರುತ್ತದೆ. ಈ ದೇವಸ್ಥಾನದಲ್ಲಿ ಸುಧೆಯಿಂದ ನಿರ್ಮಿಸಲ್ಪಟ್ಟ ಮೂರು ಮೂರ್ತಿಗಳಿವೆ. ೧. ನಾರಾಯಣಮೂರ್ತಿ, ೨.ಚಲುವರಾಯ ಮೂರ್ತಿ, ೩.ಕೇಶವ ಮೂರ್ತಿ.

ಶ್ರೀ.ಪ.೫೬

ಪಶ್ಚಿಮ ವಾಹಿನಿ - ಕಾವೇರಿ ನದಿ ಪಶ್ಚಿಮ ಕವಲಿನ ದಂಡೆಯ ಮೇಲಿನ ಒಂದು ಸ್ಥಳ. ಶ್ರೀರಂಗಪಟ್ಟಣದ ಬಲಪಕ್ಕದಲ್ಲಿರುವುದು. ಶ್ರೀರಂಗಪಟ್ಟಣದ ಪಶ್ಚಿಮ ತುದಿಯಲ್ಲಿ ಕಾವೇರಿ ನದಿ ಎರಡಾಗಿ ಕವಲೊಡೆದು ದಕ್ಷಿಣ ಕವಲಿನ ಒಂದು ಉಪಕವಲು ಸ್ವಲ್ಪದೂರ ಪಶ್ಚಿಮಕ್ಕೆ ತಿರುಗಿ ಹರಿಯುವುದರಿಂದ ಇದಕ್ಕೆ ಪಶ್ಚಿಮವಾಹಿನಿ ಎಂದು ಕರೆಯಲಾಗಿದೆ. ಅದೇ ಹೆಸರಿನಿಂದಲೇ ಊರನ್ನೂ ಕರೆಯುತ್ತಾರೆ. ಈ ಕವಲು ಮುಂದೆ ಸಂಗಮದಲ್ಲಿ ಕೂಡಿಕೊಳ್ಳುವುದು. ಇದು ಪವಿತ್ರ ತೀರ್ಥಸ್ಥಳವಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೃಷ್ಣರಾಜಸೋಪಾನ - ಸ್ನಾನಘಟ್ಟ - ಮುಮ್ಮಡಿ ಕೃಷ್ಣರಾಜ ಒಡೆಯರು ಸ್ನಾನ ಪಾನಾದಿಗಳಿಗೆ ಅನುಕೂಲವಾಗುವಂತೆ ಪಶ್ಚಿಮವಾಹಿನೀ ಕಾವೇರಿ ನದಿಗೆ ಅತಿ ವಿಸ್ತಾರವಾಗಿಯೂ, ಮನೋಹರವಾಗಿಯೂ ಇರುವಂತೆ ಕಾಶೀ ಕಲಸದ ಸೋಪಾನವನ್ನು ನಿರ್ಮಿಸಿದರು. ಅಲ್ಲದೆ ಸಂಧ್ಯಾ ಮಂಡಪ, ಅಂತಃಪುರ ರಾಜಸ್ತ್ರೀಯರಿಗೆ ಸ್ನಾನಘಟ್ಟ, ಧರ್ಮಶಾಲೆ ಮುಂತಾಗಿ ಕಟ್ಟಿಸಿದರು.

ಶಕ ೧೩೦೮ ಕ್ರೋಧನ ಸಂ. ಮಾಘ ಬಹುಳ ಚತುರ್ದಶಿ ಸೋಮವಾರ (29-1-1386) ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀವಿದ್ಯಾರಣ್ಯಶ್ರೀಪಾದಂಗಳು ಶೃಂಗಪುರದ ರಥೀತರಗೋತ್ರದ ಅಯ್ಯಪ್ಪನ ಮಗ ವಿಷ್ಣುಭಟ್ಟರಿಗೆ ಕೊಟ್ಟ ಬೊಲ್ಲರಸೂರು ಕಿಕುಂದನಾಡ ಹರವರ್ಯಲಿ ನಡುವಣ ಭಾಗದೊಳಗೆ ಕುಲಗೌಡನ ಕುಳವಕಡಿದು ಸಮಗ್ರವಾಗಿ ಕೊಟ್ಟ ಪಶ್ಚಿಮವಾಹಿನಿಯ ಗೋಪಾಲದೇವರ ಅಮೃತಪಡಿಗೆ ಸಮರ್ಪಿಸಿದ ಧರ್ಮ.

ಮೇಲಿನ ಶಾಸನದಿಂದ ಇಲ್ಲಿ ಗೋಪಾಲದೇವರ ಗುಡಿ ಮೂರ್ತಿ ಇರಬೇಕು. ಈಗ ಅದು ಯಾವುದೂ ಇರುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರೀಘಟ್ಟ - ಶ್ರೀ ಶ್ರೀನಿವಾಸ ದೇವಸ್ಥಾನ

ಕಾವೇರಿ ತೀರದಲ್ಲಿನ ರಾಜಧಾನಿ ಶ್ರೀರಂಗಪಟ್ಟಣಕ್ಕೆ ಮೂರು ಮೈಲಿದೂರದಲ್ಲಿ ಕಾವೇರಿ, ಲೋಕಪಾವನಿ ಸಂಗಮ ಸ್ಥಳದಲ್ಲಿ ಚಿಕ್ಕದಾದ ಗುಡ್ಡವಿದೆ. ಪ್ರಕೃತಿಸೌಂದರ್ಯದಿಂದ ಕೂಡಿರುವುದು. ಈ ಗುಡ್ಡದ ಮೇಲೆ ಸಮಸ್ಥಳದಲ್ಲಿ ಶ್ರೀ ಶ್ರೀನಿವಾಸಸ್ವಾಮಿ ಸಾನ್ನಿಧ್ಯಹೊಂದಿರುವರು. ದೇವಸ್ಥಾನವು ಸಭಾಗೃಹ, ಶುಕನಾಸಿ ರಂಗಮಂಡಪ ಮುಂತಾಗಿ ವಿಶಾಲವಾಗಿರುವುದು -

ಕರಿಘಟ್ಟ - ಈ ಶಬ್ದದ ಅರ್ಥ ಕರಿ = ಗಜ = ಆನೆ. ಘಟ್ಟ = ಇರುವ ಸ್ಥಳ - ಗಜಶಾಲೆ ಅಥವಾ ಕರಿಘಟ್ಟ ಶ್ರೀರಂಗಪಟ್ಟಣದ ಆಳ್ವಿಕೆ ರಾಜಮಹಾರಾಜರುಗಳು ಈ ಬೆಟ್ಟದ ಸಮೀಪದಲ್ಲಿ ಗಜಶಾಲೆ (ಕರಿಘಟ್ಟ) ಇಟ್ಟಿರಬಹುದು. ಇದನ್ನನುಸರಿಸಿ ಬೆಳಗೊಳದ ಜನಾರ್ದನಸ್ವಾಮಿ ದೇವಸ್ಥಾನದ ಎದುರಿಗೆ ಇರುವ ಕೆರೆ ಮೈದಾನ ಸಹ ಗಜಶಾಲೆಯಾಗಿದ್ದುದಕ್ಕೆ ಕೆಲವು ಗುರುತುಗಳು ಕಾಣಬರುತ್ತವೆ. ಕರಿಘಟ್ಟ ಬೆಟ್ಟವು ಸಮುದ್ರ ಮಟ್ಟಕ್ಕೆ ಸುಮಾರು ೨೬೯೭ ಅಡಿ ಎತ್ತರದಲ್ಲಿರುವುದು. ಕರೀಘಟ್ಟವನ್ನು ಸಂಸ್ಕೃತದಲ್ಲಿ ನೀಲಾಚಲ ಪರ್ವತವೆಂದು ಕರೆಯುತ್ತಾರೆ.

ಬೆಟ್ಟಕ್ಕೆ ಸೋಪಾನ ಮಾರ್ಗ - ಬೆಟ್ಟದ ಮೇಲೆ ಸಾನ್ನಿಧ್ಯಹೊಂದಿರುವ ಶ್ರೀಶ್ರೀನಿವಾಸಸ್ವಾಮಿ, ದೇವರನ್ನು ದರ್ಶಿಸಲು ಬರುವ ಭಕ್ತ ಜನಗಳ ಸೌಕರ್ಯವಾಗಿ ಕಂಠೀರವ ನರಸರಾಜರು ಈ ಸೋಪಾನ ಮಾರ್ಗವನ್ನು ಕಟ್ಟಿಸಿದರು. ಈ ಮಾರ್ಗವು ಸುಮಾರು ೩೫೦ ಮೆಟ್ಟಲುಗಳನ್ನು ಹೊಂದಿವೆ.

ಚಿಕ್ಕದೇವಸಾಗರ ನಾಲೆ - ಚಿಕ್ಕದೇವರಾಜ ಒಡೆಯರು ಶ್ರೀರಂಗಪಟ್ಟಣದ ಕಾವೇರಿ ನದಿಗೆ ಅಣೆಕಟ್ಟೆಯನ್ನು ಕಟ್ಟಿಸಿ ಆ ನದಿಯ ಎರಡು ಪಾರ್ಶ್ವಗಳಲ್ಲಿಯೂ ಕಾಲುವೆಗಳನ್ನು ತಂದು, ಉತ್ತರಪಾರ್ಶ್ವ ಕಾಲುವೆ ನೀರು ಕರೀಘಟ್ಟದ ಮೇಲೆ ಬರುವಂತೆ ಮಾಡಿರುವರು. ಈ ನಾಲೆಗೆ ಚಿಕ್ಕದೇವಸಾಗರ ಎಂದೂ, ದಕ್ಷಿಣಪಾರ್ಶ್ವದ ಕಾಲುವೆಗೆ ದೇವನಾಲೆ ಎಂದೂ ಪ್ರಸಿದ್ಧವಾಯಿತು.

ದೇವಸ್ಥಾನ - ಬೆಟ್ಟವನ್ನು ಹತ್ತಿಬಂದ ಮೇಲೆ ಮಟ್ಟವಾದ ಹೆಚ್ಚು ತಗ್ಗುಗಳಿಲ್ಲದ ಸಮಭೂಮಿ ಸುಮಾರು ೨೦೦ X ೧೫೦ ಅಡಿ ವಿಸ್ತಾರವಾದ ಸ್ಥಳದಲ್ಲಿ ದೇವಸ್ಥಾನವು ಕಟ್ಟಲ್ಪಟ್ಟಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗರ್ಭಗೃಹ - ಚತುರಶ್ರವಾಗಿದೆ. ಅಂತರಾಳದ ಮೇಲೆ ಪದ್ಮಾಲಂಕಾರ ವಿತಾನವಿದೆ. ಇಲ್ಲಿ ಮೂಲದೇವರು ಶ್ರೀಶ್ರೀನಿವಾಸ ದೇವರ ಸಾನ್ನಿಧ್ಯವು ಸ್ಥಿತರೂಪ, ಸಮಭಂಗ ಚತುರ್ಭುಜ ಮೇಲಿನ ಬಲದಕೈಯಲ್ಲಿ ಚಕ್ರ, ಎಡದ ಕೈಯಲ್ಲಿ ಶಂಖವಿದೆ. ಕೆಳಗಿನ ಬಲದ ಕೈ ವರದಹಸ್ತ ಎಡದ ಕೈ ಕಟಿ ಹಸ್ತವಾಗಿದೆ. ಕಿರೀಟ, ಕುಂಡಲ, ಹಾರ, ಕೇಯೂರ ಶ್ರೀವತ್ಸಾದಿಗಳಿಂದಲಂಕೃತವಾಗಿರುವರು. ಹಿಂಭಾಗದಲ್ಲಿ ಸುಂದರವಾದ ಅಲಂಕಾರಯುತ ಪ್ರಭಾವಳೆ ಇರುವುದು.

ಗರ್ಭಗೃಹದಿಂದ ಹೊರಕ್ಕೆ ಬಂದರೆ ಶುಕನಾಸಿ - ಅಲ್ಲಿಂದ ಹೊರಕ್ಕೆ ಬಂದರೆ ನವರಂಗವು.

ನವರಂಗವು - ಶುಕನಾಸಿಯಿಂದ ಹೊರಕ್ಕೆ ಬಂದರೆ ನವರಂಗವು ೫x೫=೨೫. ಅಂಕಣ ವಿಸ್ತಾರವಾಗಿ ೧೬ ಕಂಭಗಳನ್ನೊಳಗೊಂಡಿದೆ. ಕಂಭಗಳಲ್ಲಿ ಯಾವ ಶಿಲ್ಪಾಲಂಕಾರವೂ ಇರುವುದಿಲ್ಲ. ಶುಕನಾಸಿಯಿಂದ ಹೊರಕ್ಕೆ ಬರುವ ದ್ವಾರದ ಉಭಯ ಪಾರ್ಶ್ವಗಳಲ್ಲಿಯೂ ಸನ್ನಿಧಿಗಳಿರುತ್ತವೆ. ನವರಂಗವು ೨೫ ಅಂಕಣ. ವಿಸ್ತಾರವಾಗಿ ೧೬ ಕಂಭಗಳನ್ನೊಳಗೊಂಡಿರುತ್ತದೆ. ಈ ಕಂಭಗಳಲ್ಲಿ ಕೆತ್ತನೆ ಕೆಲಸ ಶಿಲ್ಪಾಲಂಕಾರಗಳಾವುದೂ ಇರುವುದಿಲ್ಲ. ಉತ್ತರ ಭಾಗದಲ್ಲಿ ಹೊರಕ್ಕೆ ಬರಲು ಒಂದು ದ್ವಾರವಿರುವುದು. ಅದನ್ನು ಸ್ವರ್ಗದ ಬಾಗಿಲೆಂದು ಕರೆಯುವರು. ಸಂಕ್ರಾಂತಿ ಹಬ್ಬದ ದಿನ (ಉತ್ತರಾಯಣ ಪುಣ್ಯಕಾಲ) ಉತ್ಸವಮೂರ್ತಿ ಈ ದ್ವಾರದಿಂದ ಹೊರಕ್ಕೆ ಬಿಜಯಮಾಡಿಸುವರು.

ಶುಕನಾಸಿ ದ್ವಾರದ ಉಭಯ ಪಾರ್ಶ್ವಗಳ ಬಲಭಾಗದಲ್ಲಿರುವ ಸನ್ನಿಧಿಯಲ್ಲಿ ಮೂರ್ತಿ ಇರಬೇಕು. ಈಗ ಯಾವ ಮೂರ್ತಿಯೂ ಇರುವುದಿಲ್ಲ. ನಷ್ಟವಾಗಿರಬೇಕು. ಈ ಸ್ಥಳವನ್ನು ದೇವಸ್ಥಾನದ ಕೈಂಕರ್ಯಾದಿಕಾರ್ಯಗಳಿಗೆ ಬೇಕಾದ ವಸ್ತುಗಳನ್ನಿಟ್ಟುಕೊಂಡಿರುವರು. ಉತ್ತರ ಭಾಗದ ಸನ್ನಿಧಿಯಲ್ಲಿ ತದ್ವತ್ ಮೂಲಮೂರ್ತಿಯಂತಿರುವ ಶ್ರೀನಿವಾಸ ದೇವರು. ಪ್ರಭಾವಳೆ ಇರುವುದು. ಪೀಠಭಾಗದಲ್ಲಿ ಶ್ರೀ ಭೂ ಅಮ್ಮನವರ ಪ್ರತಿಕೃತಿ ಇರುವುದು. ಆದ್ದರಿಂದ ಈ ಮೂರ್ತಿಯನ್ನು ಭೋಗ ಶ್ರೀನಿವಾಸನೆಂದು ಕರೆಯುವರು. ಬಲಭಾಗದ ವಸ್ತುಗಳನ್ನಿಟ್ಟುಕೊಂಡಿರುವ ಪಕ್ಕದಲ್ಲಿ ಉತ್ತರಾಭಿಮುಖವಾಗಿ ಸನ್ನಿಧಿಯೊಂದಿರುವುದು ಅದರಲ್ಲಿ ಮೂಲಮೂರ್ತಿ ತದ್ವತ್ ಸ್ವರೂಪವುಳ್ಳ ಶ್ರೀನಿವಾಸಮೂರ್ತಿ ಇರುವುದು. ಇಲ್ಲಿ ಪೀಠಭಾಗದಲ್ಲಿ ಯಾವ ಸ್ತ್ರೀ (ಶ್ರೀ ಭೂ ಅಮ್ಮನವರ) ಮೂರ್ತಿಗಳೂ ಇರುವುದಿಲ್ಲ. ಆದ್ದರಿಂದ ಈ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೂರ್ತಿಯನ್ನು ಯೋಗ ಶ್ರೀನಿವಾಸನೆಂದು ಕರೆಯುವರು.

ಸಂಶಯ ನಿವಾರಣೆ - ದೇವಸ್ಥಾನದಲ್ಲಿ ಒಂದೇ ರೂಪವುಳ್ಳ ಎರಡು ಮೂರ್ತಿಗಳನ್ನು ಪ್ರತಿಷ್ಠಿಸುವುದಿಲ್ಲ. ವಿಷ್ಣುವಿಗೆ ಅವತಾರಾದಿ ಅನೇಕ ರೂಪಗಳಿವೆ. ಬೇರೆ ಬೇರೆ ರೂಪಗಳಿಂದ ಪ್ರತಿಷ್ಠಿಸುವರು. ಅಲ್ಲದೆ ಯೋಗ, ಭೋಗವೆಂದು ಕರೆಯಲ್ಪಡುವ ಮೂರ್ತಿ ಲಕ್ಷಣಗಳೇ ಬೇರೆ. ಈ ಎರಡು ಮೂರ್ತಿಗಳೂ ಬೇರೆ ಎಲ್ಲಿಯೋ ಇದ್ದು, ರಕ್ಷಣಾರ್ಥವಾಗಿ ತಂದು ಇಲ್ಲಿ ಪ್ರತಿಷ್ಠಿಸಿರುವರು ಎಂದು ತಿಳಿಯಬೇಕು.

ಉತ್ಸವಮೂರ್ತಿ ತದ್ವತ್ ಮೂಲಮೂರ್ತಿ. ಸ್ಥಿತರೂಪ, ಸಮಭಂಗ ಚತುರ್ಭುಜ ಮೇಲಿನ ಬಲದ ಕೈಯಲ್ಲಿ ಚಕ್ರ, ಎಡದಕೈಯಲ್ಲಿ ಶಂಖವಿದೆ. ಕೆಳಗಿನ ಬಲದಕ್ಕೈ ವರದಹಸ್ತ. ಎಡದಕ್ಕೈ ಕಟಿಹಸ್ತ. ಕಿರೀಟ ಹಾರ ಕುಂಡಲ ಶ್ರೀವತ್ಸಾದ ಅಲಂಕಾರಗಳಿಂದ ಶೋಭಿಸುವರು.

ಈ ಉತ್ಸವಮೂರ್ತಿಯು ರಕ್ಷಣಾರ್ಥವಾಗಿ ಬೆಟ್ಟದ ಕೆಳಗೆ ಅರ್ಚಕರ ಸ್ವಾಧೀನದಲ್ಲಿರುವುದು.

ದೇವಸ್ಥಾನದಲ್ಲಿ ಸ್ಥಳಾವಕಾಶ, ಇತರ ಸೌಕರ್ಯಗಳಿಲ್ಲವಾದ್ದರಿಂದ ಈ ನವರಂಗದಲ್ಲಿ ಆಳ್ವಾರಾಚಾರ್ಯರ ಮೂರ್ತಿಗಳನ್ನಿಟ್ಟಿರುವರು. ಆ ಮೂರ್ತಿಗಳಲ್ಲಿ ವಿಷ್ವಕ್ಸೇನರು, ನಮ್ಮಾಳ್ವಾರು, (ಎರಡು ಮೂರ್ತಿಗಳಿವೆ) ಶ್ರೀ ರಾಮಾನುಜರು, ಮಣವಾಳಮಾಮುನಿಗಳ ಮೂರ್ತಿಗಳಿವೆ. ಭಕ್ತವಿಗ್ರಹ ಗುರುಗಳಲ್ಲಿ ಯಾರನ್ನಾದರೂ ಒಬ್ಬರು ಅದರಲ್ಲೂ ಶ್ರೀರಾಮಾನುಜರ ವಿಗ್ರಹ-ಮೂರ್ತಿ ಪ್ರತಿಷ್ಠಿತವಾಗದಿದ್ದಲ್ಲಿ ಆ ದೇವಸ್ಥಾನದಲ್ಲಿ ತೀರ್ಥಪ್ರಸಾದ ಸ್ವೀಕರಿಸಬಾರದೆಂಬ ಆಗಮಶಾಸ್ತ್ರ ನಿಯಮವುಂಟು.

ನವರಂಗದಿಂದ ಹೊರಕ್ಕೆ ಬಂದರೆ ವಿಶಾಲವಾದ ತೆರೆದ ಸ್ಥಳ ಪ್ರದಕ್ಷಿಣವಾಗಿ ಬರುವಾಗ ದಕ್ಷಿಣಭಾಗದಲ್ಲಿ ಶ್ರೀಲಕ್ಷ್ಮೀ ಅಮ್ಮನವರ ಸನ್ನಿಧಿ - ಗರ್ಭಗೃಹ, ಚತುರಶ್ರವಾಗಿದೆ. ಶ್ರೀ ಲಕ್ಷ್ಮೀಅಮ್ಮನವರು ಸಾನ್ನಿಧ್ಯಸ್ಥಳ. ಪ್ರಭಾವಳಿ ಸಹಿತ ಪದ್ಮಾಸನರೂಪ, ಚತುರ್ಭುಜ, ಮೇಲಿನ ಎರಡು ಕೈಗಳಲ್ಲಿ ಪದ್ಮವನ್ನು ಹಿಡಿದಿರುತ್ತಾರೆ. ಕೆಳಗಿನ ಎರಡು ಕೈಗಳು ಅಭಯವರದ ಹಸ್ತಗಳು. ಕಿರೀಟ ಹಾರ,ಕುಂಡಲಾದಿಗಳಿಂದಲಂಕೃತರು. ಇಲ್ಲಿ ಇವರಿಗೆ ಪದ್ಮಾವತಿ ಎಂದು ಕರೆಯುತ್ತಾರೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುಂದೆ ಪ್ರದಕ್ಷಿಣವಾಗಿ ಬಂದರೆ ಆಂಜನೇಯಸ್ವಾಮಿ ಅವರ ಪಕ್ಕದಲ್ಲಿ ದೊಡ್ಡ ಮಂಡಪ, ಅದರಲ್ಲಿ ಗರ್ಭಗೃಹ, ಮುಂದೆ ೧೫ ಅಂಕಣ ವಿಸ್ತಾರವಾದ ಮಂಡಪ, ಗರ್ಭಗೃಹದಲ್ಲಿ ಪಟ್ಟಾಭಿರಾಮರಿದ್ದಾರೆ. ಆಸೀನಮೂರ್ತಿ, ಬಲದಪಾದ ಮಡಿಸ್ಕಿ ಎಡದಪಾದ ಇಳಿಬಿಟ್ಟಿರುವರು. ವರದಹಸ್ತ. ಬಲಭಾಗದಲ್ಲಿ ಸೀತಾದೇವಿ ಎಡಭಾಗದಲ್ಲಿ ಲಕ್ಷ್ಮಣಸ್ವಾಮಿ. ದೇವರ ಪಾದವನ್ನು ಆಂಜನೆಯಸ್ವಾಮಿ ಹಿಡಿದಿರುವರು.

ಮುಂದೆ ಬಂದರೆ ಹೊರಟ ಸ್ಥಳಕ್ಕೆ ಬರುತ್ತೇವೆ. ದೇವರ ಎದುರಿಗೆ ನೇರಾಗಿ ಬೃಹದಾಕಾರ ಗರುಡ ಮೂರ್ತಿ ವೀರಾಸನದಲ್ಲಿರುವರು. ಅವರಿಗೆ ಸೇರಿದಂತೆ ಪೂರ್ವಭಾಗಕ್ಕೆ

ಧ್ವಜಸ್ತಂಭ - ಶಕ ೧೭೭೮ ರಾಕ್ಷಸ ಸಂ. ಮಾಘ ಶುದ್ಧ ೧೨ ಭಾನುವಾರ (A.D. 17-2-1856) ರಲ್ಲಿ ಕರಿಘಟ್ಟದ ವೆಂಕಟರಮಣಸ್ವಾಮಿ ದೇವಸ್ಥಾನದ ಧ್ವಜಸ್ತಂಭವನ್ನು ಮೈಸೂರು ಕೃಷ್ಣರಾಜ ಒಡೆಯರ ಸೇವಕ ಗಂಜಾಮುದಲ್ಲಿನ ಶೀರ್ಯದ ಕುಂಚಟಿಗರ ಪಾಪಣ್ಣನವರ ಮಗ ದೊಡ್ಡಯ್ಯನು ಧ್ವಜಸ್ತಂಭವನ್ನು ಹೊಸದಾಗಿ ನಿರ್ಮಿಸಿ ತಗಡಿನ ಅಲಂಕಾರದೊಂದಿಗೆ ಪ್ರತಿಷ್ಠಿಸಿದನು. ಶ್ರೀ.ಪ. ೯೬

ಶಕ ೧೫೫೮ ನಳ ಸಂ. ಮಾಘ ಶುದ್ಧ ೧೦ (A.D.) ಮೈಸೂರು ರಾಜ ಒಡೆಯರು ಈ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿರಬೇಕು. ಆದ್ದರಿಂದ ಇತರ ದೇವಸ್ಥಾನವು ಇನ್ನೂ ಹಿಂದಿನಕಾಲದ್ದು. ಶ್ರೀ ಪ. ೯೫

ಮುಮ್ಮಡಿ ಕೃಷ್ಣರಾಜ ಒಡೆಯರು ಕರಿಘಟ್ಟದ ವೆಂಕಟರಮಣಸ್ವಾಮಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದರು.

ಪೂಜಾ ಉತ್ಸವಾದಿಗಳು - ದೇವಸ್ಥಾನದಲ್ಲಿ ಆಗಮ ಶಾಸ್ತ್ರವನ್ನನುಸರಿಸಿ ಪೂಜಾ ವಿಧಾನವು ಎರಡು ವಿಧವಾಗಿರುವುದು. ೧. ಪಾಂಚರಾತ್ರ, ೨. ವೈಖಾನಸ ಎಂಬುದಾಗಿ ಶ್ರೀರಂಗಪಟ್ಟಣದ ಶ್ರೀರಂಗನಾಥ ಸ್ವಾಮಿಯವರ ಪೂಜಾ ವಿಧಾನವು ಪಾಂಚರಾತ್ರಾಗಮ ಶಾಸ್ತ್ರ ರೀತಿ ನಡೆಯುವುದು. ಕರಿಘಟ್ಟ - ಇಲ್ಲಿ ದೇವರ ಪೂಜೆಯು ವೈಖಾನಸಾಗಮ ರೀತಿಯಲ್ಲಿ ನಡೆಯುವುದು. ಸಾಧಾರಣವಾಗಿ ವೈಖಾನಸ ಪೂಜಾ ರೀತಿ ದೇವರಿಗೆ ಗದೆ ಇರುವುದಿಲ್ಲ. ಅಲ್ಲದೆ ಅಭಯಹಸ್ತವಿರುವುದಿಲ್ಲ. ಆ ಸ್ಥಳದಲ್ಲಿ ವರದಹಸ್ತ ಅಥವಾ ಸಿಂಹ ಹಸ್ತವು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರಥ ವಾಹನ - ಮುಮ್ಮಡಿ ಕೃಷ್ಣರಾಜ ಒಡೆಯರು ಶಕ ೧೭೬೬ ಶೋಭಕೃತು ಸಂ. (A.D.....1843) ರಲ್ಲಿ ನೂತನವಾಗಿ ರಥವನ್ನು ಮಾಡಿಸಿ ಪ್ರತಿಷ್ಠಿಸಿದರು. ಶ್ರೀ.ಪ.ಶಾ. ೯೭

ಅರಕೆರೆ - ಶ್ರೀ ಚನ್ನಕೇಶವಸ್ವಾಮಿ ದೇವಸ್ಥಾನ

ಈ ಊರಿಗೆ ಸರ್ವನಮಸ್ಯಪಟ್ಟದ ಮಹಾಗ್ರಹಾರ - ಸರ್ವಜ್ಞ ಶ್ರೀವೀರ ನರಸಿಂಹಪುರ, ಅರಕೆರೆ ಎಂಬುದಾಗಿ ಹೆಸರುಗಳಿವೆ. ಮಹಾಗ್ರಹಾರ ಎಂದೂ ಕರೆಯುವುದುಂಟು. ಅರಕೆರೆ ಎಂಬ ಹೆಸರು A.D. 1108ರ ಕಾಲದ ಹಿಂದೆಯೇ ಕರೆಯಲ್ಪಟ್ಟಿದೆ. (ಶ್ರೀ.ಪ.೧೧೩) ಈ ಅರಕೆರೆಯು ಹಿಂದೆ ಇಡಯನಾಡು ರಾಜ್ಯಕ್ಕೆ ಸೇರಿದ್ದಿತು.

ಇಲ್ಲಿ ಶ್ರೀ ಚನ್ನಕೇಶವ ದೇವಸ್ಥಾನವಿದೆ. ಈ ದೇವಸ್ಥಾನದಲ್ಲಿ A.D. 1254 ಕಾಲದ ಶಾಸನ ಧರ್ಮವಿರುವುದರಿಂದ ಅದಕ್ಕೆ ಪೂರ್ವಭಾವಿಯಾದ ದೇವಸ್ಥಾನವು. ಪ್ರಾಚೀನ ದೇವಸ್ಥಾನವು.

ದೇವಸ್ಥಾನವು ಗರ್ಭಗೃಹ, ಶುಕನಾಸಿ, ನವರಂಗ ಪ್ರದಕ್ಷಿಣ ಮಾರ್ಗ ಕೈಸಾಲೆ, ಬಲಿಪೀಠ, ಧ್ವಜಸ್ತಂಭ, ಮಹಾದ್ವಾರ ಇತ್ಯಾದಿಗಳಿವೆ. ಇವುಗಳ ವಿವರ ಬರೆಯಲು ಕಾಲಾವಕಾಶ ಸಂದರ್ಭಗಳು ಸರಿಯಾಗಿರಲಿಲ್ಲವಾದ್ದರಿಂದ ಬರೆಯಲಾಗಲಿಲ್ಲ.

ಉದಯಾದಿತ್ಯ ಪಲ್ಲವರಾಯನ ಕೆರೆ ಅಥವಾ ಉಡಯನಂಬಿಕೆರೆ -

ಶಕ ೧೦೩೧ ಸರ್ವಧಾರಿ ಸಂ. ವೈಶಾಖ ಶುದ್ಧ ೧೨ ಸೋಮವಾರ (24-4-1108ಶುಕ್ರವಾರ) ಇಡಯನಾಡ ಅರಕೆರೆಯ ವಿರುಕನ....ಯ ಬಿದಯನರಸಿ....ರಾಚಿಗೌಂಡ ಫಲ್ಲವರಾಯ, ರಾಜವಿದಾಧರ, ಆಯಿರಮೇ ನಾಯಕ (ಸಾವಿರ ಕುದುರೆ ಸವಾರ), ಮಲೈಯಾಂನ ಸೈನ್ಯಾಧಿಕಾರೀ (ಚಿಕ್ಕ ಅಧಿಕಾರಿ) ಇತ್ಯಾದಿ ಬುರುದಾಂಕಿತ ನರಿಕುಂಟೆ ಪಮ್ಮಿಸೆಟ್ಟಿಯ ಮಗ ಉದಯಾದಿತ್ಯ ಪಲ್ಲವರಾಯ (ಒಡೆಯನಂಬಿ) ಈ ಕೆರೆಯನ್ನು ಕಟ್ಟಿಸಿದನು.

ಕೆರೆಯನ್ನು ಕಟ್ಟಿಸಿದ ಕುಶಲತೆಗೆ ಮೆಚ್ಚಿ ಮೂಲಿಗಬಾಕಂದರ ಮಂಚಗೌಂಡ, ಕಬಾಳಗೌಂಡ ನಮಗೆ ಹೊಳಲಯನಾಡ ತೊಲಗದಗಂಡ ಅರಕೆರೆಯ ನಾಡಾಳುವ ಬೀರಗೌಂಡನು ಈ ಕೆರೆಯನ್ನುನೋಡಿ ಸಂತೋಷಪಟ್ಟು ಆ ಕೆರೆಯು ಶಾಶ್ವತವಾಗಿರಲು ವರ್ಷಂಪ್ರತಿ ಅದರ ಮರಾಮತ್ತು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀರ್ಣೋದ್ಧಾರಕ್ಕಾಗಿ ಕಡಹು ಮೂರು (3) ಸಲಗೆ ನಾಲ್ಕು ಬೆದ್ದಲು ೧೫೦೦ ಧರ್ಮ ಮಾಡಿದರು. ಅಲ್ಲದೆ ೧೫೦೦ ಕಂಭ, ಗದ್ದೆ ಮತ್ತು ೪ ಸಲಿಗೆ ಭೂಮಿ ಧರ್ಮ.

ಇದಕ್ಕೆ ಸಾಕ್ಷಿಯಾಗಿ ಪೆಮ್ಮಾಂಡಿಕುಲೋತ್ತುಂಗ ಚೋಳಪಲ್ಲವರಾಯ, ಇರುಮುಡಿ ಚೋಳಪಲ್ಲವರಾಯ ರಾಜಕುಂಜರ ಪಲ್ಲವರಾಯ -ಪಡೈಕ್ಕಣಕ್ಕನ್ ಮಲ್ಕೆಯಾಂಡಾನ್ ಇವರ ಕೈಬರಹ (ಪಂಚದ ಕಾವಣ್ಣ, ಪಂಚಗೌಂಡ ಹಿರಿಯ ಜೀಯ, ಕನ್ನಡಿಗ ಸೇನ ಬೋವ) ಶ್ರೀ ಪ. ಶಾ. ೧೧೩,೧೧೪,

ಗರ್ಭಗೃಹ ಚತುರಶ್ರವಾಗಿದೆ. ಚನ್ನಕೇಶವ ದೇವರು ಸಾನ್ನಿಧ್ಯಹೊಂದಿರತಕ್ಕ ಸ್ಥಳ. ಅದರಿಂದ ಹೊರಕ್ಕೆ ಶುಕನಾಸಿ ಅದರ ಹೊರಕ್ಕೆ ೯ ಅಂಕಣ ವಿಸ್ತಾರವುಳ್ಳ ನವರಂಗ. ಪಕ್ಕದಲ್ಲಿ ಶ್ರೀಲಕ್ಷ್ಮೀ ಅಮ್ಮನವರ ಸನ್ನಿಧಿ. ಅದರಿಂದ ಹೊರಕ್ಕೆ ೧೫ ಅಂಕಣ ವಿಸ್ತಾರವುಳ್ಳ ಸ್ಥಳ. ಎಂಟು ಕಂಭಗಳಿವೆ. ಅದರಿಂದ ಹೊರಕ್ಕೆ ಒಂದಂಕಣ ವರಾಂಡ ಕೈಸಾಲೆ ಆರು ಕಂಭಗಳಿಂದ ಕೂಡಿರುವುದು.

ಗರ್ಭಗೃಹದ ಮೇಲಿನ ವಿಮಾನವು, ಕರ್ಣಕೂಟ ಹಾರ ಶಾಲಾ ಎಂಬ ಅಲಂಕಾರಗಳಿಂದ ಕೂಡಿರುವುದು.

ಚನ್ನಕೇಶವ ದೇವರು - ಶಂಖ ಚಕ್ರ ಅಭಯ ವರದ ಹಸ್ತ ಪೀಠದಲ್ಲಿ ಗರುಡ ಚಿಹ್ನೆ.

ಬಲಿಪೀಠ - ಧ್ವಜಸ್ತಂಭ - ಗರುಡಕಂಭ - ಶಕ ೧೫೪೭ ಕ್ರೋಧನ ಸಂ. ಜ್ಯೇಷ್ಠಮಾಸ....... ರಲ್ಲಿ ಚಿಕ್ಕೊಡೆಯರ ಮಗ ದೊಡ್ಡಯನ ಧರ್ಮ. ಈ ಗರುಡಕಂಭವನ್ನು ಪ್ರತಿಷ್ಠಿಸಿದರು. ಶ್ರೀ.ಪ. ೧೮೯.

ಧರ್ಮಗಳು - ಹೊಯ್ಸಳ ವೀರಸೋಮೇಶ್ವರ ಕಾಲದಲ್ಲಿ ಶಕ ೧೭೭೭ ಆನಂದ ಸಂ. ಕಾರ್ತಿಕ ಶುದ್ಧ ಪಂಚಮಿ ಆದಿವಾರ 18-10-1254) ರಲ್ಲಿ ಸೋಮೇಶ್ವರ ದೇವರಾಜ್ಯ ಪಟ್ಟಾಭಿಷೇಕವಾದ ೨೧ನೆಯ ವರ್ಷ ವೀರನರಸಿಂಹಪುರವಾದ ಅರಕೆರೆಯ ಪ್ರಭಾಕರದ ಕೊಮಾಂಡೂರಾಚ್ಚಾನ್ ರವರ ಹೆಂಡತಿ ಅಯ್ಯಾದ್ಯಕಿಯು ತನಗೆ ಸೇರಿದ ವೃತ್ತಿಯೊಳಗೆ ಕಾಲುಭಾಗ ವೃತ್ತಿಯನ್ನು ತನ್ನ ಬಂಧು ಬಾಂಧವರ ಸಮ್ಮತಿ ಪಡೆದು ಪ್ರೀತಿಯಿಂದ ಶ್ರೀ ಕೇಶವ ದೇವರಿಗೆ ತಿರುನಾಮ (ಅಷ್ಟೋತ್ತರ) ನಡೆಸಲು ಕಾಣಿಕೆಯಾಗಿ ಸಕಲಸ್ವಾಮ್ಯದೊಂದಿಗೆ ಭೂಮಿ ಧರ್ಮ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಭೂಮಿಯಲ್ಲಿ ಉತ್ಪತ್ತಿಯಾಗುವ ಬೆಳೆ ವರಮಾನದಿಂದ ದೇವರಿಗೆ ನಿವೇದನವಾಗಿ ಅದನ್ನು ತಿರುನಂದಾವನ (ಪುಷ್ಪತೋಟ) ನಡೆಸುವ ಕೈಂಕರ್ಯವರರ ಪ್ರತಿವರ್ಷದ ಜೀವಿಕೆಗಾಗಿಯೂ ದೇವರ ಅಂಗರಂಗ ನಿತ್ಯಭೋಜನಕ್ಕಾಗಿ ಸಮರ್ಪಿಸಿದ ಭೂಮಿ ಧರ್ಮ. . ಶ್ರೀ.ಪ. ೯೮

ಚನ್ನಕೇಶವ ದೇವರಿಗೆ ನಿವೇದನಕ್ಕೆ ಒಂದು ವೃತ್ತಿ ಭೂಮಿ ಮಲ್ಲೈಯರಯ್ಯನ್ ಅವರು ಸಮರ್ಪಿಸಿದ ಧರ್ಮ. ಶ್ರೀ.ಪ. ೧೦೨.

ಶಕ ೧೬೯೫ ನಂದನ ಸಂ. ಮಾರ್ಗಶಿರ ಬಹುಳ ೧೦ (A.D. 1772) ರಲ್ಲಿ ಅರಕೆರೆ ಗ್ರಾಮವಾದ ದಾಸಪ್ಪನಾಯಕನು ಹಿರಿಯ ಏರಿ ಕೆಳಗೆ ತನಗೆ ಒಂದು ಖಂಡುಗ ಧಾನ್ಯ ಬರುವ ಭೂಮಿಯನ್ನು ದೇವರ ದಧ್ಯನ್ನಕ್ಕಾಗಿ ಧರ್ಮ, ಈ ಧರ್ಮವನ್ನು ತಮ್ಮ ಊಳಿಗದ ತುಟ್ಟಿ ಎಂಬುವನು ನಡೆಸುವುದು.

ಶ್ರೀ.ಪ. ೧೦೬.

ಕೊಮ್ಮನಪೇರ್ಗಡಿ ಅವರು ತಮಗೆ ಸರ್ವಬಾಧಾ ಪರಿಹಾರವಾಗಲೆಂದು ತಮಗೆ ಸೇರಿದ ಮಂಡಿಗೈತರಿ (ಕೈ ಮಗ್ಗದಿಂದ ಬರುವ ಲಾಭದಲ್ಲಿ ಒಂದು ಭಾಗ) ಶ್ರೀಕೇಶವ ದೇವರಿಗೆ ಸಮರ್ಪಿಸಿದ ಧರ್ಮ. ಈ ಧರ್ಮವನ್ನು ಸುರಿಗೈನಾಯಕನ್ ನಡೆಸಿ ಬರುವುದು. ಶ್ರೀ.ಪ.೧೦೪

ವಿಜಯ ಸಂ. ಆಶ್ವಯುಜ ಶು. ೧೩ ರಲ್ಲಿ ಲೋಕಯ್ಯನಾಯಕರ ಕಾರ್ಯಕರ್ತರಿಂದ ಅರಕೆರೆಯ ಮಹಾಜನಂಗಳು ಶ್ರೀಕೇಶವ ದೇವರಿಗೆ ನಡೆಸಿದ ಕೆಲವು ಧರ್ಮ. ಶ್ರೀ.ಓ. ೧೦೭

ಅರಕೆರೆ ಶ್ರೀ ನರಸಿಂಹಸ್ವಾಮಿದೇವಸ್ಥಾನ

ಗರ್ಭಗೃಹ - ಚತುರಶ್ರ, ಷಡ್ವರ್ಗಯುತವು ಶ್ರೀನರಸಿಂಹಸ್ವಾಮಿಯವರ ಸಾನ್ನಿಧ್ಯ ಸ್ಥಳ, ಯೋಗನಾರಸಿಂಹಸ್ವಾಮಿ. ಪೀಠದಲ್ಲಿ ಗರುಡ ಪ್ರಭಾವಳೆ ಇರುವುದು.

ಶುಕನಾಸಿ - ನವರಂಗ ೬ ಅಂಕಣ ವಿಸ್ತಾರವಾಗಿ ನಾಲ್ಕು ಕಂಭಗಳನ್ನು ಹೊಂದಿದೆ. ೯ ಅಂಕಣಗಳಿಂದ ಕೂಡಿ ೪ ಕಂಭಗಳಿಗೆ ಸರಿಪಡಿಸಿ ತರಬೇಕು.

ಶಕ ೧೪೩೫ ಆಂಗಿರಸ ಸಂ. ಕಾರ್ತಿಕ ಶುದ್ಧ ೧ (A.D. 10-10 - 1512) ರಲ್ಲಿ ರಾಮನಾಯಕನ ಮಗ ಸೇನಬೋವಾರಾಮಣ್ಣನು ನಾರಸಿಂಹಪುರ (ಅರಕೆರೆ) ಅಗ್ರಹಾರದ ಮಳೆಯಾಳನು ಅಧಿಕಾರದಲ್ಲಿರುವಾಗ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀನರಸಿಂಹದೇವರಿಗೆ ಅಮೃತ ಪಡಿಗೆ ಮಂದಿನ ಕಾಲುವೆ ಕೆಳಗೆ ಮದವಾಯಲ್ಲಿ ಮಹಾಜನಗಳಿಂದ ಕ್ರಯಕ್ಕೆ ತೆಗೆದು ಸಮರ್ಪಿಸಿದ ಗದ್ದೆ ಕಂಬ ೬೦ ಮಾಯಣ ತೆಗೆದು ಸಮರ್ಪಿಸಿದ್ದು ಗದ್ದೆ ಕಂಬ ೫೦.

ಉಡುಗಗೆಯ ಪ..... ತೆಗೆದು ಸಮರ್ಪಿಸಿದ ಧರ್ಮ ಗದ್ದೆ ಒಂದೂಕಾಲು, ಒಂದೂಮುಕ್ಕಾಲು ವೃತ್ತಿ. ಶ್ರೀ.ಪ.೧೧೦

ಮಂಡಪ - ಅರಕೆರೆ ಗ್ರಾಮಕ್ಕೆ ಪೂರ್ವಕ್ಕಿರುವ ಮಂಡಪವನ್ನು ಚಾಮರಾಜ ಒಡೆಯರ ಮಗ ದೇವರಾಜರು ಶಕ ೧೫೪೭ ಕ್ರೋಧನ ಸಂ. ಶ್ರಾವಣ ಶುದ್ಧ ೭ (A.D. 31-6-1625) ರಲ್ಲಿ ಕಟ್ಟಿಸಿದರು.

ಶ್ರೀ.ಪ. ೧೧೧.

ಮರಳೇಶ್ವರ ದೇವಸ್ಥಾನ, ಅರಕೆರೆ

ಗರ್ಭಗೃಹ - ಚತುರಶ್ರವಾಗಿದೆ. ಉಘಾ ವಿಧಾನ. ಎಂದರೆ ಷಡ್ವರ್ಗವಿರುವುದಿಲ್ಲ. ಎಂದರೆ ಗರ್ಭಗೃಹದ ಮೇಲೆ ಪ್ರಸ್ತರ = ಮೇಲ್ಛಾವಣಿ ಇರುವುದಿಲ್ಲ. ಚತುರಶ್ರವಾದ ಗೋಡೆ, ಆ ಗೋಡೆಯ ಮೂಲೆಗಳಲ್ಲಿ ಪುನಃ ಚತುರಶ್ರವಾದ ಚಪ್ಪಡಿಕಲ್ಲುಗಳು. ಪುನಃ ಅದೇ ರೀತಿ ಮುಚ್ಚಲ್ಪಟ್ಟಿದೆ. ಅನಂತರ ಅಂತರಾಳದ ಮೇಲ್ಭಾಗದಲ್ಲಿ ಪದ್ಮರೂಪ ವಿತಾನ ಚಿತ್ರಿಸಲ್ಪಟ್ಟಿರುವುದು.

ಚತುರಶ್ರವಾದ ಗರ್ಭಗೃಹದ ಮಧ್ಯೆ ಶಿವಲಿಂಗವು ಪ್ರತಿಷ್ಠಿತವಾಗಿ ಸಾನ್ನಿಧ್ಯ ಹೊಂದಿರುವುದು. ಶಿವಲಿಂಗವು ಕುಕ್ಕುಟಾಂಡಾ ರೂಪದಲ್ಲಿರುವುದು. ಎಂದರೆ ಶಿವಲಿಂಗದ ಅಗಲ ನಾಲ್ಕುಭಾಗ ಮಾಡಿ ಆ ನಾಲ್ಕನೇ ಭಾಗದಿಂದ ಶಿರೋವರ್ತನ ಮಾಡಿದಂತಿರುವುದು. ಇದು ಸರಿಯಾಗಿದ್ದಲ್ಲಿ ಈ ಶಿವಲಿಂಗವನ್ನು ಆತ್ರೇಯ ವರ್ಣದವರ ಭಕ್ತಿ, ಅಭಿಮಾನದಿಂದ ಪ್ರತಿಷ್ಠಿತರೆಂದು ತಿಳಿಯಬರುತ್ತದೆ. ಭೂಮಿಯಿಂದ ಸುಮಾರು ಒಂಭತ್ತು ಅಂಗುಲ ಎತ್ತರವಾಗಿರಬಹುದು.

ಶುಕನಾಸಿ - ಗರ್ಭಗೃಹದ ಮುಂದೆ ಶುಕನಾಸಿ. ಅದರ ಮುಂದೆ

ನವರಂಗ - ದ್ವಾರದ ಉಭಯ ಪಾರ್ಶ್ವಗಳಲ್ಲಿ ಎಂದರೆ ಬಲಭಾಗದಲ್ಲಿ ಗಣಪತಿ, ದ್ವಾರದ ಎಡಭಾಗದಲ್ಲಿ ಚಂಡಿವಿಗ್ರಹವೂ, ಬಲಭಾಗದಲ್ಲಿ ಸಪ್ತಮಾತೃಕೆಗಳಿವೆ. ವೈಷ್ಣವೀ ವಿಗ್ರಹವು ಒಂದು ಮಾತ್ರ ಪ್ರತ್ಯೇಕವಾಗಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನವರಂಗದಿಂದ ಹೊರಕ್ಕೆ ಬರಲು ದಕ್ಷಿಣದ್ವಾರ ಒಂದಿರುವುದು. ಗರ್ಭಗೃಹದ ಹೊರಭಾಗದ ಮೇಲೆ ವಿಮಾನವು ಶಿಥಿಲವಾಗಿ ನಷ್ಟವಾಗಿರುವುದು. ಕರ್ಣಕೂಟ, ಹಾರ, ಶಾಲಾ ಎಂಬ ಅಲಂಕಾರಗಳಿಂದ ಕೂಡಿರುವುದು.

ಮುಂದೆ ಪ್ರದಕ್ಷಿಣ ಮಾರ್ಗದಲ್ಲಿ ರಾಮಲಿಂಗೇಶ್ವರ ಗುಡಿ ಇರುವುದು.

ಧರ್ಮಗಳು - ಶಕ... ದುಂದುಭಿ ಸಂ. ಪಾಲ್ಗುನ ಬಹುಳ ಏಕಾದಶಿ (A.D.) ಶ್ರೀ ಮರಳೇಶ್ವರ ದೇವರ ಅಮೃತಪಡಿ ನಿವೇದನಕ್ಕಾಗಿ ಅರಕೆರೆ ಮಹಾಜನಗಳಿಂದ ಕ್ರಯಕ್ಕೆ ಪಡೆದು ಸೇನಬೋವ ಹಿರಿಯಪ್ಪನು ಮಣಲೇಶ್ವರ ದೇವರಿಗೆ ಬಳ್ಳಿಮಡವೆಯ ಕಂಡಿಕದ ಗದ್ದೆ, ಕಂಭ ೮೦ ಅಲ್ಲದೆ ಮೂಲ ಧನ ೧೦, ಗದ್ಯಾಣ ಸಮರ್ಪಿಸಿದ ಧರ್ಮ. ಶ್ರೀ.ಪ. ೧೦೮

ಶಕ ೧೫೪೮ ಕ್ರೋಧನ ಸಂ. ಜ್ಯೇಷ್ಠಮಾಸ (- -1625) ರಲ್ಲೂ ಚಿಕ್ಕೊಡೆಯನ ಮಗ ದೊಡ್ಡಯ್ಯನು ಗರುಡ ಕಂಭವನ್ನು ನಿಲ್ಲಿಸಿ ಪ್ರತಿಷ್ಠಿಸಿದ ಧರ್ಮ. ಶ್ರೀ.ಪ. ೧೦೯.

ತೊಲಗದ ಗಟ್ಟೇಶ್ವರ ದೇವಸ್ಥಾನ - ಅರಕೆರೆ -

ಈ ದೇವಸ್ಥಾನವು ಬಹು ಪ್ರಾಚೀನವಾದುದು. ಈ ದೇವರಿಗೆ A.D.೧೧೦೮ ರಲ್ಲಿ ಧರ್ಮ ಹೇಳಿರುವುದರಿಂದ ಅದಕ್ಕೆ ಹಿಂದೆಯೇ ಪ್ರತಿಷ್ಠೆಯೆಂದು ಅರ್ಥವಾಗುತ್ತದೆ.

ಈ ದೇವರಿಗೆ ಧರ್ಮ - ಶಕ ೧೦೩೧ ಸರ್ವಧಾರಿ ಸಂ. ವೈಶಾಖ ಶುದ್ಧ ಸೋಮವಾರ (24-4-1108 ಶುಕ್ರವಾರ) ಅನೇಕ ಬಿರುದಾಂಕಿತ ನರಿಕುಂಟೆಯ ದಮ್ಮಿಸೆಟ್ಟಿಯ ಮಗ ಉದಯಾದಿತ್ಯಪಲ್ಲವರಾಯನು (ಒಡೆಯನಂಬಿ) ಅರಕೆರೆಯಲ್ಲಿ ಹೊಸದಾಗಿ ಕೆರೆಯನ್ನು ಕಟ್ಟಿಸಿದನು. ಆ ಸಮಯದಲ್ಲಿ ಅರಕೆರೆಯ ನಾಡಾಳುವ ಬೀರಗೌಂಡನು ಈ ತೊಲಗದ ಗಟ್ಟೇಶ್ವರ ದೇವಸ್ಥಾನಕ್ಕೂ ಸಹ ಐದು ಕೊಳಗ ಧಾನ್ಯ ಬರುವಂತೆ ಗದ್ದೆಭೂಮಿ ಧರ್ಮ ಅಲ್ಲದೆ ಕೆಲವು ಧರ್ಮ ಮಾಡಿದಾಗ ಬ್ರಾಹ್ಮಣರಿಗೆ ಮೂರು ಕೊಳಗ ಧಾನ್ಯ ಬರುವ ಗದ್ದೆ ಭೂಮಿ ಧರ್ಮ. ಶ್ರೀ.ಪ. ೧೧೩.

ಬೆಳಗೊಳ - ಶ್ರೀರಂಗಪಟ್ಟಣದ ತಾಲ್ಲೂಕಿನ ಒಂದು ಗ್ರಾಮ. ಬಿಳಿಯಕೊಳ - ಬೆಳ್ಗೊಳ. ಈ ಊರು ಮೈಸೂರಿಗೆ ೬,೭ ಮೈಲಿ ದೂರದಲ್ಲಿದೆ. ಕೃಷ್ಣರಾಜನಗರಕ್ಕೆ ಸುಮಾರು ಆರು ಕಿಲೋಮೀಟರು ದೂರದಲ್ಲಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಊರನ್ನು ಬೆಳಗೊಳ ಎಂದು ಕರೆಯುವರು. ಇಲ್ಲಿಯ ಕೆರೆ ಪುಷ್ಕರಿಣಿಯ ನೀರು ಸ್ವಚ್ಛತೆಯಿಂದ ಇರುವುದರಿಂದ ಬಿಳಿಕೊಳ ವೆಳ್ಳೈಕೊಳ - ಬೆಳ್ಗೊಳ ಎಂದು ಕರೆಯುವರು. ಹಿಂದೆ ಈ ಊರನ್ನು ದಕ್ಷಿಣಕಾಶಿ, ಸರ್ವನಮಸ್ಯ ಅಗ್ರಹಾರ, ಗಂಗೈಕೊಂಡ ವಿಷ್ಣುವರ್ಧನ ಹೊಯ್ಸಳದೇವ ಚತುರ್ವೇದಿ ಮಂಗಲ ಎಂದೂ ಹೆಸರಿದ್ದಿತು.

ಇಲ್ಲಿ ಜನಾರ್ದನಸ್ವಾಮಿ ದೇವಾಲಯ, ಭಕ್ತವತ್ಸಲ ದೇವರ ಗುಡಿಗಳು ಇದ್ದು ಈಗ ಎಲ್ಲವೂ ಶಿಥಿಲವಾಗಿವೆ. ಭಕ್ತವತ್ಸಲ ಗುಡಿ ಕಣ್ಣಿಗೆ ಕಾಣುವುದಿಲ್ಲ. ಆ ಗುಡಿಯ ಮೇಲೆ ಮರ,ಗಿಡ ಬಳ್ಳಿಗಳು ಬೆಳೆದು ಇರುವ ಸ್ಥಳವೇ ಕಣ್ಣಿಗೆ ಕಾಣಿಸುವುದಿಲ್ಲ. ಮನುಷ್ಯ ಪ್ರವೇಶಕ್ಕೇ ಅವಕಾಶವಿಲ್ಲದಷ್ಟು ಕಾಡು ಬೆಳೆದಿದೆ. ನೋಡುವವರ ಶರೀರ ಮನಸ್ಸು ಜರ್ಝರೀಭೂತವಾಗುವುದು.

ಬೆಳಗೊಳವು ಈಚಿನ ಕಾಲದಲ್ಲಿ ಕೈಗಾರಿಕಾ ಕೇಂದ್ರವಾಗಿ ಪ್ರಸಿದ್ಧಿಹೊಂದುತ್ತಿದೆ. ಇಲ್ಲಿ ಮೈಸೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ (1917). ಮಂಡ್ಯ ನ್ಯಾಷನಲ್ ಪೇಪರ್ಸ್ ಮಿಲ್ಸ್ (1962) ಈ ಕಂಪನಿಯಲ್ಲಿ ೧೦೦೦ ಟನ್ ಪೇಪರ್ ತಯಾರಾಗುತ್ತಿದೆ. ಮೈಸೂರು ಕೆಮಿಕಲ್ಸ್ ಮ್ಯಾನುಫ್ಯಾಕ್ಚರ್ಸ್ (1941) ಅಲೈಡ್ ಅಂಡ್ ಕೆಮಿಕಲ್ಸ್ (1965) ಈ ರೀತಿ ಇನ್ನೂ ಅನೇಕ ಪ್ರಮುಖ ಕೈಗಾರಿಕೆಗಳು ಸ್ಥಾಪಿತವಾಗಿ ವೃದ್ಧಿಹೊಂದುತ್ತಿವೆ.

ಶ್ರೀ ಜನಾರ್ಧನಸ್ವಾಮಿ ದೇವಾಲಯ - ಗರ್ಭಗೃಹ ಚತುರಶ್ರವಾಗಿದೆ. ಇಲ್ಲಿ ಶ್ರೀ ಜನಾರ್ದನಸ್ವಾಮಿ ಸಾನ್ನಿಧ್ಯ ಹೊಂದಿರುವರು. ಗರ್ಭಗೃಹದ ಅಂತರಾಳ ಮೇಲುಭಾಗದಲ್ಲಿ ಭುವನೇಶ್ವರಿ ವಿತಾನವು ಕಮಲ ಬಿಡಿಸಲಾಗಿದೆ.

ಶುಕನಾಸಿ - ಗರ್ಭಗೃಹದ ಮುಂದಿನ ಭಾಗ ಚತುರಶ್ರವಾಗಿದೆ. ದ್ವಾರವು ಪುಷ್ಪಲತಾ ಕೆತ್ತನೆಗಳಿಂದ ಕೂಡಿದ ಗಜಲಕ್ಷ್ಮಿ ಕಾಣಬರುವುದು. ಈ ಶುಕನಾಸಿಯಲ್ಲಿ ನೆಲಮಾಳಿಗೆ ಒಂದಿರುವುದು. ಇಲ್ಲಿಂದ ಹೊರಕ್ಕೆ ಬಂದರೆ ನವರಂಗವು. ಐದಂಕಣ ವಿಸ್ತಾರವು. ಇಲ್ಲಿಂದ ಗರ್ಭಗೃಹ ಪ್ರದಕ್ಷಿಣವಾಗಿ ಬರಬಹುದು. ಇಲ್ಲಿಯ ಕಂಭಗಳು ಕೆಳಭಾಗ ಚತುರಶ್ರವಾಗಿದ್ದು ಮೇಲುಭಾಗವು ಎಂಟು ಪಟ್ಟಿಗಳಿಂದ ಕೂಡಿರುವುದು. ಈ ಕಂಭಗಳಲ್ಲಿ ವಿಶೇಷ ಶಿಲ್ಪ ಚಾತುರ್ಯವೇನೂ ಇರುವುದಿಲ್ಲ. ಮುಂದೆ.

ಒಂದಂಕಣ ವರಾಂಡ (ಹೊರಕೈಸಾಲೆ) ತೆರೆದ ಸ್ಥಳವಾಗಿರುತ್ತದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಲಕ್ಷ್ಮೀ ಅಮ್ಮನವರ ಸನ್ನಿಧಿ ಶ್ರೀಜನಾರ್ದನಸ್ವಾಮಿ ಎಡಭಾಗದಲ್ಲಿರುವುದು.

ಗರ್ಭಗೃಹ, ಮಹಾಲಕ್ಷ್ಮಿಯ ಸಾನ್ನಿಧ್ಯ ಸ್ಥಳವು. ಅಲ್ಲಿಂದ ಹೊರಕ್ಕೆ ಬಂದರೆ ದ್ವಾರದ ಅಕ್ಕ ಪಕ್ಕಗಳಲ್ಲಿ ಸನ್ನಿಧಿಗಳಿವೆ. ಈ ಸ್ಥಳಗಳಲ್ಲಿ ಈಗ ಯಾವ ಮೂರ್ತಿಯೂ ಇರುವುದಿಲ್ಲ. ಅಲ್ಲಿಂದ ಹೊರಕ್ಕೆ ಬಂದರೆ 3x3=9 ಅಂಕಣ ಮಂಡಪ ವಿಸ್ತಾರವಾಗಿರುವುದು.

ದೇವಾಲಯದ ಮುಂದೆ ಉನ್ನತಾಕಾರವಾದ ಒಂದೇ ಶಿಲೆಯ ಬಹು ಅಲಂಕಾರಯುತವಾದ ದೀಪಸ್ತಂಭವಿದ್ದಿತು. ಮೇಲೆ ಕುಡ್ಮಲಾಕಾರ ಮಂಡಪವಿರುವುದು. ಈಗ ಈ ದೀಪಸ್ತಂಭವಿರುವುದಿಲ್ಲ. ಇದನ್ನು ತೆಗೆದು ಮೈಸೂರು ಅರಮನೆಯ ಅನತಿ ದೂರದಲ್ಲಿ ಬಹುಕಾಲ ಇಟ್ಟಿದ್ದರು. ಈಗ ವಿಚಾರಮಾಡಿದ್ದರಲ್ಲಿ ಅದನ್ನು ತೆಗೆದು ರಾಜಧಾನಿ, ವಾಣೀವಿಲಾಸಪುರಂ (ಒಂಟಿಕೊಪ್ಪಲ್) ಸ್ಥಳದಲ್ಲಿ ಪ್ರತಿಷ್ಠಿತರಾಗಿರುವ ಶ್ರೀನಿವಾಸ (ವೇಂಕಟೇಶ್ವರ) ದೇವಸ್ಥಾನದ ಮುಂದೆ ನಿಲ್ಲಿಸಲಾಗಿದೆ.

ಇದೇ ರೀತಿಯಲ್ಲಿ ಇಲ್ಲಿಯ ಆಂಜನೇಯ ಸ್ವಾಮಿ ದೇವಸ್ಥಾನದ ಮುಂದಿದ್ದ ದೀಪಸ್ಥಂಭವನ್ನು ಬೆಂಗಳೂರು ಕೋಟೆ ಶ್ರೀಶ್ರೀನಿವಾಸ ದೇವರ ಆಲಯದ ಮುಂಭಾಗದಲ್ಲಿ ನಿಲ್ಲಿಸಿರುವರು.

ಮೂಲಮೂರ್ತಿ- ಗರ್ಭಗೃಹದಲ್ಲಿ ಪ್ರತಿಷ್ಠಿತರಾಗಿ ಸಾನ್ನಿಧ್ಯಹೊಂದಿರುವ ಮೂರ್ತಿ ಶ್ರೀಜನಾರ್ದನಸ್ವಾಮಿ- ಸ್ಥಿತರೂಪ, ಸಮಭಂಗ, ಚತುರ್ಭುಜ, ಮೇಲಿನ ಬಲದ ಕೈಯಲ್ಲಿ ಪ್ರಯೋಗಚಕ್ರ, ಎಡದಕೈಯಲ್ಲಿ ಶಂಖ. ಕೆಳಗಿನ ಬಲದ ಕೈ ಅಭಯಹಸ್ತ. ಎಡದ ಕೈ ಕಟಿಹಸ್ತ. ಪೀಠಸಹಿತವಾಗಿ ಸುಮಾರು ಐದಡಿ ಎತ್ತರವಿರಬಹುದು. ಪ್ರತಿಮೆಯ ಪೀಠಭಾಗದಲ್ಲಿ ಇಕ್ಕೆಲಗಳಲ್ಲಿಯೂ ಚಾಮರಧಾರಿಗಳಿರುವರು.

ಮೂರ್ತಿಲಕ್ಷಣ ವಿಚಾರ - ಶ್ರೀಜನಾರ್ದನ ಮೂರ್ತಿಯು ಕೇಶವಾದಿ ಚತುರ್ವಿಂಶತಿ ಮೂರ್ತಿಗಳಲ್ಲಿ ೨೧ ನೆಯದು. ಪಾಂಚರಾತ್ರಾಗಮ ಪ್ರಕಾರ ಕೆಳಗಿನ ದಕ್ಷಿಣ ಹಸ್ತ ಪದ್ಮ (ನಾಳ ಸಹಿತವಾದುದು) ಮೇಲಿನ ಬಲದ ಕೈ ಚಕ್ರ, ಎಡದ ಕೈ, ಶಂಖ, ಕೆಳಗಿನ ಎಡದ ಕೈ ಊರ್ಧ್ವರೀತಿಯಲ್ಲಿ ಗದೆ. ಮೇಲಿನ ಎರಡು ಕೈಗಳು ಹೃದಯದ ಪಕ್ಕದಲ್ಲಿರುವುದು. ಅದರ ಕೆಳಗೆ ಇತರ ಕೈಗಳು. ಮನ್ತ್ರಸಿದ್ಧಾಂತವಾದರೆ ಮೇಲಿನ ಎರಡು ಕೈಗಳು ಭುಜದ ಪಕ್ಕದಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೆಳಗಿನ ಬಲದ ಕೈ ಹೃದಯ ಪಕ್ಕದಲ್ಲಿ ಎಡದ ಕೈ ಲಂಬಹಸ್ತ ಗದಾಯುಧ.

ವೈಖಾನಸಾಗಮದ ಪ್ರಕಾರ ದಕ್ಷಿಣ ಅಧಹಸ್ತ ಚಕ್ರ, ಮೇಲಿನ ಕೈ ಶಂಖ, ಮೇಲಿನ ಎಡದ ಕೈ ಗದ (ಊರ್ಧ್ವಲಕ್ಷಣ) ಕೆಳಗಿನ ಎಡಹಸ್ತ ನಾಳಸಹಿತವಾದ ಪದ್ಮವು. ಹೀಗಿರುವಾಗ ನಮ್ಮ ದೇವಸ್ಥಾನದ ಶ್ರೀಜನಾರ್ದನಸ್ವಾಮಿ ಎಂದು ಕರೆಯುವ ಈ ಮೂರ್ತಿಯು ಚತುರ್ವಿಂಶತಿ ಮೂರ್ತಿಗಳಲ್ಲಿ ಸೇರಿದ್ದರೂ, ಊರ್ಧ್ವಹಸ್ತೇ ಭುಜಸಮೌ ಎಂಬುದಾಗಿ ಮಂತ್ರಸಿದ್ಧಾಂತ ಮೂರ್ತಿಲಕ್ಷಣದಲ್ಲಿ ಕಾಣಬರುವುದು. ಆದರೆ ಇಲ್ಲಿ ಕಟಿಹಸ್ತವಿರುವುದು. ಆಗ ಜನಾರ್ದನಸ್ವಾಮಿಯೆಂದು ಕರೆಯಲಾಗುವುದಿಲ್ಲ. ಹೇಗಾದರೂ ಇರಲಿ ಪಾಂಚರಾತ್ರ ಮಂತ್ರಸಿದ್ಧಾಂತಕ್ಕೆ ಸೇರಿಸಿದಲ್ಲಿ ಆಗ ಆ ಮೂರ್ತಿಯನ್ನು ನಾರಾಯಣಮೂರ್ತಿ ಎಂದು ಕರೆಯಬೇಕಾಗುತ್ತದೆ.

ಧರ್ಮಗಳು - ಶಕ ೧೦೨೧ ಬಹುಧಾನ್ಯ ಸಂ. ಕಾರ್ತಿಕ ಬಹುಳ ದ್ವಾದಶಿ ಸೋಮವಾರ ವೈಶಾಖ ನಕ್ಷತ್ರದಲ್ಲಿ (A.D. 22-11-1098) ಬೆಳಗೊಳದ ಭಕ್ತ ಶಿರೋಮಣಿ ಇರ್ಯೆಯಪ್ಪನ್ ಎಂಬುವರು ಶ್ರೀ ಸೀತಾರಾಮ ಲಕ್ಷ್ಮಣರನ್ನು ಉದ್ಭವ ಸರ್ವಜ್ಞ ಪೆರುಮಾಳ್ ಎಂದು ಕರೆದು ಪ್ರತಿಷ್ಠಿಸಿದನು. ಈ ದೇವರಿಗೆ ಬೆಳಗೊಳದ ಪ್ರತಿನಾಮ ಗಂಗೈಕೊಂಡ ಶ್ರೀ ವಿಷ್ಣುವರ್ಧನ ಹೊಯ್‌ಸಳದೇವ ಚತುರ್ವೇದಿ ಮಂಗಲದ ಅಶೇಷ ಮಹಾಜನಂಗಳೂ ಮತ್ತು ವೆಳ್ಳೈಯಣ್ಣನ್, ತಿರುನಾರಾಯಣ ಪೆರುಮಾಳ್, ತಿರುವಾಳಿ ಅಣ್ಣನ್, ಪೊಮ್ಮೈಯಣ್ಣನ್ ಇವರುಗಳು ಸೇರಿ ಅರಿಯಮರೆಡ್ಡಿ ಭೂಮಿಯನ್ನು ಸರ್ವಮಾನ್ಯವಾಗಿ ಮಾಡಿ ದೇವರಿಗೆ ಸಮರ್ಪಿಸಿದರು. ಶ್ರೀ.ಪ. ೭೦. ಬೆಳಗೊಳ.

ಮೇಲಿನ ಶಾಸನವು ಈಗ ಜನಾರ್ದನಸ್ವಾಮಿ ಎಂದು ಕರೆಯುವ ದೇವಸ್ಥಾನದ ತಳಪಾದಿ ಕಲ್ಲಿನಲ್ಲಿರುವುದು. ಬೆಳಗೊಳದಲ್ಲಿ ಸೀತಾರಾಮ ದೇವರ ಬೇರೆ ಬೇರೆ ದೇವಸ್ಥಾನವು ಈಗ ಕಾಣಬರುವುದಿಲ್ಲವಾದ್ದರಿಂದ ಆ ದೇವಸ್ಥಾನವೇನಾಯಿತು? ಒಂದು ವೇಳೆ ಕಾಲಾಂತರದಲ್ಲಿ ಶ್ರೀ ಸೀತಾರಾಮರ ವಿಗ್ರಹ ಮೂರ್ತಿಗಳು ನಷ್ಟವಾಗಿ ಆ ಸ್ಥಳದಲ್ಲಿ ಶ್ರೀ ಜನಾರ್ದನಸ್ವಾಮಿ ಪ್ರತಿಷ್ಠೆಯಾಗಿರಬಹುದೆ ? ಒಂದು ವೇಳೆ ಶ್ರೀ ಸೀತಾರಾಮ ಲಕ್ಷ್ಮಣ ದೇವಸ್ಥಾನವು ಬೇರೆಯಾಗಿದ್ದು ಕಾಲಾಂತರ ನಷ್ಟವಾಗಿರಬಹುದೆಂದು ಹೇಳಿದರೆ ಈ ಶಾಸನ ಬರಹವು ಈಗಿರುವ ಶ್ರೀಜನಾರ್ದನಸ್ವಾಮಿ ದೇವಸ್ಥಾನದಲ್ಲಿ ಬರುವುದಕ್ಕೆ ಕಾರಣವಿರುವುದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದು ವೇಳೆ ಶ್ರೀ ಸೀತಾರಾಮಲಕ್ಷ್ಮಣ ದೇವಸ್ಥಾನವು ಅಳಿದಮೇಲೆ ಅಲ್ಲಿನ ಚಪ್ಪಡಿಕಲ್ಲುಗಳನ್ನು ಇಲ್ಲಿ ತಂದು ಸೇರಿಸಿ ಈಗಿನ ಗುಡಿಯನ್ನು ಕಟ್ಟಿಸಿ ಜನಾರ್ದನ ಸ್ವಾಮಿಯನ್ನು ಪ್ರತಿಷ್ಠಿಸಿರಬಹುದು. ಹಾಗೆ ಮಾಡಿದರೂ ಆ ಶಾಸನ ಕಲ್ಲನ್ನು ಗರ್ಭಗೃಹದ ತಳಪಾದಿ ಸ್ಥಳದಲ್ಲಿ ಸೇರಿಸುವುದಿಲ್ಲ. ಮತ್ತೆಲ್ಲಾದರೂ ಇರಬೇಕಾಗಿದ್ದಿತು. ಈ ಶಾಸನ ಕಲ್ಲನ್ನು ಯಾವಾಗ ತಂದರು? ಕಾಲ ತಿಳಿಯದು. A.D. 1598 ವಿಳಂಬಿ ಸಂ.ದಲ್ಲಿ. ಶಕ ೧೫೨೧ ಹಿಂದೆ ಎಷ್ಟು ವರ್ಷಗಳಲ್ಲಿ ಶ್ರೀ ಜನಾರ್ದನಸ್ವಾಮಿ ಪ್ರತಿಷ್ಠಿತರಾದರು? ತಿಳಿಯದು.

ತಳಪಾದಿಕಲ್ಲು ೧೩೩೮ ಎ.ಡಿ ತಂದು ಸೇರಿಸಿದರು. ಜನಾರ್ದನ ಗುಡಿಯೆಂದು ಕರೆದರು ಎಂದಲ್ಲಿ ಆಗ ಉದ್ಭವ ಶ್ರೀರಾಮ ದೇವರ ದೇವಸ್ಥಾನ ಬೇರೆ ಇದ್ದಂತೆ ಆಗುವುದು. ಹಾಗಿಲ್ಲದೆ ಆ ಚಪ್ಪಡಿಕಲ್ಲುಗಳನ್ನು ಬೇರೆ ಸ್ಥಳದಿಂದ ತಂದಿಲ್ಲವೆಂದು ಹೇಳಿದಲ್ಲಿ ಆಗ ಇದೇ ದೇವಸ್ಥಾನದಲ್ಲಿ ಉದ್ಭವ ಶ್ರೀಸೀತಾರಾಮಲಕ್ಷ್ಮಣರು ಪ್ರತಿಷ್ಠೆಯಾಗಿ ಪೂಜೆ ಪಡೆಯುತ್ತಿದ್ದು ಎ.ಡಿ.೧೩೩೮ರ ಅನಂತರ ಕಾಲದಲ್ಲಿ ಎಂದರೆ ೧೩೩೮-೧೫೯೮ ಈ ಮಧ್ಯೆ ನಷ್ಟವಾಗಿ ಅನಂತರ ಈಗಿರುವ ಶ್ರೀಜನಾರ್ದನಸ್ವಾಮಿ ಪ್ರತಿಷ್ಠೆಯೆಂದು ಸ್ಪಷ್ಟವಾಗುವುದು. ಆದರೆ ಕಾಲ ಸರಿಯಾಗಿ ಹೇಳಲಾಗುವುದಿಲ್ಲ. ಏಕೆಂದರೆ ನಮಗೆ ಈ ವಿಷಯ ಬಲಪಡಲು ಇತರ ಯಾವ ಶಾಸನಗಳೂ ದೊರತಿರುವುದಿಲ್ಲ.

೧೩೩೮ ರಲ್ಲಿ ಉದ್ಭವ ಶ್ರೀಸೀತಾರಾಮರಿದ್ದರು. ಅದರ ಹಿಂದಕ್ಕೆ ಬಹುಧಾನ್ಯ ಸಂ. ಎಂದರೆ ಮಾಸ ನಕ್ಷತ್ರಪಾದ ಸೇರುವವರೆಗೂ ಗಣಿತ ಮಾಡಿದಲ್ಲಿ ೨೨.೧೧.೧೦೯೮ ಆಗುವುದು. ಆಗಲೂ ಸಹ ಇರ್ಮೆಯವನ್ ಪ್ರತಿಷ್ಠಿಸಿದ ದೇವರಿಗೆ ಎಂದರೆ ಇನ್ನೂ ಹಿಂದಕ್ಕೆ ಹೋಗುವುದು. ಕಾಲ ಸರಿಯಾಗಿ ತಿಳಿಯುವುದಿಲ್ಲ.

ಇದಕ್ಕೆ ಮೇಲಾಗಿ ವೇದಾಂತೋಪದೇಶಕರಾದ ಶ್ರೀರಾಮಾನುಜರು ಎ.ಡಿ. ೧೦೯೮ರಲ್ಲಿ ಬಹುಧಾನ್ಯ ಸಂ. ಈ ಹೊಯ್‌ಸಳನಾಡು ದೇಶಕ್ಕೆ ರಾಜಕೀಯವಾಗಿ ಬಂದಾಗ ಅವರ ಜೊತೆಯಲ್ಲಿ ತಮಿಳು ಶ್ರೀವೈಷ್ಣವರು ಬಂದು ಅಲ್ಲಲ್ಲಿ ಅಗ್ರಹಾರಗಳಲ್ಲಿ ನಿಂತಿರುವುದು ಕಾಣಬರುತ್ತದೆ. ಈ ಶಾಸನದಲ್ಲಿ ಪೊಮ್ಮಿಯಣ್ಣನ್, ತಿರುನಾರಾಯಣ, ತಿರುವಾಳಿಅಣ್ಣನ್ ಮುಂತಾದವರ ಹೆಸರುಗಳು ಸಾಕ್ಷಿಯಾಗಿವೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ಶಾಸನವು ಈ ರೀತಿ ಇರುವಾಗ ವಿಮರ್ಶನಕಾರರಲ್ಲಿ ಮಹಾರಾಜ ಶಾಸನ ಇಲಾಖಾ ಪಂಡಿತರು ಈ ಶಾಸನ ಬರಬಣಿಗೆಯನ್ನು ನೋಡಿ ಈ ಶಾಸನವು ಅಷ್ಟು ಪುರಾತನವಾದುದಲ್ಲ. ೧೩,೧೪ನೇ ಶತಮಾನಕ್ಕೆ ಸೇರುವುದು ಎಂದು ತಿಳಿಸುವುದಲ್ಲದೆ ಕಾಲಗಣನೆಯನ್ನೂ ತಿದ್ದಿಹುತ್ತಾರೆ. ಈಗಿರುವ ಶಾಸನದಲ್ಲಿ ಸೌರಮಾನವನ್ನನುಸರಿಸಿ ಕಾರ್ತಿಕ ಮಾಸ ಎಂದಿರುವುದು. ವಿಮರ್ಶನಕಾರರು ಚಾಂದ್ರಮಾನಕ್ಕೆ ತಿರುಗಿಸಿ ಕಾಲವನ್ನು ಎ.ಡಿ. ೧೩೩೮ ಎಂದು ನಿರ್ಣಯಿಸಿರುವರು. ಅರ್ಥಾತ್ ಶಕ ೧೨೬೧ ಎಂದು ಹೇಳುವರು. ಆಗ ೯.೧೧.೧೩೩೮ ಎ.ಡಿ. ಕಾಲವಾಗುವುದು. ಇಲ್ಲವಾದಲ್ಲಿ ಶಕ ೧೦೨೮ ಆದಲ್ಲಿ ೨೨.೧೧.೧೧೦೮ ಆಗುವುದು. ಇದರಿಂದ ೬೦ ವರ್ಷಗಳು ವ್ಯತ್ಯಾಸವಾಗುವುದು ಎಂದರೆ ಬಹುಧಾನ್ಯ ವರ್ಷವು ಐದು ಆವರ್ತಿ ಭ್ರಮಣವಾಯಿತೆಂದರ್ಥವು.

ಆದ್ದರಿಂದ ಶಕ ೧೦೨೧ ಬಹುಧಾನ್ಯ ಸಂ. ಕಾರ್ತಿಕ ಬಹುಳ ದ್ವಾದಶಿ ಸೋಮವಾರ ವಿಶಾಖ ನಕ್ಷತ್ರ ಎ.ಡಿ.೨೨.೧೧.೧೧೦೮ ಸರಿಯಾಗಿದೆ. ಇಲ್ಲವಾದಲ್ಲಿ ಸೀತಾರಾಮಲಕ್ಷ್ಮಣ- ಉದ್ಧವ ಸರ್ವಜ್ಞ ದೇವ ಪೆರುಮಾಳ್ ಏನಾದರು ? ಎಂಬ ಪ್ರಶ್ನೆಯೇ ಎಲ್ಲವನ್ನೂ ತಿಳಿಸುತ್ತದೆ.

ಅಲ್ಲದೆ ಬೆಳಗೊಳದ ಇರಿಯಪ್ಪನ್ ಪ್ರತಿಷ್ಠಿಸಿದ ದೇವರಿಗೆ ಎಂದು ಹೇಳುವುದರಿಂದ ಈ ಕಾಲಕ್ಕೆ ಹಿಂದೆಯೇ ಎಂದರೆ ೧೦೨೧ ಬಹುಧಾನ್ಯ ವರ್ಷಕ್ಕೆ ಹಿಂದೆಯೇ ಪ್ರತಿಷ್ಠೆಯಾಗಿರಬೇಕು.

ಈಗಿನ ಧರ್ಮವು ೧೧೯೮ ರಲ್ಲಿ -

ತದನಂತರ ನಮಗೆ ಇನ್ನು ಯಾವ ಶಾಸನವೂ ದೊರಕದೆ ಅನಂತರ ದೊರಕಿರುವ ಶಾಸನ ಶಕ ೧೫೨೧ ಕಾಲ ಆಗ ಆ ದೇವಾಲಯ ಜನಾರ್ದನ ದೇವಾಲಯವಾಗಿದ್ದಿತು. ಅದಕ್ಕೆ ಧರ್ಮ ಎಂದು ಹೇಳುವರು.

ಶಕ ೧೫೨೧ ವಿಳಂಬಿ ಸಂ. ಚೈತ್ರಶುದ್ಧ ಪಂಚಮಿ (31-3-1598) ರಲ್ಲಿ ವಿಜಯನಗರದ ವೆಂಕಟಪತಿದೇವ ಮಹಾರಾಯರು ಪೃಥ್ವೀರಾಜ್ಯಂಗೈಯುತ್ತಿರುವಲ್ಲಿ ಮೈಸೂರು ರಾಜರಾದ ಚಾಮರಸ ಒಡೆಯರ ಮಕ್ಕಳು ಬೆಟ್ಟದ ಚಾಮರಸ ಒಡೆಯರು ಬೆಳಗೊಳದಲ್ಲಿ ಜನಾರ್ದನ ದೇವರ ಸನ್ನಿಧಿಯಲ್ಲಿ ಶ್ರೀವೈಷ್ಣವರು ೨೦ ಮಂದಿ, ವೈದಿಕರು ೩೦ ಮಂದಿ, ಈ ಐವತ್ತು ಮಂದಿ ಬ್ರಾಹ್ಮಣರಿಗೆ ಛತ್ರ ರಾಮಾನುಜಕೂಟದಲ್ಲಿ ಭೋಜನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಡೆಯಲು ಬಿಟ್ಟಂಥಾ ಕ್ಷೇತ್ರಗಳ ವಿವರ - ೧ ಸೆಟ್ಟಿಗನಹಳ್ಳಿ ೨. ಶಂಕರಪುರ (ಮಜ್ಜಿಗೆಪುರ) ಈ ಗ್ರಾಮಗಳಿಗೆ ಸೇರಿದ ಭೂಮಿ ಸರ್ವಮಾನ್ಯವಾಗಿ ಧರ್ಮ ಕೊಡುಗೆ.

ಶ್ರೀಮನ್ ಮಹಾಮಂಡಲೇಶ್ವರ ವೆಂಕಟಪತಿಮಹಾರಾಯರ ಅಣ್ಣಂದಿರು ರಾಮರಾಜಯ್ಯನವರ ಕುಮಾರರು ತಿರುಮಲೆ ರಾಜಯ್ಯನವರು ಚಾಮರಸರಿಗೆ ಕೊಡುಗೆಯಾಗಿ ಕೊಟ್ಟಂಥ

೧. ಸತ್ತಿಗನಹಳ್ಳದ ತೋಟ ವೃತ್ತಿ ೨

ಗದ್ದೆ. ಅಲಕಾಲುಸತ್ತಿಗನಹಳ್ಳದಲ್ಲಿ ಗದ್ದೆ ಕ್ರಯಕ್ಕೆ ತೆಗೆದುದು ಖಂ ೧೪೫೦

೧. ಶಂಕರಪುರದ ಮಹಾಜನಗಳಿಂದ ಚಾಮರಸರು ಕ್ರಯಕ್ಕೆ ತೆಗೆದು ಶಂಕರಪುರಕ್ಕೆ ಪ್ರತಿನಾಮ ಮಜ್ಜಿಗೆಪುರ ಎಂದು ಹೆಸರಿಟ್ಟು ಮಜ್ಜಿಗೆಪುರ ಗ್ರಾಮ ೧ ಅದಕ್ಕೆ ಸೇರಿದ ಗದ್ದೆ ಬೆದ್ದಲು ತೋಟ ಸಕಲ ಸ್ವಾಮ್ಯಗಳೊಂದಿಗೆ

೨. ಬೆಳಗೊಳದ ಜನ್ನರಾಯ ಹೆಬ್ಬಾರುವರಿಂದ ಕ್ರಯಕ್ಕೆ ತೆಗೆದದ್ದು

ಆಗಟನ ಗದ್ದೆಯಿಂದ ಖಂ ೬೦೦

೩. ಚಿಕ್ಕ ಹೆಬ್ಬಾರು ಜನ್ನಯ್ಯನಿಂದ ಕ್ರಯಕ್ಕೆ ತೆಗೆದ ಗದ್ದೆ ಖಂ ೪೬೦

ಇವೆಲ್ಲವನ್ನೂ ಜನಾರ್ದನಸ್ವಾಮಿ ಸನ್ನಿಧಿಯಲ್ಲಿ ಧಾರೆಯೆರೆದು ಶ್ರೀಜನಾರ್ದನಸ್ವಾಮಿಗೆ ನಿತ್ಯದಲ್ಲೂ ನೈವೇದ್ಯವಾಗಿ ಆ ಪ್ರಸಾದವನ್ನು ತೆಗೆದುಕೊಂಡು ಸತ್ರ ರಾಮಾನುಜಕೂಟದಲ್ಲಿ ನಡೆಯುಲುಳ್ಳದು ಎಂಬುದಾಗಿ ಧರ್ಮ ಶ್ರೀ.ಪ. ೭೧

ಭಕ್ತವತ್ಸಲ ಗುಡಿ - ಶ್ರೀ ಜನಾರ್ದನಸ್ವಾಮಿ ಗುಡಿ ಹಿಂಭಾಗದಲ್ಲಿ ಆಶ್ಚರ್ಯಕರವಾದ ಕಟ್ಟಡ ಒಂದಿದೆ. ಎತ್ತರವಾದ ತಳಪಾದಿ ಮೇಲೆ ಕಟ್ಟಿರುವುದು. ಉಪಾನಾದಿ ಸ್ತೂಪಿ ಪರ್ಯಂತ ವೃತ್ತಾಕಾರವಾಗಿದೆ. ಇದಕ್ಕೆ ವೇಸರ ಶೈಲಿಯೆಂದು ಹೆಸರು. ಇಲ್ಲಿ ವಿಷ್ಣುಮೂರ್ತಿ ಮತ್ತು ಆಳ್ವಾರಾಚಾರ್ಯರ ಮೂರ್ತಿಗಳಿದ್ದಿರಬೇಕು. ಈಗ ಯಾವ ಮೂರ್ತಿಯೂ ಇರುವುದಿಲ್ಲ.

ಇದರ ಮೇಲೆ ಮರಗಿಡ ಬಳ್ಳಿಗಳು ಬೆಳೆದು ದೇವಸ್ಥಾನವಿರುವ ಸ್ಥಳವೇ ಕಾಣಬರುವುದಿಲ್ಲ. ಅದನ್ನು ನೋಡಿದಾಗ ಹೃದಯವು ಒಡೆದುಹೋಗುತ್ತದೆ. ಒಳಗೆ ಹೋಗಲು ಮನುಷ್ಯ ಪ್ರವೇಶಕ್ಕೆ ಅವಕಾಶವಿಲ್ಲವಾಗಿದೆ.

ಪಾರ್ಶ್ವದೇವ ಬಸದಿ - ಬಸ್ತೀಪುರ - ಶ್ರೀಮೂಲಸಂಘ ಕಾನೂರ್ಗಣ ತಿಂತ್ರಿಣೆಗಚ್ಛ ಮತ್ತು ಕೊಂಡಕುಂದಾನ್ವಯದ ವಾಸುಪೂಜ್ಯದೇವರ ಶಿಷ್ಯರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಸಕಳಚಂದ್ರ ದೇವರು - ಶಕ ೧೩೧೫ ಶುಭಕ್ರತು ಸಂ. ಶ್ರಾವಣಮಾಸ ಶುದ್ಧ ಪಾಡ್ಯಮಿ ಆದಿತ್ಯವಾರ ಸಿಂಹಲಗ್ನದಲ್ಲಿ ಕೂರಗಿಹಳ್ಳಿಯ ಪ್ರಭುಗಳು ಗೌಡ ತಿಲಕರು ಎಂದರೆ ಕೇತಗೌಡ. ರಾಮಗೌಡ, ಸಂಬುವಗೌಂಡ ಮತ್ತು ಮಾದಿಗೌಂಡ ಮೊದಲಾದ ಸಮಸ್ತ ಗೌಡರುಗಳೂ ಸೇರಿ ಬಸದಿಯನ್ನು ಕಟ್ಟಿಸಿ ಪಾರ್ಶ್ವನಾಥ ದೇವರನ್ನು ಪ್ರತಿಷ್ಠಿಸಿದ ಧರ್ಮ. ಆ ದೇವರಿಗೆ ನಿತ್ಯ ನಿವೇದನವಾಗಲು ಅಮೃತ ಪಡಿಗೆ ಭೂಮಿ ಸಮರ್ಪಿಸಿದ ಧರ್ಮ. ಗದ್ದೆ ಕೊ. ೧೦ ಶ್ರೀ.ಪ.೭೫

ಈಗ ಈ ದೇವಸ್ಥಾನ ಯಾವುದೂ ಕಾಣಬರುವುದಿಲ್ಲ.

ಪಾರ್ಶ್ವನಾಥಸ್ವಾಮಿ - ಬೆಳಗೊಳ - ಇಲ್ಲಿ ಶ್ರೀಪಾರ್ಶ್ವನಾಥ ಬಸದಿ ವಿಷಯವಾಗಿ ನಂದಿಸಂಘ ಮತ್ತು ದ್ರವಿಡಸಂಘ ಎಂಬುದಾಗಿ ಆರಂಭಿಸಿದ ಶಾಸನವಿರುವುದು. ಯಾವ ವಿಷಯವೂ ಸ್ಪಷ್ಟವಾಗಿ ತಿಳಿಯಬರಲಿಲ್ಲ. ಶ್ರೀ.ಪ. ೭೩. H.A.R. 1944-12

ಕೈಲಾಸೇಶ್ವರ ದೇವಸ್ಥಾನ - ಬೆಳಗೊಳ - ಶಕ........ ಶುಭಕ್ರತು ಸಂ. ಕಾರ್ತಿಕ ಶುದ್ಧ ೧ ಬೆಳಗೊಳದ.... ಅವಳ ಮಗಳು ಸಂಗಮಾಲೆಯು ದೇವರಿಗೆ ದೀಪಮಾಲೆ ಕಂಭದ ಧರ್ಮ. ಶ್ರೀ.ಪ. ೭೨

ಕಾಲ ವ್ಯಕ್ತಿ ಯಾವುದೂ ಕಾಣಬರಲಿಲ್ಲ. ಈ ಶಾಸನವು ಪಾಳುಬಿದ್ದ ಕೈಲಾಸೇಶ್ವರ ಗರುಡ ಕಂಭದ ಮೇಲೆ ಇರುವುದು. (ದೀಪಸ್ತಂಭ)

ಶ್ರೀನಿವಾಸ ಕ್ಷೇತ್ರ - ಶ್ರೀನರಸಿಂಹಸ್ವಾಮಿ ದೇವಸ್ಥಾನ

ಬಲಮುರಿ ಕ್ಷೇತ್ರ- ಬಲಂಬು ತೀರ್ಥ. ಬೆಳಗೊಳದಿಂದ ಸುಮಾರು ಮೂರು ಮೈಲಿ ದೂರದಲ್ಲಿ ಕಾವೇರಿ ನದಿಯ ಬಲದಂಡೆಯ ಮೇಲಿರುವುದು. ಇಲ್ಲಿ ಶ್ರೀನರಸಿಂಹಸ್ವಾಮಿ ದೇವಸ್ಥಾನವಿರುವುದು.

ಶಕ ೧೭೬೫ ಶುಭಕ್ರತು ಸಂ. ವೈಶಾಖ ಶುದ್ಧ ೧೫ ಸೋಮವಾರ (23-5-1842) ರಲ್ಲಿ ಶ್ರೀ ನರಸಿಂಹಸ್ವಾಮಿ ದೇವಸ್ಥಾನದ ಅಡಿಗೆಮನೆಯನ್ನು ದೇವಶಿಖಾಮಣಿ ತಿರುಮಲಾಚಾರ್ಯರ ಪತ್ನಿ ಕಲ್ಯಾಣಮ್ಮನ ಹೆಸರಿನಲ್ಲಿ ಒಂಭತ್ತು ಅಂಕಣ ಕಟ್ಟಲ್ಪಟ್ಟಿತು. ಶ್ರೀ.ಪ. ೮೧

ಇದೇ ರೀತಿಯಲ್ಲಿ ಅಗಸ್ತ್ಯೇಶ್ವರ ದೇವಸ್ಥಾನದ ಹೊರಭಿತ್ತಿ ಪಶ್ಚಿಮದ ಕಡೆ ಸಣ್ಣಗುಡಿಯ ಬಾಗಿಲವಾಡದ ಮೇಲೆ ಬರೆದಿರುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿಲಾಮಂಡಪ - ಶಕೆ ೧೭೭೦ ಪ್ಲವಂಗ ಸಂ. ಆಶ್ವಯುಜ ಶುದ್ಧ ೧೦ (19-10-1847) ಮಂಗಳವಾರ ಈ ಕ್ಷೇತ್ರದಲ್ಲಿ ಮಠಾಧಿಪತಿ ಶ್ರೀನೃಸಿಂಹ ಶಠಕೋಪಸ್ವಾಮಿ ಇರುವ ಮಠದಲ್ಲಿ ನಿತ್ಯ ತದೀಯಾರಾಧನೆ ನಡೆಯಲು ಹರಿತಸ ಗೋತ್ರ ರಾಮಯ್ಯಂಗಾರ್ರ ಪುತ್ರಿ ಸುಬ್ಬಾರಮ್ಮನು ಎಂಟು ಅಂಕಣ ಶಿಲಾಮಂಡಪವನ್ನು ಕಟ್ಟಿಸಿದ ಧರ್ಮ. ಶ್ರೀ.ಪ.೬೨

ಮೇಲೆ ತಿಳಿಸಿರುವ ಮಠದಿಂದ ಹೊರಭಾಗ ಕಾವೇರಿ ನದಿಗೆ ಇಳಿಯಲು ಇರುವ ಸೋಪಾನ- ಮೆಟ್ಟಿಲು ನಿರ್ಮಾಣ ವಾರಣಾಸಿ ನಂಜಮ್ಮನು ಕಟ್ಟಿಸಿದ ಧರ್ಮ ಶ್ರೀ.ಪ. ೬೩.

ಇದರಿಂದ ತಿಳಿಯುವುದೇನೆಂದರೆ ಈ ಸ್ಥಳದಲ್ಲಿ ಶ್ರೀವೈಷ್ಣವರ ಅಹೋಬಿಲ ಮಠವು ಇದ್ದಿರಬೇಕು. ಅಹೋಬಿಲ ಮಠಾಧಿಪತಿ ಜೀಯರು ಇಲ್ಲಿ ಕೆಲವು ಕಾಲವಿದ್ದಿರಬಹುದು. ಅಲ್ಲಿ ನಿತ್ಯ ಸಮಾರಾಧನೆ ನಡೆಯುತ್ತಿತ್ತೆಂದು ಅರ್ಥವಾಗುತ್ತದೆ.

ಶ್ರೀನರಸಿಂಹಸ್ವಾಮಿ ಅಡಿಗೆ ಮನೆಯನ್ನು ದೇವಶಿಖಾಮಣಿ ತಿರುಮಲಾಚಾರ್ಯರ ಹೆಂಡತಿ ಕಲ್ಯಾಣಮ್ಮ ಎನ್ನುವಾಗ ಶ್ರೀವೈಷ್ಣವರಲ್ಲಿ ಒಂದಾದ ಮಂಡಯಂ ಸಮುದಾಯದವರೆಗೆ. ಈ ದೇವಸ್ಥಾನದ ಅಧಿಕಾರ ಮರ್ಯಾದೆ ತೀರ್ಥ ಶಠಕೋಪ ಮರ್ಯಾದೆಗಳಿದ್ದವು ಎಂಬುದಾಗಿ ತಿಳಿಯಬರುವುದು.

ಇಲ್ಲಿಯ ಕಾವೇರಿ ತೀರದ ಸನ್ನಿವೇಶ ಬಹುರಮ್ಯವಾಗಿದೆ. ಸೋಪಾನಪಟ್ಟಿಗಳು ಅಸದೃಶವಾಗಿ ಕಾಶಿಕೆಲಸದಿಂದ ಕೂಡಿದ ಶಿಲ್ಪಚಾತುರ್ಯದಿಂದ ಕೂಡಿ ಬಹು ಮನೋಹರವಾಗಿರುವುದು.

ಈ ಸೋಪಾನಗಳ ಮೇಲೆ ಕುಳಿತು ಸುತ್ತಲೂ ಇರುವ ಪ್ರಕೃತಿಸೌಂದರ್ಯವನ್ನು ನದಿಯ ಗಂಭೀರವಾದ ಪ್ರವಾಹವನ್ನೂ ಅವಲೋಕಿಸುತ್ತಾ ಕುಳಿತರೆ ಎಷ್ಟು ಹೊತ್ತಾದರೂ ಅನ್ನಪಾನಾದಿಗಳು ಬೇಕಾಗಿರುವುದಿಲ್ಲ. ಸದಾ ಕುಳಿತಿರಬಹುದು ಎಂದು ಅನಿಸುವುದು. ಬಹಳಹೊತ್ತು ಸುಮ್ಮನೆ ಕುಳಿತಿರುವುದೂ ಸಾಧ್ಯವಿರುವುದಿಲ್ಲ. ಈ ಸ್ಥಳದ ಸೌಂದರ್ಯವು ಕಣ್ಮನಗಳಿಗೆ ಆನಂದವನ್ನೂ ತದ್ವಾರ ಮನಸ್ಸಿಗೆ ತೃಪ್ತಿಯನ್ನೂ ಕೊಡುವುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಗಸ್ತ್ಯೇಶ್ವರ ದೇವಸ್ಥಾನ - ಬಲಂಬುಕ್ಷೇತ್ರ (ಬಲಮುರಿ)

ಶಕ ೯೦೫ ಚಿತ್ರಭಾನು ಸಂ. ಫಾಲ್ಗುಣ ಶುದ್ಧ ೫ ಸೋಮವಾರ (A.D. 983) ರಲ್ಲಿ ಶ್ರೀಮತು ಲಖಂಣ ಒಡೆಯರ ನಿರೂಪದ ಪ್ರಕಾರ ಬೆಳಗೊಳಡ ಅಣ್ಣಿಗಳ ಮಕ್ಕಳು ಆಳಗುವಣ್ಣನವರು ಅಗಸ್ತ್ಯೇಶ್ವರ ದೇವಸ್ಥಾನವನ್ನು ಕಟ್ಟಿಸಿ ಪ್ರತಿಷ್ಠಿಸಿದರು. ಇದಕ್ಕೆ ಲಖಂಣ ಒಡೆಯರ ಧರ್ಮ.

ಶ್ರೀ.ಪ. ೭೭

ಶಕ ೯೩೪ ಪರಿಧಾವಿ ಸಂ. ಉತ್ತರಾಯಣ ಸಂಕ್ರಾಂತಿ ರಾಜರಾಜರ ರಾಜ್ಯಪಟ್ಟಾಭಿಷೇಕ ೨೮ನೇ ವರ್ಷ ಕಾಲದಲ್ಲಿ (- - 1012) ಶ್ರೀ ಕೋವಿರಾಜ ರಾಜಕೇಸರಿವರ್ಮರಾದ ಶ್ರೀರಾಜರಾಜ... ಅವರ ಪಾದಪಂಕಜ ಭ್ರಮರ ಪಂಚವ ಮಹಾರಾಯರಿತ್ತ, ವೆಂಗಿಮಂಡಲಕ್ಕೂ, ಗಂಗಮಂಡಲಕ್ಕೂ ಮಹಾದಣ್ಡನಾಯಕ ಪದವಿಯನ್ನು ಪಡೆದು, ಅಗಸ್ತ್ಯೇಶ್ವರರಿಗೆ ಎರಡು ವೇಳೆಯೂ, ನಿವೇದನವಾಗಲು ಎರಡು ಬಳ್ಳ ಅಕ್ಕಿ ಪ್ರಸಾದ ಮತ್ತು ನಂದಾದೀಪಕ್ಕಾಗಿ ಚೋಳಪ್ರಭುವಿನ ಧರ್ಮವು.

ಶ್ರೀ.ಪ. ೭೮

ಪಾರ್ವತಿ ಅಮ್ಮನವರ ಸನ್ನಿಧಿ -

ಇದು ಸ್ನಾನಘಟ್ಟಕ್ಕೆ ಸೇರಿದಂತೆ ಅಗಸ್ತ್ಯೇಶ್ವರ ದೇವಸ್ಥಾನದ ಪಕ್ಕದಲ್ಲಿರುವುದು.

ಸೇತುವೆ ಮಾರ್ಗ - ಬೆಳಗೊಳ - ೭೫ ಶುಭಕೃತು ಸಂ. (A.D....) ರಲ್ಲು ಮಹಾಪ್ರಧಾನ ಹೆಗ್ಗಡೆದೇವ ದಣ್ಡನಾಯಕ ಬಲುಮನುಷ್ಯ ಬಿಲ್ಲಂಗೆರೆಯ ರಾಮಣ್ಣ ಬೆಳಗೊಳದಲ್ಲಿ ಕಾವೇರಿಗೆ ಅಡ್ಡಲಾಗಿ ಹೋಗಿಬರಲು ಸೇತುವೆಮಾರ್ಗ ಕಟ್ಟಿಸಿದ ಧರ್ಮ

ಶ್ರೀ. ಪ ೮೪

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೈಸೂರು ಪ್ರಧಾನರು

ಪ್ರಧಾನಿ ತಿರುಮಲರಾವ್ - ನಾರಾಯಣರಾವ್ ಅವರುಗಳ ವಿಚಾರ.

ಶ್ರೀಮತು ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ತಮ್ಮ ಪತಿಯು ತೀರಿಹೋಗಿ ರಾಜ್ಯವೂ ಅನ್ಯಾಕ್ರಾಂತವಾಗಿರುವುದನ್ನು ನೋಡಿ ದುಃಖಿಸಿ ಹಿಂದು ರಾಜ್ಯವನ್ನು ಕಾಪಾಡಬೇಕೆಂದು ರಾಜಕಾರ್ಯವನ್ನೆಲ್ಲಾ ತಿರುಮಲರಾವು, ನಾರಾಯಣರಾಯರಿಗೆ ತಿಳಿಸಿದರು. ತಾವೂ ಸೇರಿ ರಾಜಮನೆತನವೆಲ್ಲಾ ಸೆರೆಯಾಳುಗಳಾಗಿರುವುದನ್ನು ಅವರು ಹೇಗಾದರೂ ಮಾಡಿ ಅವರನ್ನೆಲ್ಲಾ ಸ್ವತಂತ್ರರನ್ನಾಗಿ ಮಾಡಿ ಹಿಂದು ರಾಜ್ಯವನ್ನು ಕಾಪಾಡಬೇಕೆಂದು ತಿಳಿಸಿದರು. ಪ್ರಧಾನಿಗಳಾದ ಶ್ರೀ ತಿರುಮಲರಾವು ಮತ್ತು ನಾರಾಯಣರಾವುಗಳು ಮಹಾರಾಣಿಯವರ ಪರವಾಗಿ ಕುಂಪಣಿಯವರೊಂದಿಗೆ ವ್ಯವಹಾರ ಕಾಗದ ಪತ್ರಗಳು ಒಪ್ಪಂದಗಳು ನಡೆದದ್ದರ ಫಲವಾಗಿ ೧೭೮೬, ೧೭೯೯ ಈ ವರ್ಷಗಳಲ್ಲಿ ಯುದ್ಧಕ್ಕೆ ಕಾರಣವಾಗಿ, ಮೈಸೂರು ಸ್ವತಂತ್ರತೆಯನ್ನು ಹೊಂದಿ ಹಿಂದು ರಾಜರ ಪ್ರತಿಷ್ಠೆಯಾಯಿತು. ಈ ವಿಷಯದಲ್ಲಿ ಪ್ರಧಾನಿ ತಿರುಮಲರಾಯ, ನಾರಾಯಣರಾಯರ ಪೂರ್ವಜರ ಮತ್ತು ರಾಜ್ಯಾಂಗದ ಚರಿತ್ರೆ ವಿಷಯವನ್ನು ಸೂಕ್ಷ್ಮವಾಗಿ ಬರೆದಿರುವುದು.

ಶ್ರೀರಂಗನಾಥಸ್ವಾಮಿ ದೇವಸ್ಥಾನದ ಕಾಲವಿಚಾರವನ್ನು ತಿಳಿಸುವಾಗ ಮಹಾವಿದ್ವಾನ್ ಆನಂದಾಳ್ವಾರ್ಯರ ವಿಷಯ ಕಿಂಚಿತ್ ತಿಳಿಸುವಾಗ ಅವರು ವೇದಾಂತ ಬೋಧಕರಾದ ಶ್ರೀರಾಮಾನುಜರ ಶಿಷ್ಯರು. ಸಮಕಾಲೀನರು ಎಂದು ತಿಳಿಸಿರುತ್ತೇವೆ.

ಆನಂದಾಳ್ವಾರ್ಯರ ವಂಶದಲ್ಲಿ ಪರಂಪರೆಯಾಗಿ ಬಂದ ಪೆರಿಯ ಗೋವಿಂದರಾಜಒಡೆಯ ಎಂಬುವರು ಕೂಟಸ್ಥರು. ಇವರ ಕುಮಾರರು ಅಪ್ಪಯ್ಯಂಗಾರ್ಯರು. ಇವರಿಗೆ ಕುಮಾರೋಭಯ ವೇದಾಂತಾಚಾರ್ಯರೆಂಬ ಬಿರುದುಂಟು. ಈ ಅಪ್ಪಯ್ಯಂಗಾರ್ಯರಿಗೆ ಇಬ್ಬರು ಮಕ್ಕಳು.-

೧. ಚಿಕ್ಕಗೋವಿಂದರಾಜ ಒಡೆಯರು. ೨. ತಿಮ್ಮಯ್ಯಂಗಾರ್ಯರು. ಚಿಕ್ಕಗೋವಿಂದಾಚಾರ್ಯರು ಆನೆಗೊಂದಿ ರಾಜರ ಆಸ್ಥಾನದಲ್ಲಿ ಆರಾಧ್ಯನೆಂಬ ವಿದ್ವಾಂಸನನ್ನು ವಿದ್ವತ್ಸಭೆಯಲ್ಲಿ ಜಯಿಸಿ ಯಶಸ್ಸನ್ನು ಸಂಪಾದಿಸಿದರು. ಇದನ್ನು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿಳಿದ ವಿಜಯನಗರ ಮಹಾರಾಜ ಕೃಷ್ಣದೇವರಾಯನು ಇವರನ್ನು ಬರಮಾಡಿಕೊಂಡು ಇವರಿಗೆ ಧಾರಾಪೂರ್ವಕವಾಗಿ ಕೃಷ್ಣರಾಯಪುರವೆಂಬ ಪ್ರತಿನಾಮ ಶೋಭಿತವಾದ ಚಿಕ್ಕ ಮಂಡಯ ೨. ಕಲ್ಲಹಳ್ಳಿ ೩. ಹೊಸಹಳ್ಳಿ ೪. ತಂಡಸೇಹಳ್ಳಿ ೫. ಮಂಡಯ ೬. ಕೋಣಪನಹಳ್ಳಿ ಎಂಬ ಆರುಗ್ರಾಮಗಳನ್ನು A.D. 1516ರಲ್ಲಿ ದಾನ ಮಾಡಿದರು.

ಗ್ರಾಮಭೂಮಿಗಳನ್ನು ಪಡೆದ ನಂತರ ಬಂಧುಮಿತ್ರ ಪರಿವಾರದೊಂದಿಗೆ ಮಂಡಯಂ ಅಗ್ರಹಾರಕ್ಕೆ ಬಂದು ಅಲ್ಲಿ ವೇದಾಂತ ಕಾಲಕ್ಷೇಪ ಮತ್ತು ಸಿದ್ಧಾಂತ ಪ್ರಚಾರದಲ್ಲಿ ನಿರತರಾದರು. ಇವರೂ ಇವರ ತಮ್ಮಂದಿರೂ ಸೇರಿ ಅನೇಕ ವೇದಾಂತ ಗ್ರಂಥಗಳನ್ನು ಬರೆದಿರುವರು. ಚಿಕ್ಕ ಗೋವಿಂದರಾಜರು ತಮಗೆ ವಿಜಯನಗರದ ಅರಸರಿಂದ ಕೊಡಲ್ಪಟ್ಟ ಗ್ರಾಮಭೂಮಿಗಳನ್ನು ೫೪ ಭಾಗ ಮಾಡಿ, ತಮ್ಮ ಬಂಧು ಮಿತ್ರ ಜ್ಞಾತಿಗಳಿಗೆ ಈ ಕೆಳಗೆ ಕಂಡ ರೀತಿಯಲ್ಲಿ ಹಂಚಿದರು.

	ಭಾಗ	ಗ್ರಾಮಗಳ ವಿವರ
೧. ತಮಗೆ ಚಿಕ್ಕಗೋವಿಂದರಾಜರಿಗೆ	೨೩	ಕಲ್ಲಹಳ್ಳಿಮಂಡಯ, ಚಿಕ್ಕಮಂಡಯ
೨. ತಮ್ಮಂದಿರಾದ ತಿಮ್ಮಯ್ಯಂಗಾರಿಗೆ	೧೪	ಕೋಣಪನಹಳ್ಳಿ
೩. ತಮ್ಮ ಚಿಕ್ಕಮ್ಮನ ಕುಮಾರರಾದ ಹೊಟ್ಟೆಕುಮಾರ ತಿರುಮಲಯ್ಯಂಗಾರ್ರಿಗೆ	೧೦	ತಂಡಸೇಹಳ್ಳಿ
೪. ತಮ್ಮ ಜ್ಞಾತಿಗಳಾದ ಕುನ್ರಪಾಕ್ಕಂ ಅಪ್ಪಯ್ಯಾಚಾರ್ಯರಿಗೆ	೧	
೫. ತಮ್ಮ ಅಳಿಯಂದಿರು ಪೆರುಂಬೂದರಯ್ಯ ಮತ್ತು ಕೋನಪ್ಪನ್ ಇಬ್ಬರಿಗೆ	೨	ಹೊಸಹಳ್ಳಿ
೬. ತಮ್ಮ ಮುಖ್ಯ ಶಿಷ್ಯರಾದ ಢಣಾಯಕ ತಿಮ್ಮಯ್ಯಂಗಾರ್ರಿಗೆ	೨	
೭. ಶ್ಯಾನುಭೋಗರಿಗೆ	೨	ಭಾಗ
ಮೊತ್ತ	೫೪	ಗ್ರಾಮಗಳು ೬

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿಜಯನಗರದ ಅರಸರಿಂದ ತಮಗೆ ಲಭ್ಯವಾದ ಗ್ರಾಮ ಭೂವಿಗಳನ್ನು ವಿಭಾಗಿಸಿ ೧೫೧೬ ರಲ್ಲಿ ಮಂಡಯಂ ಅಗ್ರಹಾರವನ್ನು ಸ್ಥಾಪಿಸಿ ಅಲ್ಲಿ ನಿತ್ಯವಾಸಿಗಳಾದರು.

ಅಪ್ಪಯ್ಯಾಚಾರ್ ಶ್ರೀನಿವಾಸಾಚಾರ್ಯರು

(ರಾಮಾನುಜಪುರಂ ಅಗ್ರಹಾರ ಸ್ಥಾಪಕರು.)

ವಿದ್ವಾನ್ ತಿರುಮಲೆ ಗೋವಿಂದರಾಜ ಒಡೆಯರು ತಮಗೆ ಲಭ್ಯವಾದ ಗ್ರಾಮ ಭೂಮಿಗಳನ್ನು ಬಂಧುಮಿತ್ರರಿಗೆ ವಿಭಾಗಿಸಿಕೊಟ್ಟಮೇಲೆ ಗೋವಿಂದರಾಜ ಒಡೆಯರಿಗೆ ಕುನ್ರಪಾಕಂ ಅಪ್ಪಯ್ಯಾಚಾರ್ಯರು (ವೆಂಕಟಾಚಾರ್ಯರು) ಸಗೋತ್ರ ಜ್ಞಾತಿಯಾದುದರಿಂದ ಅವರಿಗೂ ಒಂದು ಭಾಗವು ಕೊಡಲ್ಪಟ್ಟಿತು. ಅವರು ಆ ಭಾಗವನ್ನು ಅನುಭವಿಸಿಕೊಂಡು ಮಂಡಯಂ ಅಗ್ರಹಾರದಲ್ಲಿ ಬಹುಕಾಲವಿದ್ದರು. ಈ ಅಪ್ಪಯ್ಯಾಚಾರ್ಯರಿಗೆ ಇಬ್ಬರು ಮಕ್ಕಳು. ಜ್ಯೇಷ್ಠರು ವರದಾಚಾರ್ಯರು. ೨. ಗೋವಿಂದ ರಾಜರು. ಜ್ಯೇಷ್ಠರಾದ ವರದಾಚಾರ್ಯರಿಗೆ ಇಬ್ಬರು ಮಕ್ಕಳು. ಅಪ್ಪಯ್ಯಾಚಾರ್ ಶ್ರೀನಿವಾಸಾಚಾರ್ ಇವರು ಮಹಾವಿದ್ವಾಂಸರಾದ್ದರಿಂದ ವಿಜಯನಗರದ ಮಹಾರಾಜರಾದ ಸದಾಶಿವರಾಯರು 1557 A.D. ರಲ್ಲಿ ಚನ್ನಪಟ್ಟಣ ತಾಲ್ಲೂಕು ಕೊಂಡರಾಜಪುರವೆಂಬ ಪ್ರತಿನಾಮವುಳ್ಳ ಮಾಚೇನಹಳ್ಳಿ ಗ್ರಾಮವನ್ನು ಕೊಟ್ಟರು. ಈ ಮಾಚೇನಹಳ್ಳಿಗೆ ೧೫೫೮ರಲ್ಲಿ ರಾಮಾನುಜಪುರವೆಂದು ಹೆಸರಿಟ್ಟು ಅಗ್ರಹಾರವನ್ನಾಗಿ ಮಾಡಿ ಗುಡಿಗೋಪುರಗಳನ್ನು ಕಟ್ಟಿಸಿ ಶ್ರೀನಿವಾಸ ದೇವರನ್ನು ಪ್ರತಿಷ್ಠಿಸಿದರು. ಅಲ್ಲಿಯೇ ವಾಸಮಾಡತೊಡಗಿದರು. ಅವರ ಅನುಯಾಯಿಗಳೆಲ್ಲರೂ ರಾಜಾಶ್ರಯವನ್ನು ಪಡೆದು ಅಗ್ರಹಾರದ ವಾಸದವರಾದ್ದರಿಂದ ರಾಮಾನುಜಪುರದವರೆಂದೇ ಪ್ರಸಿದ್ಧಿಯಾದರು.

ರಾಜ ಒಡೆಯರು 1608ರಲ್ಲಿ ಪಟ್ಟಕ್ಕೆ ಬಂದರು. ಗೋವಿಂದರಾಜರ ವಂಶದಲ್ಲಿ ಬಂದ ತಿರುಮಲಯ್ಯಂಗಾರ್ಯರು ವಿಜಯನಗರದ ಅರಸರ ಪ್ರೀತಿಯನ್ನು ಸಂಪಾದಿಸಿ ರಾಜ ಒಡೆಯರ ಆಳ್ವಿಕೆಯನ್ನು ಸ್ಥಿರಪಡಿಸಿದ್ದರಿಂದ ಪ್ರೀತರಾದ ರಾಜ ಒಡೆಯರು ಅವರಿಗೆ ಅನೇಕ ಜಹಗೀರಿ ಗ್ರಾಮ ಭೂಮಿಗಳನ್ನು ಕೊಟ್ಟು ಅವರನ್ನು ತಮ್ಮ ಮಂತ್ರಿಗಳನ್ನಾಗಿ ನೇಮಿಸಿದರು.

೧೬೩೮ ರಲ್ಲಿ ಕಂಠೀರವ ನರಸರಾಜ ಒಡೆಯರು ಅವರಿಗೆ ಮಕ್ಕಳಿಲ್ಲವಾದ್ದರಿಂದ ತಿರುಮಲಯ್ಯಂಗಾರ್ಯರ ಮಕ್ಕಳು ಅಪ್ಪಾಜಯ್ಯ,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೋವಿಂದಾಚಾರ್ಯರು, ದೊಡ್ಡದೇವರಾಜಯ್ಯನವರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದರು. ಈ ರೀತಿಯಲ್ಲಿ ಗೋವಿಂದರಾಜ ಒಡೆಯರ ವಂಶದವರು ಪರಂಪರೆಯಾಗಿ ಪ್ರಧಾನಮಂತ್ರಿಗಳಾಗಿ, ರಾಜಕಾರ್ಯವನ್ನು ನಡೆಸಿಬರುವವರಾದರು.

೧೭೩೨ ರಲ್ಲಿ ದೊಡ್ಡದೇವರಾಜಯ್ಯನವರ ಮಗ ದೇವರಾಜ ಒಡೆಯರು ಪಟ್ಟಕ್ಕೆ ಬಂದರು. ಆಗ ರಾಜ್ಯದ ಸರ್ವಾಧಿಕಾರವನ್ನು ವಿಶಾಲಾಕ್ಷ ಪಂಡಿತರು ನಡೆಸುತ್ತಿದ್ದು ೧೭೩೮ ರಲ್ಲಿ ಕೊಲೆಮಾಡಲ್ಪಟ್ಟರು. ಆಗ ಅಪ್ಪಾಜಯ್ಯನವರಿಗೆ ಸರ್ವಾಧಿಕಾರ ಕೊಡಲ್ಪಟ್ಟಿತು. ಆದರೆ ಅಪ್ಪಾಜಯ್ಯ ಗೋವಿಂದರಾಜಯ್ಯನವರು ವೃದ್ಧರಾದ್ದರಿಂದ ತಮ್ಮ ಮಗಳ ಮಗ ತಿರುಮಲಯ್ಯಂಗಾರ್ಯನು ಮೇಧಾವಿಯೂ, ರಾಜನೀತಿ ಧುರಂಧರನೂ ಆಗಿದ್ದುದರಿಂದ ಅವರನ್ನು ಮಂತ್ರಿಯಾಗಿ ಏರ್ಪಡಿಸಿದರು. ಚಿಕ್ಕದೇವರಾಜ ಒಡೆಯರು ತಮ್ಮ ಅವಸಾನಕಾಲದಲ್ಲಿ ತನ್ನ ಮಗ ಕಿವುಡು ಮೂಕನಾದ್ದರಿಂದ ಅವರ ಪರಿಪಾಲನೆಯನ್ನೂ, ರಾಜ್ಯವನ್ನೂ, ಅಪ್ಪಾಜಯ್ಯ, ಗೋವಿಂದರಾಜಯ್ಯನವರಿಗೂ, ತಿರುಮಲಯ್ಯಂಗಾರ್ಯರಿಗೂ ಒಪ್ಪಿಸಿ ೧೭೦೪ ರಲ್ಲಿ ಪರಮಪದಿಸಿದನು. ಪ್ರಧಾನಮಂತ್ರಿ ಇವರಿಬ್ಬರೂ ಕಂಠೀರವ ನರಸರಾಜರನ್ನು ಸಿಂಹಾಸನದಲ್ಲಿ ಕುಳ್ಳಿರಿಸಿದರು. ಸುಮಾರು ಐದು ವರ್ಷಗಳ ಕಾಲದ ಮೇಲೆ ಪ್ರಧಾನರೂ, ಮಂತ್ರಿಗಳೂ ಪರಮಪದಿಸಿದರು.

ಈ ಮಧ್ಯ ವೇಳೆಯಲ್ಲಿ ಹೈದರನಾಯಕನು ಪ್ರಬಲನಾಗಿ ೧೭೬೨ ರಲ್ಲಿ ರಾಜ್ಯವನ್ನಾಕ್ರಮಿಸಿದನು. ೧೭೬೫ ರಲ್ಲಿ ಹೈದರನಾಯಕನು ಪ್ರಧಾನ ಗೋವಿಂದರಾಜರ (ಪ್ರಧಾನ ಗೋವಿಂದರಾಜಯ್ಯನವರ ಮೊಮ್ಮಗ) ಐಶ್ವರ್ಯದ ಮೇಲೆ ಕಣ್ಣಿಟ್ಟುದರ ಫಲವಾಗಿ ಅವರು ಕೊಲೆ ಮಾಡಲ್ಪಟ್ಟರು. ಆ ಸಮಯದಲ್ಲಿ ಗೋವಿಂದರಾಜಯ್ಯನವರ ಮಕ್ಕಳು ತಿರುಮಲರಾವು, ನಾರಾಯಣರಾವು ಪ್ರಧಾನರಾದರು. ಇದೇ ಸಮಯದಲ್ಲಿ ಇಮ್ಮಡಿ ಕೃಷ್ಣರಾಜರೂ ಗತಿಸಿದರು.

ಮಹಾರಾಣಿ ಲಕ್ಷ್ಮಮ್ಮಣ್ಣಿಯು ಗಂಡನು ಗತಿಸಿ ರಾಜ್ಯವೂ ಅನ್ಯಾಕ್ರಾಂತವಾದುದನ್ನು ನೋಡಿ ದುಃಖಿಸಿ ಉಪಾಯವನ್ನಾಲೋಚಿಸಿ ೧೭೭೬ ರಲ್ಲಿ ಪ್ರಧಾನರಾದ ತಿರುಮಲರಾಯರನ್ನೂ, ನಾರಾಯಣ ರಾಯರನ್ನೂ ಬರಮಾಡಿಕೊಂಡು ರಾಜ್ಯವು ಅನ್ಯಾಕ್ರಾಂತವಾಗಿರುವುದನ್ನೂ ಮತ್ತು ತಮ್ಮನ್ನೆಲ್ಲಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸೆರೆಹಿಡಿದಿರುವುದನ್ನೂ ತಿಳಿಸಿ ರಾಜ್ಯವನ್ನೂ, ರಾಜಮನ್ನೆತನವನ್ನೂ ಕಾಪಾಡಬೇಕೆಂದು ತಿಳಿಸಿದರು.

ತಿರುಮಲ್ಲರಾಯರು, ನಾರಾಯಣರಾಯರು ದೇಶಭಕ್ತರೂ ರಾಜನೀತಿಪರರೂ, ಆಗಿದ್ದುದರಿಂದ ಬಹುದ್ರವ್ಯ ವ್ಯಯದಿಂದ ಪಾಳೆಯಗಾರರನ್ನೂ, ಇತರರನ್ನೂ ತಮ್ಮ ಕಡೆ ಸೇರಿಸಿಕೊಂಡು ಸೈನ್ಯದೊಂದಿಗೆ ಹೊರಟು 2-4-1783 ರಲ್ಲಿ ಕರೂರು ಕೋಟೆಯನ್ನು ಹಿಡಿದು ಅದರ ಮೇಲೆ ಮೈಸೂರು ಧ್ವಜವನ್ನು ಹಾರಿಸಿದರು. ಆ ನಂತರ ಅವರಾಂಕೂರ್ಚ, ಡಿಂಡಿಗಲ್ಲು ಮೊದಲಾದ ಪ್ರಾಂತಗಳನ್ನು ಸ್ವಾಧೀನಪಡಿಸಿಕೊಂಡರು.

ಅನಂತರ ಕಾಲದಲ್ಲಿ ಕೊಯಮತ್ತೂರಿಗೆ ಪ್ರಯಾಣಮಾಡಿ ಅದನ್ನು ಜನಭರಿತ ಪಟ್ಟಣವನ್ನಾಗಿಸಿದರು. ಅಲ್ಲಿ ಒಂದು ಕೋಟೆಯನ್ನು ಕಟ್ಟಿಸಿ ಊರಿನಲ್ಲಿ ಒಂದು ಆಸ್ಪತ್ರೆಯನ್ನು ನಿರ್ಮಿಸಿದರು. ತದನಂತರ ಸೈನ್ಯದೊಡನೆ ಹೊರಟು ಕರೂರಿನಿಂದ ಪುಲಿಕ್ಯಾಟ್‌ಚೇರಿಯವರೆಗೆ ಇರುವ ಪ್ರಾಂತಗಳನ್ನೆಲ್ಲಾ ಸ್ವಾಧೀನಪಡಿಸಿಕೊಂಡರು.

ತದನಂತರ ಕಾಲದಲ್ಲಿ ಎಂದರೆ ೧೭೯೯ ರಲ್ಲಿ ನಾಲ್ಕನೆಯ ಮೈಸೂರು ಯುದ್ಧವನ್ನು ನಡೆಸಿ ಮೈಸೂರು ರಾಜ್ಯವನ್ನು ಸ್ವಾಧೀನಪಡಿಸಿಕೊಂಡು ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಪಟ್ಟವನ್ನು ಕಟ್ಟಿಸಿದರು. ತಿರುಮಲ ರಾಯರು ತಮಗೂ ಮೈಸೂರು ರಾಜ್ಯದ ಮಹಾರಾಣಿಯವರಿಗೂ, ಆದ ಒಪ್ಪಂದದಂತೆ ರಾಜಗೌರವಧನವಾಗಿ ೩೫೦೦೦ ವರಹವನ್ನು ವಿಶ್ರಾಂತಿವೇತನವಾಗಿ ಪಡೆದು ಮದರಾಸಿನಲ್ಲಿ ವಾಸವಾಗಿದ್ದರು. ಶಿಂಗಲಾಚಾರ್ಯರು ತಿರುನಾರಾಯಣ ಪೆರುಮಾಳ್ ಅವರು, ತಿರುಮಲಯ್ಯಂಗಾರ್ಯರು ಮತ್ತು ತಿರುನಾರಾಯಣಯ್ಯಂಗಾರ್ಯರು ಈ ನಾಲ್ವರೂ ಮಂಡಯಂ ಸಮಾಜದ ಬಾರತೀ ಮನೆತನಕ್ಕೆ ಸೇರಿದವರು. ಇವರ ಜೊತೆಯಲ್ಲಿ ಜಟಾವಲ್ಲಭ ಶಿಂಗರಯ್ಯಂಗಾರ್ಯರೂ ಸೇರಿ ಎಲ್ಲರೂ ಮಹಾರಾಜರ ಆಸ್ಥಾನ ಪಂಡಿತರುಗಳಾಗಿದ್ದು, ರಾಜಮನೆತನದ ರಾಜಕಾರ್ಯ ಮತ್ತು ವೈದಿಕ ಲೌಕಿಕ ಕಾರ್ಯಗಳನ್ನು ನೋಡುತ್ತಿದ್ದರು. ಪ್ರಧಾನ ತಿರುಮಲಯ್ಯಂಗಾರ್ಯರು ಮಹಾರಾಜರಿಗೆ ಮೇಲಿನವರ ಮೂಲಕ ರಾಜ್ಯಾಡಳಿತ ಸಲಹೆಯನ್ನು ತಿಳಿಸುತ್ತಾ ಮದರಾಸಿನಲ್ಲಿ ೧೮೧೫ರಲ್ಲಿ ಪರಮಪದಿಸಿದರು. ಆ ಸಮಯದಲ್ಲಿ ಮಿಲಿಟರಿ ಮತ್ತು ರಾಜಮರ್ಯಾದೆಗಳು ಸಲ್ಲಿಸಲ್ಪಟ್ಟು, ದಹನವಾದ ಸ್ಥಳದಲ್ಲಿ ಅವರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜ್ಞಾಪಕಾರ್ಥವಾಗಿ ಬೃಂದಾವನವನ್ನೂ, ಮಂಟಪವನ್ನೂ ನಿರ್ಮಿಸಿರುವುದನ್ನು ಈಗಲೂ ಕಾಣಬಹುದು. ಆ ಮಂಟಪದಲ್ಲಿ ಈ ರೀತಿ ಶಿಲಾ ಶಾಸನವಿರುವುದು.

ಧಾತು ವರ್ಷ ವೈಯಾಶಿ ೨ ತಿರುಘುಲ್ಯೆ ಆನಂದಾಪಿಳ್ಳೈ ತಿರುಮಲಾಚಾರ್ಯ್ನರು ಎಂದಿರುವುದು.

ಈ ರೀತಿ ದೇಶಪ್ರೇಮ, ರಾಜಭಕ್ತಿಯಲ್ಲಿ ವೀರಪಾತ್ರ ವಹಿಸಿದ ಶ್ರೀಮಂತರುಗಳಾದ ಪ್ರಧಾನಿ ತಿರುಮಲರಾಯರೂ, ಶ್ರೀನಾರಾಯಣರಾಯರೂ ರಾಜ ರಾಜ್ಯಾಂಗ ಮತ್ತು ಸಮುದಾಯದಲ್ಲಿ ಪ್ರಖ್ಯಾತರಾಗಿ ಚಿರಸ್ಮರಣೀಯರಾಗಿರುವರು.

ಪ್ರಧಾನಿ ತಿರುಮಲರಾಯರು, ಶ್ರೀ ನಾರಾಯಣರಾಯರು ಮಹಾರಾಣಿ ಲಕ್ಷ್ಮಮ್ಮಣ್ಣಿ , ಕುಂಪಣಿಯವರು ಮತ್ತು ಶ್ರೀಕೃಷ್ಣರಾಜ ಒಡೆಯರು ಮೈಸೂರು ರಾಜ್ಯ ಸ್ವತಂತ್ರವಾದುದರ ವಿಚಾರವಾಗಿ ನಡೆದ ಕೌಲು, ಕರಾರು ಮತ್ತು ಕಾಗದಪತ್ರಗಳ ವ್ಯವಹಾರವು ಆಂಗ್ಲಭಾಷೆಯಲ್ಲಿ ವಿವರವಾಗಿ ಬರೆದಿರುವುದನ್ನು ಓದಬಹುದು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS



CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Sri Maharani Laxmammanny & The Mysore Pradhans

Waged War in the year 1792 and 1799 to Recover their Kingdom

There were several Sri Vaishnava families settled in Karnataka before Sri Ramanuja's arrival to Karnataka. Among them one Ananthachar, well-known reputed scholar in the history of Ramanuja in Mysore from whom the Mysore Pradhans trace their descent, was born in the year 1053 A.D. in the village of Kirangur situated at a distance of about tow miles to the north-east of the present site of Seringapatam. In the year 1117 A.D. out of respect for Vaishnavism, the famous ballala King Vishnuvardhana Raya of Yadavapuri, the modern Tondanur in the Seringapatam Taluk, conferred upon Ananthachar and other Brahmins a Jahgir of eight villages (Ashtagram) on the banks of the Cauvery. The defeat of the King and the demolition of the Ballala capital of Dwarasamudra in the year 1326 led to the Jahgir bestowed by king Vishnuvardhana passing into the hands of the Poligars of the neighbourhood.

About 1380, the Emperor of Vijayanagar sent Srirangroy, a relation of his, to Seringapatam to rule there as Viceroy over the Karnataka Province, and conferred twenty one Villages in the Mandya and Attikuppa Taluks as Jahgir on Govindaraja Wodeyar, a descendant of Ananthachar. The Wodeyar, in course of time, bacame the Guru of the Viceroy. After Govindaraja Wodeyar, his brother Tirumalayyangarayya succeeded him as Guru to the Viceroy. In the year 1420 the Viceroy Tirumalroy, grandson of Srirangaroy, was forced to abandon his territories on account of war and internal dissension. The Guru Tirumalayyangarayya then exerted his best to protect the interests of Vijayanagar as far as possible, but finding the personal safety of this Viceroy seriously threatenned in the then condition of affarirs, he induced the neighbouring Wodeyar of Mysore to accept the Viceroyalty on certain conditions, and placed him in possession of Seringapatam in the year Plava, in Chaitra Sudha, corresponding to 1421 A.D.

The Guru then went to Vijayanagar with the returning Viceroy Tirumalroy, got the nomination of the Mysore Wodeyar

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ratified by the Maharajah of Vijayanagar, returned to Seringapatam, and handed over the khilats and sannad of the Maharaja to the Wodeyar. The Wodeyar in appreciation of these important services of Tirumalayyangarayya conferred upon him several Jahgirs. In course of time, owing to the decay of the power of vijayanagar, the Jahgirs granted to Govindaraja Wodeyar and Tirumalayyangarayya came to be owned and occupied by others.

In the year 1516, Govindaraja Wodeyar Junior, a descendant of Govinda raja Wodeyar Senior, became the Guru of Krishnaroy, the Maharaja of Vijayanagar, and obtained from him a Jahgir of five villages including Mandya.

In the year 1608, Raja Wodeyar, the ruler of Mysore, occupied the Fort of Seringapatam and found it expedient to obtain the sanction of the Maharaja of Vijayanagar to continue to hold the fortress. Tirumalayyangar junior, a descendent of Govindaraja Wodeyar procured for him this sanction; and in appreciation of this dervice, the Raja conferred upon him a Jahgir and appointed him his Pradhan, who is a sort of Counsellor intended to be near the person of the Raja to help him in the general conduct of the affairs of Government.

In the year 1659, Kantirava Narasaraja Wodeyar, the Ruler of Mysore, died leaving no issue. A Council of the officers of the State was held at Seringapatam to nominate a successor Pradhan Appajayya, Alias Govindarajayya, son of Pradhan Tirumalayyangar, supported the cause of Doddadevaraja Wodeyar, cousin to the preceding Rajah, and used his influence so as to have his nomination confirmed. From this time onward, the Pradhans grew in influence and power even more than before.

In the year 1672, Doddadevaraja Wodeyar was succeeded by his son Chikkadevaraja Wodeyar. When his Minister (Sarvadhikari) Vishalaksha Pandit was murdered by the Lingayats in the year 1686, the Raja offered the Ministership to Pradhan Appajayya. But the Pradhan thought it fit to recommend his dauthter's son Tirumalayyangar to the post, and got him appointed. Tirumalayyangar was a man of rare talents and ability, and during his time the kingdom of Mysore reached the summit of its prosperity under the Wodeyars. The king while on his death-bed entrusted his infant son Kantirava Narasaraja Wodeyar who was deaf and

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

dimb, to the care of his Minister Tirumalayyangar and the Pradhan Appajayya, and breathed his last in 1704. The Pradhan and the Minister placed Kantirava Narasaraja Wodeyar on the throne and administered the State in his name for a period of five years, by which time they both died.

In the year 1759, Puttammanny, the wofe of Immadi Krishnaraja Wodeyar, died. Pradhan Govindarajayya, the gradson of Pradhan Appajayya, arranged the King's marriage with Lakshmammanny and Devajammanny, which marriages were duly celebrated.

In the year 1762, Jyeshta Bahula, 3rd of Vishu, Hyder, and adventurer of low rank and great ability, who was rising by degrees in power and influence in the State, completely usurped his master's kingdom.

In 1765, the reputed wealth of the family of Pradhan Govindarajayya attracted the attention of the usurper. Hyder sent his men to plunder the Pradhan family of its wealth. The Pradhan, who had it all secretly buried, refused to give it up. In the persecution that followed, the Pradhan was strangled to death. He left behind him two sons, Tirumal Row and Narayan Row.

Shortly after this, Immadi Krishnaraja Wodeyar, the rightful king, also bearthed his last. Maharanee Lakshmammanny, who was a very able and intelligent lasy, could not reconcile her self to the fallen condition of the Rajahs and the usurpation of power by Hyder. She, in union with her friends and adherents like the Pradhans, set about concerting plans to get rid of the Mahomedan unsurper and regain the kingdom for her family. A secret embassy was sent to Peshwa Madhava Rao in 1770 for this purpose. Hyder, suspecting Pradhan Tirumal Row to have been privy to it, arrested him and placed him in confinement. When Hyder led an expedition to bellary and Gooty in 1775, he took Triumal Row with him, lest the Row whould do any mischief to his cause if left at Srirangapatnam. Tirumal row was then sent to Kadapa as Hyder's Resident at the Court of Abdul Halim, the Nabob of that place.

In 1776 Maharanee Lakshmammanny again attempted to cause the overthrow of the power of Hyder, and this time she turned to seek the assistance of the English to carry pout her

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

purpose. As early as 1760, she sent Rayadurg Srinivasa Rao on an embassy to Lord Pigot, Governor of Madras, requesting him to aid her in getting rid of Hyder and the Governor then promised his assistance. But owing to the machinations of Mahomed Ali, the Nabob of the Karnatic, the English did nothing further in the matter. The Maharanee, learning that Lord Pigot had again returned to Madras as Governor and had restored Tanjore to its native ruler, deputed her Pradhans Tirumal Row and Narayana Row on an embassy to the English Government for the porpose of procuring their help. In return for their services the Pradhans were most solemnly promised the recoupment of all their expenses, and in case of success in their mission, "a commission of ten percent on the revenues of the restored destricts, and the Office of Pradhans or Minister" (vide page 399, Vol.I. of the revised edition of 1897 of "Mysore. A Gazetteer" by Mr. B.Lewis Rice) in perpetuity. Encouraged by this promise, they embarked on this difficult and dangerous mission and left the kingdom for Madras. On their way they heard the discouraging news that Lord Pigot was then under custody on a false charge of insanity. They however managed to open a communication with him, and learnt that he would be released and restored to his Office as Governor in the course of a year ; meantime he requested them to go to Tanjore, and there await his reinstatement to Office. He also wrote to the Raja of Tanjore recommending the Pradhans to his special care and protection. Hence they went to Tanjore and after a few months were informed to their great disappointment of the death of Lord Pigot at St. Thomas Mount. They communicated to Maharanee Lakshmammanny their failure so far in effecting anything, but being determined to wait for a proper opportunity to negotiate their business with the English, they continued to reside in Tanjore and enlisted the sympathies of the Raja in their behalf.

In 1780 Hyder invaded the Karnatic, and the Second Mysore War commenced. Lord Macartney assumed charge of the Government of Fort St. George on the 22nd June 1781, and sent Mr. John Sulivan as Resident to the Court of Tanjore. Through the influence of the Rajah and the Rev. Schwartz, a celebrated Danish Missionary, the Prachans introduced themselves to Mr Sullivan and through him communicated their business to Lord

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Macartney. They worked so successfully that an engagement was come to between them and Mr. Sullivan, the terms of which were embodied in a treaty dated 18th October, 1782 (vide App. A). They required in addition certain guarantees from the Governor of Madras (Vide App. B), which were accordingly given (vide App. C.). Lord Macartney also wrote a letter to Maharanee Lakshmammanny assuring her of the restoration of her kingdom (vide App. D), in reply to a letter of hers delivered to the Governor by Pradhan Narayan Row.

After the conclusion of the Treaty, in order to guide the English army in its march upon Srirangapatnam through the Gajalhatty pass, the Pradhans collected 300 horses and went with Col. Lang and his army towards Karoor. Karoor was captured on the 2nd April, 1783. Vijayamangalam fell on the 6th April, and Dindigal surrendered on the 4th May. Then Col. Lang gave place to Col. Fullarton, who captured Palghat, Dharapuram, and Coimbatore.

About this time the Pradhans, while trying to get the British army to march on Sringapatnam, had also organised with the help of their friends there a conspiracy which had for its object the overthrow of Tippu's Government. Subraj Urs, assisted by Narsing Row, directed the conspiracy in Sringapatnam, and with the aid of 3000 Jetties, Mahrattas and others who were for the Rajah's cause, it was arranged that they should occupy the Fort, seize the treasury and capture and imprison every Mahomedan. Anche Shamaiah undertook to destroy Tippu and his men who were at Mangalore. A certain night in the early part of August was fixed for raising the standard of revolt. That night, just while the conspirators were getting ready for the attack, Syed Mahomed Khan, the Killedar of Sringapatnam, who was appraised of the fact, arrested Subraj Urs and several others and put them to death.

The Killedar at once reported everything to Tippu. Tippu had also in the meantime been informed of the open alliance and active service of Tirumal Row with the English army. He therefore ordered the arrest and imprisonment of all the relations of Tirumal Row and of Subraj Urs, including men, women and children, to the extent of about 700 families. They were chained with heavy irons and thrust into the dungeons of Sringapatnam. Pradhan

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

Narayan Row was also captured and imprisoned. But he soon managed to escape. Tippu, on his return to the capital, ordered a wholesale massacre of these 700 families and had all of them mercilessly put to death. He also confiscated the Jahgirs and other properties of the Pradhans and their relations.

The english were obliged to make peace with Tippu, and the Treaty of Mangalore was concluded, on the 11th March 1784. Regretting such a termination of the war, Lord Macartney and Mr. Sulivan, however,promised their support to the cause of the Pradhans when a more convenient opportunity presented itself. The Pradhans retired to Tanjore to wait and to watch the course of events. The English conferred a pension of twenty pagodas per mensem upon the Pradhans in conformity with the twelth article of their Treaty

of 1782. Mr. Huddlestone, who succeded Mr. Sullivan as Resident in the Court of Tanjore, considered the pension quite inadequate, and placed on record his regret for his inability to get it increased (vide App.E)

At Tanjore, Tippu tried to capture Tirumal Row clandestinely. Tirumal Rao secretly fled to Travancore, and sought and received protection at the hands of the king there. After a stay of two years he returned to Tanjore and lived with his brother

In 1789 Tippu invaded the Kingdom of Travancore, a state in alliance with the English, and thus broke the terms of the peace as agreed to in the Treaty of Mangalore. The English prepared for war against Tippu. The Pradhans saw their opportunity again. They offered their services to the English in the campaign provided the latter agreed to restore the Kingdom to the line of the legitimate Rajahs of Mysore in the event of Tippu's defeat. They got the Rajahs of Tanjore and Travancore to recommend their cause to the English. Genl. Meadows, whose sympathy in the cause of the Pradhans had been enlisted by Lord Macartney and other English Officers, arrived at Madras and assumed charge of the Officers of the Governor and Commander-in-chief on the 20th February, 1790. The Pradhans having learnt that the new Governor made enquiries of their where abouts Pradhan Narayana Row paid him a visit on behalf of the Mysore Maharanee. The Governor then went in company with Narayan Row to Tanjore.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

